# ವಿಪ್ರನುಡಿ

ಸ್ವಾವಲಂಬನೆ–ಸಂಘಟನೆ–ಸಂಸ್ಕಾರ

ಸಂಪುಟ–34, ಶ್ರೀ ಶುಭಕೃತ್‌ನಾಮ ಸಂವತ್ಸರ, ಚೈತ್ರ ಮಾಸ ಏಪ್ರಿಲ್–2022, ಸಂಚಿಕೆ–1, ಪುಟಗಳು–36, ಬೆಲೆ ರೂ.–15/–




ಮಹಾಕುಂಭಾಭಿಷೇಕ ಮಹೋತ್ಸವಕ್ಕೆ ಸರ್ವರಿಗೂ ಆದರದ ಸುಸ್ವಾಗತ




ಶ್ರೀ ಜಯತೀರ್ಥ ವಿದ್ಯಾಪೀಠದ ಶ್ರೀ ಮನ್ನ್ಯಾಯಸುಧಾ ಮಂಗಲ ಮಹೋತ್ಸವ

## ರಾಷ್ಟ್ರಪತಿಗಳಿಂದ ವಿಪ್ರ ಶ್ರೇಷ್ಠರಿಗೆ ಪದ್ಮಶ್ರೀ ಪ್ರದಾನ



ಡಾ. ಸುಬ್ಬಣ್ಣ ಅಯ್ಯಪ್ಪನ್‌ರವರು



ಶ್ರೀ ಹೆಚ್.ಆರ್. ಕೇಶವಮೂರ್ತಿ ರವರು

ಕೇಶವಮೂರ್ತಿರವರನ್ನು ಪ್ರಧಾನಿಗಳು ಅಭಿನಂದಿಸುತ್ತಿರುವುದು






ಶ್ರೀ ವಿದ್ಯಾಶ್ರೀಶತೀರ್ಥ ಶ್ರೀಗಳಿಂದ ಮಹಾಸಭೆಯ ಅಧ್ಯಕ್ಷರಿಗೆ
"ವ್ಯಾಸರಾಜ ಸೇವಾಧುರಂಧರ ಪ್ರಶಸ್ತಿ" ಪ್ರದಾನ



ಹರಿಹರಪುರ ಕುಂಭಾಭಿಷೇಕದ ಮಹೋತ್ಸವದ ಸಿದ್ಧತೆಯಲ್ಲಿ
ಶ್ರೀಗಳಿಂದ ಮಾರ್ಗದರ್ಶನ



ಶ್ರೀಮಜ್ಜಗದ್ಗುರು ಶ್ರೀಕಂಚಿಕಾಮಕೋಟಿ ಪೀಠಾಧೀಶರಾದ
ಶ್ರೀ ಶ್ರೀ ಶಂಕರವಿಜಯೇಂದ್ರ ಮಹಾಸ್ವಾಮಿಗಳಿಂದ
ಮಹಾಸಭಾ ಅಧ್ಯಕ್ಷರಿಗೆ ಆಶೀರ್ವಾದ



ಚಿಕ್ಕಮಗಳೂರು ಬ್ರಾಹ್ಮಣ ಮಹಾಸಭಾ ವತಿಯಿಂದ ಶೃಂಗೇರಿ
ಆಡಳಿತಾಧಿಕಾರಿ ಶ್ರೀ ಗೌರೀಶಂಕರ್‌ರವರಿಂದ ಮಹಾಸಭಾ ಅಧ್ಯಕ್ಷರಿಗೆ ಸನ್ಮಾನ




ಶ್ರೀ ಅಖಿಲ ಹವ್ಯಕ ಮಹಾಸಭಾದಿಂದ ಅಶೋಕಹಾರನಹಳ್ಳಿ ರವರಿಗೆ ಸನ್ಮಾನ




ವಿಪ್ರನುಡಿಯ ಆಂಗ್ಲ ಆವೃತ್ತಿ ಬಿಡುಗಡೆ





ರಾಯಚೂರಿನಲ್ಲಿ ನಡೆದ ಉತ್ತರ ಕರ್ನಾಟಕ ವಿಭಾಗದ ಕಾರ್ಯಕಾರಿಣಿ ಸಭೆ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)
ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ, ಗಾಯತ್ರೀ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-70
ದೂರವಾಣಿ : 26771695, 26770066
E-mail : info@akbms.com
Website : www.akbms.com

ಅಧ್ಯಕ್ಷರು :
ಅಶೋಕ ಹಾರನಹಳ್ಳಿ

ಪ್ರಧಾನ ಕಾರ್ಯದರ್ಶಿ :
ಶ್ರೀಧರಮೂರ್ತಿ ಎಸ್.

ಖಜಾಂಚಿ :
ವೆಂಕಟೇಶ ಎಸ್. ನಾಯಕ್

ಸಂಘಟನಾ ಕಾರ್ಯದರ್ಶಿ :
ಡಾ|| ಬಿ.ಎಸ್. ರಾಘವೇಂದ್ರ ಭಟ್

ವಿಪ್ರನುಡಿ ಪ್ರಕಟಣಾ ಸಮಿತಿ

ಪ್ರಧಾನ ಸಂಪಾದಕರು :
ಡಾ|| ಎಂ.ಕೆ. ಶ್ರೀಧರ್

ಗೌರವ ಸಲಹೆಗಾರರು :
ಎಂ.ಕೆ. ಭಾಸ್ಕರರಾವ್
ಡಾ|| ಎಂ. ಸೂರ್ಯಪ್ರಸಾದ್

ಸಮಿತಿ ಸದಸ್ಯರು :
ಜ್ಯೋತಿಷಿ ವಿ|| ಡಾ|| ಮುದ್ರಾಡಿ ವಾಸುದೇವ ಭಟ್
ನಾರಾಯಣ ಭಟ್ ಹುಳೇಗಾರು
ಪ್ರಭಾಕರ ಕೆ.ಸಿ.
ಕಾರ್ತಿಕ್ ಬಾಪಟ್
ಹೆಚ್.ವಿ. ಸುಬ್ಬರಾವ್

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು-560 050. ದೂ. : 26606061.

# ನಲ್ನುಡಿ

ಸುಖಸ್ಯ ದುಃಖಸ್ಯ ನ ಕೋಪಿದಾತಾ ಪರೋದದಾತೀತಿ ಕುಬುದ್ಧಿರೇಷಾ।
ಅಹಂಕರೋಮೀತಿ ವೃಥಾಭಿಮಾನಃ ಸ್ವಕರ್ಮಸೂತ್ರಗ್ರಥಿತೋಹಿ ಲೋಕಃ ॥ (ಆಧ್ಯಾತ್ಮ ರಾಮಾಯಣ)

'ಸುಖ ಮತ್ತು ದುಃಖವನ್ನು ಯಾರೂ ಕೊಡುವುದಿಲ್ಲ. ಬೇರೆಯವರು ಕೊಡುತ್ತಾರೆ ಎಂಬುದು ಕೆಟ್ಟ ಚಿಂತನೆ. ನಾನೇ ಎಲ್ಲವನ್ನು ಮಾಡುತ್ತೇನೆ ಎಂಬುದು ವ್ಯರ್ಥ ಅಭಿಮಾನವೇ. ಪ್ರತಿಯೊಬ್ಬರೂ ತಮ್ಮ ಹಿಂದಿನಜನ್ಮಗಳ ಕರ್ಮಕ್ಕೆ ಅನುಸಾರವಾಗಿ ಫಲಗಳನ್ನು ಪಡೆಯುತ್ತಾರೆ.

ರಾಮಾಯಣದ ಅರಣ್ಯಕಾಂಡದಲ್ಲಿ ಬರುವ ಅಮೋಘ ನಲ್ನುಡಿಯಿದು. ಬೇಡರ ರಾಜನಾದ ಗುಹನು ಸೀತೆ, ರಾಮ, ಲಕ್ಷ್ಮಣ ಯಾವ ಕಾರಣಕ್ಕೆ ವನವಾಸ ಮಾಡಬೇಕು ಎಂದಾಗ ಲಕ್ಷ್ಮಣನು ಮಂಥರ-ಕೈಕೇಯಿ ಕುತಂತ್ರದಿಂದ ಈ ಪರಿಸ್ಥಿತಿ ಉಂಟಾಯಿತು ಎಂದು ತಿಳಿಸುತ್ತಾನೆ. ಜನರೆಲ್ಲರೂ ಸಾಮಾನ್ಯವಾಗಿ ಬೇರೆ ಯವರಿಂದ ಸುಖವನ್ನು ನಿರೀಕ್ಷಿಸುತ್ತಾರೆ. ಕಷ್ಟ ಬಂದಾಗ ಇತರರನ್ನು, ದೇವರನ್ನು, ವಿಧಿಯನ್ನು ಹಳಿಯುತ್ತಾರೆ. ಇನ್ನು ಕೆಲವರು ಎಲ್ಲ ಕೆಲಸ ಕಾರ್ಯಗಳು ತಮ್ಮಿಂದಲೇ ಆಗುತ್ತಿವೆ ಎಂಬ ಅಭಿಮಾನದಿಂದ ಬೀಗುತ್ತಾರೆ. ಆದರೆ ಈ ಚಿಂತನೆಗಳೇ ಸಾಧುವಾದ್ದಲ್ಲ. ಲಕ್ಷ್ಮಣನ ಅಭಿಪ್ರಾಯದಲ್ಲಿ ನಾವು ಈ ಜನ್ಮದಲ್ಲಿ ಹೊಂದುವ ಸುಖ-ದುಃಖಗಳು, ಲಾಭ-ನಷ್ಟಗಳು ಹಿಂದಿನ ಜನ್ಮದ ಸಂಚಿತ ಕರ್ಮಫಲ, ಅದಕ್ಕೆ ಹಿಂದಿನ ಜನ್ಮಗಳ ಪ್ರಾರಬ್ಧ ಕರ್ಮಫಲ ಮತ್ತು ಮುಂದಿನ ಜನ್ಮದಲ್ಲಿ ಪಡೆಯುವ ಪಾಪ-ಪುಣ್ಯಗಳು ಈ ಜನ್ಮದಲ್ಲಿ ನಾವು ಮಾಡುವ ಅಗಾಮಿ ಕರ್ಮಫಲವೇ. ಪ್ರಾರಬ್ಧ ಹಾಗೂ ಸಂಚಿತ ಕರ್ಮಗಳನ್ನು ಬದಲಾಯಿಸಲು ಸಾಧ್ಯವಿಲ್ಲ. ಪ್ರಾರಬ್ಧ, ಸಂಚಿತ ಕರ್ಮಗಳು, ನೀರು ತುಂಬಿದ, ತೂತಾದ ಮಡಕೆಯಂತೆ. ನಿಧಾನವಾಗಿ ಸೋರಿ ಹೋಗುತ್ತವೆ. ಈ ಜನ್ಮದಲ್ಲಿ ಪುಣ್ಯದ ಕೆಲಸಗಳನ್ನು ಮಾಡಿ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕು. ವೇದವ್ಯಾಸರು ವಿಷ್ಣುಪುರಾಣದಲ್ಲಿ ತಿಳಿಸಿದಂತೆ ಪುಣ್ಯ ಕಾರ್ಯವೆಂದರೆ ಬೇರೆಯವರಿಗೆ ಸಹಾಯ ಮಾಡುವುದು, ಪಾಪಕಾರ್ಯವೆಂದರೆ ಬೇರೆಯವರನ್ನು ಪೀಡಿಸುವುದು (ಪರೋಪಕಾರ ಪುಣ್ಯಾಯ ಪಾಪಾಯ ಪರ ಪೀಡನಮ್ ।). ಆದ್ದರಿಂದ ಕೃಷ್ಣನು ಭಗವದ್ಗೀತೆಯಲ್ಲಿ ವಿವರಿಸಿದಂತೆ ಸಜ್ಜನರು 'ಲೋಕ ಸಂಗ್ರಹ' ಕೆಲಸಗಳನ್ನು ನಿರಂತರವಾಗಿ ಮಾಡುತ್ತಿರಬೇಕು. ಈ ನಲ್ನುಡಿಯಲ್ಲಿ ಭಾರತೀಯ ತತ್ವಶಾಸ್ತ್ರದ ಕರ್ಮ-ಪುನರ್ಜನ್ಮ ಸಿದ್ಧಾಂತಗಳೇ ಸರಳವಾಗಿ ಮೂಡಿ ಬಂದಿವೆ.


## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

-ಸಂಚಾಲಕರು-ಜಾಹೀರಾತು ವಿಭಾಗ

## ವಿಪ್ರನುಡಿಗೆ ಚಂದಾದಾರರಾಗಲು ಮನವಿ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಮುಖವಾಣಿಯಾದ 'ವಿಪ್ರನುಡಿ' ತಮಗೆ ತಲುಪಿದೆ. ಸಂಚಿಕೆ ಇನ್ನಷ್ಟು ಚೆನ್ನಾಗಿ ಮೂಡಿಬರಲು ತಮ್ಮ ಸಲಹೆಗೆ ಸ್ವಾಗತ. ಮುದ್ರಣ ದುಬಾರಿಯಾಗಿರುವ ಈ ಕಾಲದಲ್ಲಿ ಪತ್ರಿಕೆಯನ್ನು ಎಲ್ಲರಿಗೂಈ ತಲುಪಿಸಲು ಕಷ್ಟಸಾಧ್ಯ. ಆದ್ದರಿಂದ ತಾವು 'ವಿಪ್ರನುಡಿ'ಗೆ ಚಂದಾದಾರರಾಗಬೇಕೆಂದು ಸಂಪಾದಕ ಮಂಡಳಿಯ ವಿನಂತಿ. ಮೂರು ವರ್ಷಕ್ಕೆ 500/= ರೂ.ಗಳನ್ನು ನೀಡಿ ವಿಪ್ರನುಡಿ ಸದಸ್ಯರಾಗಬೇಕಾಗಿ ಕೋರಿಕೆ. ಈ ವಿಪ್ರನುಡಿ ಸದಸ್ಯರ ಚಂದಾ ಹಣವನ್ನು ಪ್ರತ್ಯೇಕವಾಗಿ ತೆಗೆದಿಡಲಾಗುತ್ತದೆ. ದಯವಿಟ್ಟು ತಾವು ಹಾಗೂ ತಮ್ಮ ಬಂಧುಗಳು ಶೀಘ್ರವೇ ಚಂದಾದಾರರಾಗಬೇಕೆಂದು ಸಂಪಾದಕ ಮಂಡಲಿ ವಿನಂತಿಸುತ್ತದೆ.

**ಈಗ ನೀವು website ಮೂಲಕ Online ನಲ್ಲಿ ಚಂದಾದಾರರಾಗಬಹುದು.**

# ತಿಂಗಳ ರಾಶಿ ಫಲ

-ಜ್ಯೋತಿಷಿ ವಿ|| ಮುದ್ರಾಡಿ ವಾಸುದೇವ ಭಟ್



**ಮೇಷ ರಾಶಿ** : ರವಿಯನ್ನು ಬಿಟ್ಟು ಉಳಿದವರೆಲ್ಲರೂ ಮೇಷರಾಶಿಗೆ ಕರ್ಮ ಮತ್ತು ಲಾಭದಲ್ಲಿರುವರು. ಹೀಗಾಗಿ ದೊಡ್ಡದೊಡ್ಡ ಕಾರ್ಯಕ್ರಮಗಳನ್ನು ಕೈಗೊಳ್ಳುವಿರಿ. ಇದರಿಂದಾಗಿ ಖರ್ಚು ವೆಚ್ಚಾದಿಗಳಲ್ಲಿ ಅಸಮತೋಲನ ಉಂಟಾದೀತು. ಯಾತ್ರೆಯಿಂದಾಗಿ ಆಯಾಸ, ಅನಾರೋಗ್ಯದ ಬಗ್ಗೆ ಜಾಗ್ರತೆ ಇರುವುದುತ್ತಮ. ಇಷ್ಟಿದ್ದರೂ ಮಾನಸಿಕ ನೆಮ್ಮದಿಯಿಂದ ಇರುವಿರಿ.



**ವೃಷಭ** : 'ಸರ್ವೇಶ್ವರಾಣಾಂ ಧಿಷನೇನುಕೂಲೇ'ಎಂಬಂತೆ ಗುರುವು ಲಾಭದಲ್ಲಿರುವರು. ಆದ್ದರಿಂದ ಮುಟ್ಟಿದ್ದೆಲ್ಲ ಚಿನ್ನವಾಗಲಿರುವುದು. ನಿಂತು ಹೋದ ಕಾರ್ಯಕ್ರಮಗಳೆಲ್ಲ ಪ್ರಾರಂಭವಾಗಲಿರುವುದು. ಆರ್ಥಿಕಾನುಕೂಲ ಉಂಟಾಗಲಿರುವುದು. ಇದರಿಂದ ಮಾನಸಿಕ ನೆಮ್ಮದಿಯೂ ಉಂಟಾಗುವುದು. ಗುರುಹಿರಿಯರ ಆಶೀರ್ವಾದದೊಂದಿಗೆ ಮನೆಯಲ್ಲಿ ಮಂಗಲಕಾರ್ಯಗಳು ಉಂಟಾಗಲಿರುವುದು. ರಾಜಕೀಯದಲ್ಲಿ ಇರುವವರಿಗೆ, ವ್ಯವಹಾರಿಗಳಿಗೆ, ವಿದ್ಯಾರ್ಥಿಗಳಿಗೆ ಅವರವರ ಇಷ್ಟಾರ್ಥ ಸಿದ್ಧಿಸುವುದು. ಆರೋಗ್ಯದ ಬಗ್ಗೆ ಮಾತ್ರ ಎಚ್ಚರವಿರಲಿ.



**ಮಿಥುನ** : ವಿಪರೀತ ಬುದ್ಧಿವಂತರಾದ ನಿಮ್ಮಿಂದ ಎಲ್ಲರಿಗೂ ಅನುಕೂಲವಾಗಲಿರುವುದು. ನೀವು ಮಾತ್ರ ಆರಕ್ಕೇರದೆ ಮೂರಕ್ಕೆ ಇಳಿಯದೆ ಸ್ಥಿತಪ್ರಜ್ಞರಾಗಿರುವಿರಿ. ಆರಂಭದಲ್ಲಿ ಹಿತಶತ್ರುಗಳ ಕಾಟ. ಹಣದ ಸದ್ವ್ಯಯ ಉಂಟಾದೀತು. ತಿಂಗಳಾಂತ್ಯದಲ್ಲಿ ಚಂದ್ರೋದಯವಾಗಲಿರುವುದು. ಅಥವಾ ತುಸು ನೆಮ್ಮದಿ, ನೆಮ್ಮದಿಯಿಂದ ಆರೋಗ್ಯ, ಹಳೆಯ ಮಿತ್ರರ ದರ್ಶನ ಮತ್ತು ಒಮ್ಮೆಲೆ ಎಲ್ಲ ನಿಂತುಹೋದ ಕಾರ್ಯಕಲಾಪಗಳೆಲ್ಲ ಆರಂಭವಾಗಲಿರುವುದು.



**ಕರ್ಕಾಟಕ** : ಮೊದಲೇ ಚರರಾಶಿ, ನೀವು ಕಾಲಿಗೆ ಚಕ್ರ ಕಟ್ಟಿಕೊಂಡು ತಿರುಗಾಡಬೇಕಾದೀತು. ತಿರುಗಾಟ ಕಡಿಮೆ ಮಾಡಿದಲ್ಲಿ ಆರೋಗ್ಯ. ಆರ್ಥಿಕನಾನುಕೂಲ ಉಂಟಾದೀತು. ಏನೇ ಆದರೂ ಅಷ್ಟಮಕ್ಕೆ ಅಂಗಾರಕನ ಪ್ರವೇಶದಿಂದ ಮನೆಯಲ್ಲಿ ಅಶಾಂತಿ, ಅದರಿಂದಾಗಿಯೇ ಅರ್ಥಗಳು ಉಂಟಾಗಲು ಅವಕಾಶ. ಇದರಿಂದ ಬಚಾವಾಗಲು ದೇವಿ, ಆರಾಧನೆ ಮಾಡವುದು. ಇಷ್ಟಾರ್ಥ ಸಿದ್ಧಿಸುವುದು.



**ಸಿಂಹರಾಶಿ** : ಗುರು ಅಷ್ಟಮಕ್ಕೆ ಪ್ರವೇಶ ಮಾಡಲಿರುವನು. ಇದರಿಂದ ನಿಮಗೆ ಅದೃಷ್ಟ ಕೈಕೊಡಬಹುದು. ಮನೆಯಲ್ಲಿ ನೆಮ್ಮದಿ ಹಾಳಾಗಬಹುದು. ವ್ಯರ್ಥಾಲಾಪ ಉಂಟಾಗಬಹುದು. ವ್ಯರ್ಥ ತಿರುಗಾಟ ಉಂಟಾಗಬಹುದು. ಅನಾರೋಗ್ಯ ಕಾಡಬಹುದು. ಅಪವ್ಯಯ ಉಂಟಾಗಬಹುದು. ಕೈಗೊಂಡ ಕಾರ್ಯಕಲಾಪಗಳೆಲ್ಲ ಸ್ಥಗಿತವಾಗಬಹುದು. ರಾಜಕೀಯದವರಿಗೂ, ವ್ಯವಹಾರಿಗಳಿಗೂ, ವಿದ್ಯಾರ್ಥಿಗಳಿಗೂ ಪ್ರತಿಕೂಲವಾಗಬಹುದು. ಸೂರ್ಯಾಷ್ಟೋತ್ತರ ಪಾರಾಯಣ, ಸೂರ್ಯಾರಾಧನೆಯಿಂದ ಇಷ್ಟಾರ್ಥ ಸಿದ್ಧಿಸುವುದು.



**ಕನ್ಯಾರಾಶಿ** : ಇದು ಭಾಗ್ಯ ಇದು ಭಾಗ್ಯವೆಂಬಂತೆ ನಿಮಗಿದು ಭಾಗ್ಯೋದಯ ಕಾಲ. ಅದೃಷ್ಟ ಒಲಿದು ಬಂದ ಸಮಯ. ಏನು ಬೇಕಾದರೂ ಮಾಡಿ ಜಯ ನಿಮಗೆ ಉಂಟಾಗಲಿರುವುದು. ಕೈಗೊಂಡ ಕಾರ್ಯಕಲಾಪಗಳೆಲ್ಲ ನಿಶ್ಚಿಂತೆಯಿಂದ ಸಮಾಪ್ತವಾಗಲಿರುವುದು. ಆನೆ ಹೋದದ್ದೇ ದಾರಿ ಎಂಬಂತೆ ನೀವು ಹೇಳಿದ್ದೇ ಸತ್ಯವಾಗಲಿರುವುದು. ಮುಟ್ಟಿದ್ದು ಚಿನ್ನವಾಗಲಿರುವುದು. ಮನೆಯಲ್ಲಿ ನೆಮ್ಮದಿ, ಮನದನ್ನೆಯ ಸುಖ, ಒಟ್ಟಿಗೆ ಎಲ್ಲ ರಂಗದವರಿಗೂ ಅನುಕೂಲವಾಗಲಿರುವುದು.



**ತುಲಾ ರಾಶಿ:** : ನಿಮ್ಮ ಆಚಾರ, ವಿಚಾರ, ಗುರುಹಿರಿಯರ ಸೇವೆಯೇ ನಿಮ್ಮನ್ನು ಕಾಪಾಡಲಿರುವುದು. ಪರೋಪಕಾರಿಗಳಾದ ನೀವು ಬಂಧು-ಜನಪ್ರಿಯರೂ ಆಗಿರುವಿರಿ. ಸಂಚಾರಶೀಲರಾದ ನೀವು ಆಯಕ್ಕಿಂತ ಹೆಚ್ಚು ವ್ಯಯ ಉಳ್ಳವರಾಗುವಿರಿ. ನಿಮ್ಮ ಎಲ್ಲ ಕಾರ್ಯಕಲಾಪಗಳೂ ಕುಂಟುತ್ತಾ ಸಾಗಲಿರುವುದು. ಸಮಯಕ್ಕೆ ಸರಿಯಾಗಿ ಬಂಧು-ಮಿತ್ರರು ಕೈಕೊಡುವರು. ಜಾಗ್ರತೆ ಇದ್ದಲ್ಲಿ ಅನುಕೂಲವಾಗುವುದು.



**ವೃಶ್ಚಿಕ ರಾಶಿ** : ಗುರುಬಲ ಪ್ರಾರಂಭವಾಗಲಿರುವುದು. ಸಂಶಯಾತ್ಮಾ ವಿನಶ್ಯತಿ ಎಂಬಂತೆ ಸಂಶಯದಿಂದಲೇ ತಾಪತ್ರಯಗಳನ್ನೆಲ್ಲ ಮೈಮೇಲೆ ಎಳೆದುಕೊಳ್ಳುವುದನ್ನು ಬಿಟ್ಟಲ್ಲಿ ಯಶಸ್ಸುಂಟಾಗಲಿರುವುದು. ಮೌನ ಬಂಗಾರ, ಮಾತಿನ ಸಂಯಮವಿದ್ದಲ್ಲಿ ನಿಮ್ಮನ್ನು ಹಿಡಿಯುವವರಿಲ್ಲ. ಮಾತು ಕಡಿಮೆ ಮಾಡಿ, ದುಡಿಮೆ ಹೆಚ್ಚಿಸಿಕೊಂಡಲ್ಲಿ ನೆಮ್ಮದಿಯಾಗಲಿರುವುದು. ಪಂಚಮದ ಗುರು ನೆಮ್ಮದಿಯನ್ನು ತಂದುಕೊಟ್ಟು ಸುಖ, ಶಾಂತಿ, ಸಮೃದ್ಧಿಯನ್ನುಂಟು ಮಾಡಲಿರುವನು. ಗಣಪತಿ ಆರಾಧನೆಯಿಂದ ಇಷ್ಟಾರ್ಥ ಸಿದ್ಧಿಸುವುದು.



**ಧನುರಾಶಿ** :ಮಾತಿನಮಲ್ಲರಾದ ನೀವು ಮಾತಿನಿಂದ ಮನೆ ಹಾಳಾಯಿತು ಎಂಬಂತೆ ಮಾತಿನಿಂದಲೇ ಸಿಕ್ಕಿಬೀಳುವ ಪ್ರಸಂಗಕ್ಕೆ ಜಾಗ್ರತೆ ವಹಿಸಿರಿ. ಆದರೂ ಇನ್ನೊಬ್ಬರಿಗೆ ಜಮೀನು ನಿಂತು ನಷ್ಟಕ್ಕೆ ಸಿಲುಕಿಕೊಳ್ಳುವ ಪ್ರಸಂಗದ ಬಗ್ಗೆ ಜಾಗ್ರತೆಯಿಂದಿರಿ. ಗುರು ಸುಖ ಸ್ಥಾನಕ್ಕೆ ಹೋದರೂ ಸುಖ ಮರೀಚಿಕೆಯಾಗಬಹುದು. ನಿಂತುಹೋದ ಕಾರ್ಯಕಲಾಪಗಳೆಲ್ಲ ಪ್ರಾರಂಭವಾಗಲಿರುವುದು. ರಾಜಕೀಯ ಮುಖಂಡರಿಗೆ, ವೃದ್ಧರಿಗೆ, ವ್ಯವಹಾರಿಗಳಿಗೆ, ವಿದ್ಯಾರ್ಥಿಗಳಿಗೆ ತುಸು ನೆಮ್ಮದಿ ಉಂಟಾಗಲಿರುವುದು.



**ಮಕರ ರಾಶಿ** : ಜನ್ಮ ಶನಿಯಿಂದಾಗಿ ಆರೋಗ್ಯದ ಬಗ್ಗೆ ಎಚ್ಚರಿಕೆಯಿಂದ ಇರುವುದುತ್ತಮ. ವ್ಯರ್ಥ ತಿರುಗಾಟ. ನ್ಯಾಯಾಲಯಕ್ಕೂ ಸುತ್ತುವ ಪ್ರಸಂಗ ಉಂಟಾಗಬಹುದು. ಮಾನಸಿಕ ಅಶಾಂತಿ ಉಂಟಾಗಬಹುದು. ಆರ್ಥಿಕ ನಷ್ಟವಾಗಬಹುದು. ಶತ್ರುಗಳ ಕಾಟ ಉಂಟಾಗಬಹುದು. ಇದ್ದಕ್ಕಿದ್ದಂತೆ ಕೈಗೊಂಡ ಕಾರ್ಯಕಲಾಪಗಳು ನಿಂತುಬಿಡಬಹುದು. ಸ್ವಲ್ಪ ಸರ್ಕಸ್ ಮಾಡುವ ಪರಿಶ್ರಮ ಉಂಟಾಗಬಹುದು. ಇದಕ್ಕೆಲ್ಲ 'ಭಜಗೋವಿಂದಂ' ಎಂಬಂತೆ ವಿಷ್ಣು ಸಹಸ್ರನಾಮ ಪಾರಾಯಣ ಪರಿಹಾರ ಉಂಟಾಗಲಿರುವುದು.



**ಕುಂಭ ರಾಶಿ:** ಆದ್ಯಸಹಃ' ಎಂಬಂತೆ ಹುಟ್ಟಿನಿಂದ ನಿಮ್ಮೆಲ್ಲ ಕೆಲಸಗಳನ್ನೂ ನೀವು ಕಷ್ಟದಿಂದಲೇ ಸಾಧಿಸಿಕೊಂಡವರು. ಸುಲಭದಲ್ಲಿ ಯಾವ ಕೆಲಸವೂ ನಿಮಗೆ ಆಗಿರಲಿಕ್ಕಿಲ್ಲ, ಶ್ರಮಜೀವಿಗಳಾದ ನೀಮ್ಮ ರಾಶಿಗೆ ಕುಜನ ಪ್ರವೇಶದಿಂದ ವಿಚಲಿತರಾಗಬೇಕಾಗಿಲ್ಲ. ನಿಮ್ಮದು ಕಾಯಕವೇ ಕೈಲಾಸ ಎನ್ನುವ ತತ್ವ. ಆದರೂ ವ್ಯರ್ಥ ತಿರುಗಾಟ, ಆಯಾಸ, ಅನಗತ್ಯ ಖರ್ಚು ವೆಚ್ಚಗಳಿಂದ ತುಸು ನೆಮ್ಮದಿಗೆ ಭಂಗ ಒದಗಬಹುದು. ಶ್ರೀನಿವಾಸ ದೇವರ ಆರಾಧನೆಯಿಂದ ಸುಖ, ಶಾಂತಿ, ಸಂಪದಭಿವೃದ್ಧಿಯಾಗಲಿರುವುದು.



**ಮೀನರಾಶಿ** : ಗುರುಬಲವಿದೆ. ಯಾವುದಕ್ಕೂ ಚಿಂತೆಪಡುವ ಅವಶ್ಯಕತೆಯಿಲ್ಲ. ಒಳ್ಳೆಯ ಕೆಲಸಕ್ಕೆ ಸದ್ವ್ಯಯ ಆಗಲಿರುವುದು. ಗುರುಹಿರಿಯರ ಆಶೀರ್ವಾದ ಫಲ ಬರಲಿರುವುದು. ನಿಂತು ಹೋದ ಕಾರ್ಯಕಲಾಪಗಳು ಪ್ರಾರಂಭವಾಗಲಿರುವುದು. ನೆಮ್ಮದಿಯ ಜೀವನ ಎಲ್ಲ ರಂಗದವರಿಗೂ ಉಂಟಾಗಲಿರುವುದು. ಆರೋಗ್ಯದ ಬಗ್ಗೆ ಜಾಗ್ರತೆ ಇರುವುದುತ್ತಮ. ಎಲ್ಲ ರಾಶಿಯವರಿಗೂ ನವಗ್ರಹಗಳಿಗೆ ಅನುಗ್ರಹ ಸದಾ ಇರಲಿ, ಎಲ್ಲರಿಗೂ ಶುಭವಾಗಲಿ.

**ಸರ್ವೇಜನಾಃ ಸುಖಿನೋಭವಂತು, ಶುಭಮಸ್ತು.**

# ಅಧ್ಯಕ್ಷರ ನುಡಿ



ಆತ್ಮೀಯ ವಿಪ್ರಬಂಧುಗಳೇ,

ನಿಮ್ಮೆಲ್ಲರಿಗೂ ಯಗಾದಿ ಹಬ್ಬದ ಶುಭಾಶಯುಗಳು, ಪ್ಲವನಾಮ ಸಂವತ್ಸರವು ಕಳೆದು ಶುಭಕೃತ್ ಸಂವತ್ಸರವನ್ನು ಅಪಾರವಾದ ಉತ್ಸಾಹ ಮತ್ತು ನಿರೀಕ್ಷೆಗಳ ಮೂಲಕ ಬರಮಾಡಿ ಕೊಂಡಿದ್ದೇವೆ. ಕಳೆದೆರೆಡು ವರುಷಗಳಿಗೆ ಹೋಲಿಸಿದರೆ ಈ ಬಾರಿ ಯುಗಾದಿಯ ಸಂಭ್ರಮ ಹೆಚ್ಚು ಕಳೆಕಟ್ಟಿದೆ. ಹಿಂದೂಗಳು ಆಚರಿಸುವ ಹೊಸ ಮೂರು ದಿನವಾದ ಯುಗಾದಿಯ ದಿನವನ್ನು ಧಾರ್ಮಿಕ ದಿನವನ್ನಾಗಿ ವಿಶೇಷವಾಗಿ ಆಚರಿಸುವಂತೆ ಧಾರ್ಮಿಕ ದತ್ತಿ ಇಲಾಖೆಯು ಆದೇಶ ಹೊರಡಿಸಿರುವುದು ನಿಜಕ್ಕೂ ಸ್ವಾಗತಾರ್ಹ.

**"ಶತಾಯುರ್ವಜ್ರದೇಹಾಯ ಸರ್ವಾರಿಷ್ಟವಿನಾಶಯ ನಿಂಬಕಂದಳ ಭಕ್ಷಣಂ"** ಈ ಶ್ಲೋಕವನ್ನು ಬೇವು-ಬೆಲ್ಲ ಸೇವಿಸುವಾಗ ಹೇಳಿಕೊಳ್ಳ ಬೇಕೆಂಬ ಮಾತನ್ನು ಶಾಸ್ತ್ರಗಳಲ್ಲಿ ಉಲ್ಲೇಖಿಸಲಾಗಿದೆ. ಬೇವು-ಬೆಲ್ಲ ಸ್ವೀಕರಿಸಿದರೆ ಶರೀರ ವಜ್ರಕಾಯವಾಗುತ್ತದೆಂದು ಹಾಗೂ ಸಕಲಾರಿಷ್ಟ ನಿವಾರಣೆಯಾಗುತ್ತದೆಂದೂ ಆಯುರ್ವೇದ ವೈದ್ಯ ಪದ್ಧತಿಯಿಂದ ನಾವು ಮನಗೊಂಡಿದ್ದೇವೆ. ಆದರೆ ಬೇವು-ಬೆಲ್ಲ ಸೇವನೆಯ ಹಿಂದಿನ ಇನ್ನೊಂದು ಅರ್ಥವನ್ನು ನಾವು ಕಂಡುಕೊಳ್ಳಬೇಕು. ಅದೇನೆಂದರೆ ಜೀವನದಲ್ಲಿ ಎದುರಾಗುವ ಸುಖ-ದುಃಖವನ್ನು ನೋವು-ನಲಿವನ್ನು ಸಮರ್ಪಕವಾಗಿ ಸ್ವೀಕರಿಸಬೇಕೆಂಬುದು ಕೂಡ, ಇದು ಕೇವಲ ನಮ್ಮ ವೈಯುಕ್ತಿಕ ಜೀವನದಲ್ಲಷ್ಟೇ ಅಲ್ಲ ಸಂಘಟನೆಗೂ ಹಾಗೂ ಸಂಘ ಸಂಸ್ಥೆಗಳಿಗೂ ಅನ್ವಯಿಸುತ್ತದೆ. ಸಂಘಟನೆಗಳಲ್ಲೂ ಕೂಡ ಆಗಾಗ್ಗೆ ಭಿನ್ನಾಭಿಪ್ರಾಯಗಳು ಬರುತ್ತವೆ. ಆದರೆ ಅವೆಲ್ಲವನ್ನು ಕೇವಲ ಅಭಿಪ್ರಾಯ ಭೇದದ ಪರಿಧಿಯಲ್ಲಿ ನೋಡಬೇಕೇ ವಿನಃ ಈ ಭಿನ್ನ ಅಭಿಪ್ರಾಯಗಳು ಸಂಘಟನೆಯ ತೊಡಕಿಗೆ ಕಾರಣವಾಗಬಾರದು. ನಾವುಗಳು ಸ್ವಲ್ಪ ಮೈಮರೆತರೂ ಅಪಾರ ಬೆಲೆಯನ್ನು ತೆತ್ತಬೇಕಾಗುತ್ತದೆ. ಇದೆಲ್ಲದಕ್ಕೂ ತಾಜಾ ಉದಾಹರಣೆ ಎಂದರೆ 1990ರಲ್ಲಿ ಕಾಶ್ಮೀರದಲ್ಲಿ ನಡೆದ ಕಾಶ್ಮೀರಿ ಪಂಡಿತರ ನರಮೇಧ. ಕಾರಣಾಂತರಗಳಿಂದ ಅಂದು ನಡೆದ ಈ ಘಟನೆ ಮುನ್ನೆಲೆಗೆ ಬರಲಿಲ್ಲ. ಆದರೆ ಇಂದು "The Kashmir File" ಎಂಬ ಚಲನಚಿತ್ರದ ಮೂಲಕ ಅನಾವರಣವಾದಾಗ ನಾವುಗಳು ಸುಮ್ಮನೆ ಕೈಕಟ್ಟಿ ಕುಳಿತು ಕೊಳ್ಳದೆ ಈ ಸಂದರ್ಭದಲ್ಲಾದರೂ ಅಂದು ನಡೆದ ನರಮೇಧದ ಬಗ್ಗೆ ಖಂಡಿಸಿ, ಅವರ ಪುನರ್‌ವಸತಿಗಾಗಿ ಸರ್ಕಾರ ಹಾಗೂ ಸ್ವತಂತ್ರ ಭಾರತದ ಸತ್ಪ್ರಜೆಗಳಾಗಿ ನಾವುಗಳು ಏನು ಮಾಡಬಹುದೆಂದು ಪ್ರಶ್ನಿಸಿಕೊಳ್ಳಬೇಕು. ಮತ್ತು ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಬೇಕು, ಏಕೆಂದರೆ ಜಾಗತೀಕರಣದ ಹಿನ್ನೆಲೆಯಲ್ಲಿ ಪ್ರಪಂಚದ ಯಾವುದೂ ಮೂಲೆಯಲ್ಲಾದ ಘಟನೆಗಳು ನಮ್ಮ ಮೇಲೆ ಪರಿಣಾಮ ಬೀರದು ಎಂದುಕೊಳ್ಳುವಂತಿಲ್ಲ. ಸಂಘಟನೆಯ ವಿಷಯ ಬಂದಾಗ ಈ ವಿಷಯವನ್ನು ನಿಮ್ಮೊಡನೆ ಹಂಚಿಕೊಳ್ಳಬೇಕೆನಿಸಿತು. ಏಕೆಂದರೆ ಯಾವುದೇ ಕಷ್ಟಕೋಟಲೆಗಳಿರಲಿ, ಸವಾಲು ಗಳಿರಲಿ ಸಂಘಟನೆಯ ಮೂಲಕ ಎದುರಿಸಿದರೆ ಅವುಗಳಿಗೆ ಉಪಾಯಗಳನ್ನು ಸುಲಭವಾಗಿ ಕಂಡುಹಿಡಿಯಬಹುದು.

ಇತ್ತೀಚೆಗೆ ರಾಯಚೂರಿನಲ್ಲಿ ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳ ರಾಜ್ಯ ಕಾರ್ಯಕಾರಿಣಿ ಸದಸ್ಯರ ಸಭೆ ಅತ್ಯಂತ ಯಶಸ್ವಿಯಾಗಿ ನಡೆಯಿತು. ಸಭೆಯಲ್ಲಿ, ಸಂಘಟನೆ ಹಾಗೂ ಆರ್ಥಿಕವಾಗಿ ಹಿಂದುಳಿದ ವಿಪ್ರಬಾಂಧವರ ಸಹಾಯಕ್ಕಾಗಿ ಹಲವು ಯೋಜನೆಗಳ ಚರ್ಚೆಯು ನಡೆಯಿತು. ಈ ನಿಟ್ಟಿನಲ್ಲಿ ಮಹಾಸಭಾ ಅತೀ ಶೀಘ್ರವಾಗಿ ಈ ಹಿಂದೆ ನಿಂತು ಹೋಗಿದ್ದ ಕೆಲವು ಯೋಜನೆಗೆ ಮರುಚಾಲನೆ ನೀಡಲಿದೆ ಎಂದು ನಿಮ್ಮೊಡನೆ ಹಂಚಿಕೊಳ್ಳಲು ಅತ್ಯಂತ ಸಂತೋಷವಾಗುತ್ತಿದೆ.

ಈ ಹಿಂದೆ ವಿಪ್ರನುಡಿಯ ಇಂಗ್ಲಿಷ್ ಅವತರಣಿಕೆಯ ಬಗ್ಗೆ ನಿಮ್ಮೊಂದಿಗೆ ಪ್ರಸ್ತಾಪಿಸಿದ್ದೆ. ಇದೀಗ ವಿಪ್ರನುಡಿಯ ಇಂಗ್ಲಿಷ್ ಜರ್ನಲ್ ಕೂಡ ಬಿಡುಗಡೆ ಹೊಂದಿದೆ ಹಾಗೂ ಹಿಂದೆ ತಿಳಿಸಿದಂತೆ "ಇ-ಪ್ರತಿ" ಯ ರೂಪದಲ್ಲಿ "akbms.com" website ನಲ್ಲಿ ಎಲ್ಲರಿಗೂ ಲಭ್ಯವಾಗಲಿದೆ ಎಂದು ತಿಳಿಸಲು ಅತ್ಯಂತ ಸಂತೋಷವಾಗುತ್ತಿದೆ.

ಕರ್ನಾಟಕದಾದ್ಯಂತ ಸದಸ್ಯತ್ವ ಅಭಿಯಾನ ಅತ್ಯಂತ ಯಶಸ್ವಿಯಾಗಿ ನಡೆಯುತ್ತಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ಅದರಲ್ಲೂ ಹೆಚ್ಚು ವೆಬ್‌ಸೈಟ್ ಮೂಲಕ ಸದಸ್ಯತ್ವ ನೋಂದಣಿ ಹೆಚ್ಚಾಗುತ್ತಿರುವುದು ಉತ್ತಮ ಬೆಳವಣಿಗೆಯೇ ಸರಿ. ಇದುವರೆಗೂ ನೀವು ಮಹಾಸಭೆಯ ವೆಬ್‌ಸೈಟ್ ಗೆ ಭೇಟಿಕೊಟ್ಟಿಲ್ಲವಾದರೆ, ಈಗ ಮಹಾಸಭೆಯ ವೆಬ್‌ಸೈಟಿಗೆ ಭೇಟಿಕೊಟ್ಟು ಆಗುತ್ತಿರುವ ನಾನಾ ಬೆಳವಣಿಗೆಗಳ ಬಗ್ಗೆ ಗಮನಹರಿಸಬೇಕೆಂದು ನಿಮ್ಮಲ್ಲಿ ಕೇಳಿ ಕೊಳ್ಳುತ್ತಿದ್ದೇನೆ. ಆ ಮೂಲಕ ಮಹಾಸಭಾದ ಆಗುಹೋಗುಗಳನ್ನು ನಿರಂತರವಾಗಿ ನಿಮ್ಮಲ್ಲರಿಗೂ ಪ್ರಸ್ತುತಪಡಿಸುವುದು ಮಹಾಸಭಾದ ಉದ್ದೇಶ. ಮತ್ತೊಮ್ಮೆ ಹೊಸ ವರುಷ ನಿಮ್ಮೆಲ್ಲರ ಬಾಳಲ್ಲಿ ಹೊಸ ಚೈತನ್ಯವನ್ನು ಮೂಡಿಸಲಿ ಎಂದು ಆ ಪರಮಾತ್ಮನಲ್ಲಿ ಬೇಡುತ್ತಾ ಮುಂದಿನ ಸಂಚಿಕೆಯಲ್ಲಿ ಮತ್ತಷ್ಟು ವಿವರಗಳೊಂದಿಗೆ ಭೇಟಿಯಾಗೋಣ.

**ಸರ್ವೇಜನಾಃ ಸುಖಿನೋಭವಂತು,**

**-ಅಶೋಕ ಹಾರನಹಳ್ಳಿ**

# ಸಂಪಾದಕೀಯ

ಆತ್ಮೀಯ ವಿಪ್ರಬಂಧುಗಳೇ,

ಎಲ್ಲರಿಗೂ ನೂತನ ಶುಭಕೃತ್ ಯುಗಾದಿಯ ಹಾರ್ದಿಕ ಶುಭಾಶಯಗಳು. ಈ ಸಂವತ್ಸರವು ನಮ್ಮ ನಾಡಿನ ಜನತೆಗೆ ಸಂತೋಷ, ನೆಮ್ಮದಿ, ಸಮೃದ್ಧಿಗಳನ್ನು ತರಲಿ ಎಂದು ಹಾರೈಸುತ್ತೇವೆ. ಮಹಾಸಭೆಯ ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರು ಉತ್ಸಾಹಿ ಯುವ ಪಡೆಯೊಂದಿಗೆ ಕಾರ್ಯಪ್ರವೃತ್ತರಾಗಿದ್ದಾರೆ. ರಾಜ್ಯದಲ್ಲಿ ನಿರಂತರವಾಗಿ ಪ್ರವಾಸ ಮಾಡುತ್ತಿದ್ದಾರೆ. ಒಂದೇ ದಿನದಲ್ಲಿ ರಾಜ್ಯದಲ್ಲಿ ಒಂದಕ್ಕಿಂತ ಹೆಚ್ಚು ಜಿಲ್ಲೆಗಳಲ್ಲಿ ಬ್ರಾಹ್ಮಣ ಮುಖಂಡರು ಏರ್ಪಡಿಸುತ್ತಿರುವ ಸಭೆ-ಸಮಾರಂಭಗಳಲ್ಲಿ ಭಾಗವಹಿಸಿ, ಸಂಘಟನೆ-ಸಹಕಾರ-ಸಂಪನ್ಮೂಲ ಕ್ರೋಢೀಕರಣದ ಬಗ್ಗೆ ವಿಪ್ರರನ್ನು ಹುರಿದುಂಬಿಸಿ, ಸಭೆಯ ಚಟುವಟಿಕೆಗಳಿಗೆ ಕರೆ ನೀಡಿದ್ದಾರೆ. ಎಲ್ಲ ಕಡೆಯೂ ಅಭೂತಪೂರ್ವ ಸ್ವಾಗತ ದೊರೆಯುತ್ತಿದೆ. ಈ ಹೊಸ ವರ್ಷದಲ್ಲಿ, ಹೊಸ ಕಾಲಮಾನದಲ್ಲಿ ವಿನೂತನ ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದಾರೆ. ಅವುಗಳಿಗೆ ತಮ್ಮೆಲ್ಲರ ತನು-ಮನ-ಧನಗಳ ಸಹಾಯ ಅತ್ಯಗತ್ಯ.

ನಮ್ಮ ದೇಶದ ರಾಷ್ಟ್ರೀಯ ಹಬ್ಬವಾದ ಯುಗಾದಿ, ಚೈತ್ರ-ವೈಶಾಖಗಳ ವಸಂತೋತ್ಸವವನ್ನು ಸೂಚಿಸುತ್ತದೆ. 'ಹೊಸ ಚಿಗುರು-ಹಳೇ ಬೇರು ಕೂಡಿರಲು ಮರ ಸೊಗಸು' ಎಂಬಂತೆ ಎಲ್ಲೆಡೆ ಚೇತನ ವಸ್ತುಗಳ ಚೈತನ್ಯವನ್ನು ನಾವು ಕಾಣಬಹುದು. ಈ ಮಾಸದಲ್ಲಿ ಪ್ರಕೃತಿ ಹಾಗೂ ಸಂವತ್ಸರದ ಆರಾಧನೆ ನಡೆಯುತ್ತದೆ. ನಮ್ಮ ಪುರಾಣಗಳ ಒಕ್ಕಣೆಯಂತೆ ಯುಗಾದಿಯು ಸೂರ್ಯನ ಮೊದಲ ಕಿರಣದ ದಿನ, ಚತುರ್ಮುಖ ಬ್ರಹ್ಮ ಸೃಷ್ಟಿ ಆರಂಭಿಸಿದ ದಿನ, ಮಹಾವಿಷ್ಣುವಿನ ಅವತಾರದ ದಿನ, ರಾಜ ಶಾಲಿವಾಹನ ತನ್ನ ವಿಜಯ ಸಂಕೇತವಾಗಿ ಪ್ರಾರಂಭಿಸಿದ ಶಕೆಯ ಪ್ರಥಮ ದಿನ, ಆಯುರ್ವೇದದ ಸಲಹೆಯಂತೆ ಎಲ್ಲರೂ ಎಣ್ಣೆ ಸ್ನಾನ ಮಾಡಿ, ಹೊಸ ಬಟ್ಟೆ ಉಟ್ಟು, ಸುಖ-ದುಃಖಗಳ ಸಂಕೇತವಾದ ಬೇವು-ಬೆಲ್ಲ ಸೇವಿಸಿ, ನೆಂಟರಿಷ್ಟರೊಂದಿಗೆ ಸವಿಭೋಜನ ಮಾಡುವ ದಿನ ಇಡೀ ವರ್ಷ ಭವಿಷ್ಯ ವೈಯುಕ್ತಿಕವಾಗಿ, ಸಾಮಾಜಿಕವಾಗಿ, ದೇಶಮಟ್ಟದಲ್ಲಿ ಹೇಗೆ ಸಂಭವಿಸಬಹುದು ಎಂದು ಕುತೂಹಲ ದಿಂದ ಪಂಚಾಂಗ ಶ್ರವಣ ಮಾಡುವ ದಿನ, ಇದಕ್ಕೆ ಸಂಬಂಧಿಸಿದ ವಿದ್ವತ್‌ಪೂರ್ಣ ಲೇಖನವನ್ನು ವಿದ್ವಾನ್ ಮುದ್ರಾಡಿ ವಾಸುದೇವ್ ಭಟ್ ಅವರು ನೀಡಿದ್ದಾರೆ. ಅಭ್ಯಂಜನದ ಬಗ್ಗೆ ಸಂಸ್ಕೃತ ಶ್ಲೋಕವೊಂದು ಹೀಗಿದೆ.

**ವತ್ಸರಾಜಾ ವಸಂತಾದೌ ಬಲಿರಾಜ್ಯೇತಥೈವ ಚ।**
**ತೈಲಾಭ್ಯಂಗಮ್ ಅಕುರ್ವಾಣಃ ನರಕಂ ಪ್ರತಿಪದ್ಯತೇ ॥**
**ಶತಾಯುರ್ವಜ್ರದೇಹಾಯ ಸರ್ವಸಂಪತ್ಪ್ರದಾಯಚ।**
**ಸರ್ವಾರಿಷ್ಟ ವಿನಾಶಾಯ ನಿಂಬಕಂ ದಲಭಕ್ಷಣಮ್ ॥**

ವಸಂತಮಾಸದ ಯುಗಾದಿ, ದೀಪಾವಳಿ ಸಂದರ್ಭದಲ್ಲಿ ಮಾಡುವ ಅಭ್ಯಂಜನ ಶ್ರೇಷ್ಟವಾದುದು. ಹಾಗೆಯೇ ಯುಗಾದಿಯಲ್ಲಿ ಸೇವಿಸುವ ಬೇವು-ಬೆಲ್ಲ ದೇಹವನ್ನು ವಜ್ರದಂತೆ ಬಲಿಷ್ಠವಾಗಿಸಿ, ಎಲ್ಲ ತೊಂದರೆಗಳನ್ನು ನಿವಾರಿಸಿ, ಸಕಲವಿಧ ಸಂಪತ್ತನ್ನು ನೀಡುತ್ತದೆ.

ಆಕಾಶದಲ್ಲಿ ಮೋಡಗಳ ಸುಳಿವು, ಯಾವಾಗಲೊಮ್ಮೆ ಧರೆಗೆ ಬರುವ ಮಳೆಯ ಸ್ಪರ್ಶಕ್ಕೆ ಮುದಗೊಳ್ಳುವ ಚೇತನ-ಅಚೇತನ ವಸ್ತುಗಳು, ಮರ-ಗಿಡ-ಬಳ್ಳಿಗಳಲ್ಲಿ ಚೆಂದಳಿರು, ಕಂಪು, ಪಂಚಮ ಸ್ವರದಲ್ಲಿ ಚೈತ್ರದ ಆಗಮನವನ್ನು ಸಾರುವ ಕೋಗಿಲೆ, ಪ್ರಕೃತಿಯ ಬಿನ್ನಾಣ, ಯುಗಾದಿ ತಿಂಗಳಿನ ವೈಶಿಷ್ಟ್ಯ, ಕೆಲವು ಸಂಪ್ರದಾಯಗಳ ಪ್ರಕಾರ ಅಂದು ಬ್ರಹ್ಮನಿಗೆ ಪೂಜೆ, ಸ್ತ್ರೀಯರು ಸಡಗರದಿಂದ ಮುಂಜಾನೆಯೇ ಎದ್ದು ಮನೆಯನ್ನು ಒಪ್ಪ-ಓರಣವನ್ನಾಗಿಸಿ, ಸ್ನಾನಾದಿಗಳನ್ನು ಪೂರೈಸಿ, ಹೊಸಬಟ್ಟೆ ಉಟ್ಟು, ಇಷ್ಟದೇವತೆ ಯನ್ನು ಪೂಜಿಸುವ ಸಂಪ್ರದಾಯ - ಶತಮಾನಗಳಿಂದ ಅನೂಚಾನವಾಗಿ ನಡೆದು ಬಂದಿದೆ. ಈ ವರ್ಷ ನಾವು ಮಾಡಲು ಉದ್ದೇಶಿಸಿರುವ ಯೋಜನೆ-ಕಾರ್ಯಗಳನ್ನು ದೇವರ ಮುಂದೆ ವಿವರಿಸಿ, ದೃಢಸಂಕಲ್ಪ ಹೊಂದಲು ಇದೇ ಪ್ರಶಸ್ತ ಸಮಯ. ಭಾರತೀಯರು ಈ ಸಾಧಾರಣ ಆಚರಣೆಗಳ ಜೊತೆಗೆ ಇನ್ನೂ ವೈವಿಧ್ಯಮಯ ಆಚರಣೆಗಳನ್ನು ದೇಶದಾದ್ಯಂತ ವಿಭಿನ್ನ ಹೆಸರಿನಿಂದ ಆಚರಿಸುತ್ತಾರೆ. ಕೇರಳದಲ್ಲಿ ವಿಶು, ಮಹಾರಾಷ್ಟ್ರದಲ್ಲಿ ಗುಡಿಪಡ್ವೆ, ಪಂಜಾಬ್‌ನಲ್ಲಿ ಬೈಶಾಕಿ ಎಂದು ಕರೆಸಿಕೊಳ್ಳಲ್ಪಡುವ ಈ ಯುಗಾದಿ ಭಾರತೀಯರ ಜೀವನ-ಆಹಾರ-ಚಿಂತನೆ-ಪ್ರಕೃತಿಗಳ ಸುಮಧುರ ಬೆಸುಗೆ ಹೊಂದಿದೆ.

ತ್ರೇತಾಯುಗದ ಮಹಾಪುರಷನಾದ, ಭಗವಾನ್ ಮಹಾ ವಿಷ್ಣು ರಾಮನಾಗಿ ಅವತರಿಸಿದ ಮಾಸವಿದು. ರಾಮನಚಾರಿತ್ರ್ಯದ ಬಗ್ಗೆ ಲೇಖನವೊಂದನ್ನು ಸಂಚಿಕೆಯಲ್ಲಿ ಕಾಣಬಹುದು.

ವಂದನೆಗಳೊಂದಿಗೆ, ತಮ್ಮ ವಿಶ್ವಾಸಿ,

**ಪ್ರೊ. ॥ಎಂ.ಕೆ. ಶ್ರೀಧರ್**

**ವಿಪ್ರನುಡಿ ಪತ್ರಿಕೆಗೆ ವರದಿ, ಲೇಖನಗಳನ್ನು ಕಳುಹಿಸುವವರು ಬರಹ, ನುಡಿಯಲ್ಲಿ ಟೈಪ್‌ಮಾಡಿ ಈ ಮೇಲ್ ಮುಖಾಂತರವೇ ಕಳುಹಿಸತಕ್ಕದ್ದು.**
**ಲೇಖನ ವರದಿಗಳನ್ನು ಕಳುಹಿಸಬೇಕಾದ**
**ಇ-ಮೇಲ್ : e mail : vipranudi@gmail.com**

**ವಿಪ್ರನುಡಿ ಮಾಸಪತ್ರಿಕೆಗೆ ರೂ. 500/-**
**ಸಂದಾಯಮಾಡಿ ಚಂದಾದಾರರಾಗಿ**

# ಹರಿಹರಪುರದಲ್ಲಿ ಏಪ್ರಿಲ್ 10 ರಿಂದ ಮಹಾಕುಂಭಾಭಿಷೇಕ




ಆತ್ಮೀಯ ಪದಾಧಿಕಾರಿಗಳೇ, ಕಾರ್ಯಕಾರಿ ಸಮಿತಿ ಸದಸ್ಯರೇ,

ಪವಿತ್ರ ತುಂಗಾನದಿಯ ತೀರದಲ್ಲಿರುವ ಹರಿಹರಪುರವು ಶ್ರೀ ಲಕ್ಷ್ಮೀನರಸಿಂಹಸ್ವಾಮಿಯ ದಿವ್ಯ ಕ್ಷೇತ್ರವಾಗಿದೆ. ಹರಿಹರಪುರ ಶ್ರೀಮಠದ ಪೀಠಾಧಿಪತಿಗಳಾಗಿರುವ ಪರಮಪೂಜ್ಯ ಶ್ರೀ ಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳವರು ಭಗವಂತನ ಪ್ರೇರಣೆಯಂತೆ ಶ್ರೀಕ್ಷೇತ್ರದಲ್ಲಿ ಶ್ರೀ ಶಾರದಾ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯಗಳ ಪುನರ್ ನಿರ್ಮಾಣದ ಮಹತ್ಕಾರ್ಯವನ್ನು ಸುಮಾರು 12 ವರ್ಷಗಳ ಹಿಂದೆ ಆರಂಭಿಸಿ, ಈಗ ಸುಂದರವಾದ ಭವ್ಯವಾದ ಶಿಲಾಮಯ ದೇವಾಲಯವು ನಿರ್ಮಾಣಗೊಂಡಿರುತ್ತದೆ. ಈ ಮಹತ್ಕಾರ್ಯಕ್ಕೆ ಸಮಾಜದ ಕೊಡುಗೈ ದಾನಿಗಳು ಹಾಗೂ ಭಕ್ತಾದಿಗಳು ಉದಾರವಾಗಿ ದೇಣಿಗೆ ನೀಡಿರುತ್ತಾರೆ.

ಬರುವ ಶುಭಕೃತ್ ನಾಮ ಸಂವತ್ಸರದ ಚೈತ್ರ ಶುಕ್ಲ ಚತುರ್ದಶಿಯಂದು (15.04.2022) ಅಗಸ್ತ್ಯ ಮಹರ್ಷಿ ಕರಾರ್ಚಿತ ಶ್ರೀ ಲಕ್ಷ್ಮೀನರಸಿಂಹಸ್ವಾಮಿಗೆ ಮತ್ತು ಜಗದ್ಗುರು ಆದಿಶಂಕರರು ಪ್ರತಿಷ್ಠಾಪಿಸಿರುವ ಶ್ರೀ ಶಾರದಾ ಪರಮೇಶ್ವರೀ ದೇವಿಗೆ "ಮಹಾಕುಂಭಾಭಿಷೇಕ" ವನ್ನು ನೆರವೇರಿಸಬೇಕೆಂದು ಭಗವಂತನ ಪ್ರೇರಣೆಯಂತೆ ಪರಮಪೂಜ್ಯ ಮಹಾಸ್ವಾಮಿಗಳವರು ಸಂಕಲ್ಪಿಸಿರುತ್ತಾರೆ.

ಸಾವಿರಾರು ವರ್ಷಗಳ ಭವ್ಯವಾದ ಇತಿಹಾಸ ಮತ್ತು ಶ್ರೇಷ್ಠವಾದ ಗುರುಪರಂಪರೆಯನ್ನು ಹೊಂದಿರುವ ಈ ಧರ್ಮಪೀಠದ ಮಹಾಕುಂಭಾಭಿಷೇಕ ಮಹೋತ್ಸವವು ಶ್ರದ್ಧಾಭಕ್ತಿ, ಸಡಗರ, ಉತ್ಸಾಹದಿಂದ ನಡೆಯಲಿದ್ದು, ಈ ಐತಿಹಾಸಿಕ ಮಹಾಕುಂಭಾಭಿಷೇಕ ಮಹೋತ್ಸವದಲ್ಲಿ ಪಾಲ್ಗೊಂಡು ಧನ್ಯರಾಗುವ ಅಪೂರ್ವ ಅವಕಾಶವನ್ನು ಭಗವಂತನು ನಮಗೆಲ್ಲರಿಗೂ ಕರುಣಿಸಿರುತ್ತಾನೆ. ಈ ಶುಭ ಸಂದರ್ಭದಲ್ಲಿ ವಿಶೇಷವಾಗಿ ಈ ಕೆಳಕಂಡ ಧಾರ್ಮಿಕ ಕಾರ್ಯಕ್ರಮಗಳನ್ನು ಶ್ರೀಮಠದಲ್ಲಿ ಏರ್ಪಡಿಸಲಾಗಿದೆ.

| | | | |
|---|---|---|---|
| **15.04.22** | **-- ಮಹಾಕುಂಭಾಭಿಷೇಕ** | **18.04.22** | **-- ಸಹಸ್ರ ಚಂಡಿಕಾ ಮಹಾಯಾಗ** |
| **16.04.22** | **-- ಕೋಟಿ ತುಳಸೀ ಅರ್ಚನೆ** | **22.04.22** | **-- ಪೂರ್ಣಾಹುತಿ** |
| **17.04.22** | **-- ಲಕ್ಷ ಮೋದಕ ಗಣಪತಿ ಹೋಮ** | | |

ಈ ಸಂದರ್ಭದಲ್ಲಿ ಶ್ರೀಮಠದಲ್ಲಿ ಜರುಗಲಿರುವ ಆಭೂತಪೂರ್ವ ಕಾರ್ಯಕ್ರಮಗಳಲ್ಲಿ ರಾಜ್ಯದ ಮುಖ್ಯಮಂತ್ರಿಗಳು, ಸಂಸತ್ ಸದಸ್ಯರು, ಶಾಸಕರು ಹಾಗೂ ಗಣ್ಯರು ಭಾಗವಹಿಸಲಿದ್ದಾರೆ.

ಈ ಅಭೂತಪೂರ್ವ ಕಾರ್ಯಕ್ರಮಕ್ಕೆ ನನ್ನನ್ನು ಮಹಾಕುಂಭಾಭಿಷೇಕ ಮಹೋತ್ಸವ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷ ಸ್ಥಾನ ನೀಡಿ ಗೌರವಿಸಲಾಗಿದೆ.

ಈ ಪುಣ್ಯ ಕಾರ್ಯದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಪದಾಧಿಕಾರಿಗಳು, ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು ಸಕುಟುಂಬ ಪರಿವಾರ ಸಮೇತರಾಗಿ "ಮಹಾಕುಂಭಾಭಿಷೇಕ" ದಲ್ಲಿ ಪಾಲ್ಗೊಂಡು, ನಮಗೆ ಸಿಕ್ಕಿರುವ ಪುಣ್ಯ ಕಾರ್ಯದಲ್ಲಿ ಭಾಗಿಗಳಾಗಿ ದೇವಿಯ ಹಾಗೂ ಶ್ರೀ ಶ್ರೀ ಮಹಾಸ್ವಾಮಿಗಳ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇನೆ.

ಧನ್ಯವಾದಗಳೊಂದಿಗೆ,

ನಿಮ್ಮ ವಿಶ್ವಾಸಿ,
ಅಶೋಕ ಹಾರನಹಳ್ಳಿ
ಮಹಾಸಭಾಧ್ಯಕ್ಷರು

### ನವಬೃಂದಾವನದಲ್ಲಿ ವ್ಯಾಸರಾಜತೀರ್ಥರ ಉತ್ತರಾರಾಧನೆ

# ಶ್ರೀ ಅಶೋಕ್ ಹಾರನಹಳ್ಳಿಯವರಿಗೆ "ವ್ಯಾಸರಾಜ ಸೇವಾಧುರಂಧರ ಪ್ರಶಸ್ತಿ" ಗೌರವ

## ಶ್ರೀ ವಿದ್ಯಾಶ್ರೀಶತೀರ್ಥ ಶ್ರೀಗಳಿಂದ ಅನುಗ್ರಹ ಸಂದೇಶ



ಗಂಗಾವತಿ: ತಾಲ್ಲೂಕಿನ ಐತಿಹಾಸಿಕ ನವಬೃಂದಾವನ ಗಡ್ಡೆಯಲ್ಲಿ ಮೂರು ದಿನಗಳ ಕಾಲ ಆಯೋಜಿಸಿದ್ದ ಶ್ರೀ ವ್ಯಾಸರಾಜ ತೀರ್ಥ ಯತಿಗಳ 483ನೇ ಆರಾಧನಾ ಮಹೋತ್ಸವ ಸಂಪನ್ನಗೊಂಡಿದೆ. ಉತ್ತರರಾಧನೆ ಪ್ರಯುಕ್ತ ವಿವಿಧ ಧಾಮಿಕ ಕಾರ್ಯಕ್ರಮಗಳು ನೇರವೇರಿಸಿದ ಸೋಸಲೆ ವ್ಯಾಸರಾಜ ಮಠಧ ಪೀಠಾಧೀಶರಾದ ಶ್ರೀ ವಿದ್ಯಾಶ್ರೀಶತೀರ್ಥ ಶ್ರೀಗಳು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರೂ ಹಾಗೂ ಕರ್ನಾಟಕ ಸರಕಾರದ ಮಾಜಿ ಅಡ್ವೋಕೇಟ್ ಜನರಲ್ ಹಾಗೂ ಉಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ ಶ್ರೀ ಅಶೋಕ್ ಹಾರನಹಳ್ಳಿಯವರು ಸೇರಿದಂತೆ ಇನ್ನಿತರ ಗಣ್ಯರಿಗೆ ಶ್ರೀಮಠದಿಂದ "ವ್ಯಾಸರಾಜ ಸೇವಾಧುರಂಧರ ಪ್ರಶಸ್ತಿ" ನೀಡಿ ಗೌರವಿಸಿ ಅನುಗ್ರಹ ಸಂದೇಶ ನೀಡಿದರು. ಬುಧವಾರ ನಡೆದ ಉತ್ತರಾರಾಧನೆ ನಿಮಿತ್ತ ನವಬೃಂದಾವನದ ಮುನಿತ್ರಯ ಸಭಾ ಮಂಟಪದಲ್ಲಿ ಅಯೋಜಿಸಿದ್ದ ಅವರ ಗ್ರಂಥಗಳು ವಿಶ್ವಮಾನ್ಯವಾಗಿದ್ದು, ಮಹಾನ್ ದಾರ್ಶನಿಕರಾಗಿದ್ದು, ಭಗವಂತನಲ್ಲಿ ಭಕ್ತಿಯನ್ನು ಬಿತ್ತಿದವರು. ಹಲವು ದಾಸವರೇಣ್ಯರಿಗೆ ದೀಕ್ಷೆ ನೀಡಿ, ಎಲ್ಲಾ ವರ್ಗದ ಜನರಿಗೆ ಧಾರ್ಮಿಕ ಪ್ರಜ್ಞೆ ಮೂಡಿಸಿದವರು. ಸಮಾಜದ ಸರ್ವವರ್ಗದ ಜನರಿಗೆ ಅನುಕೂಲ ವಾಗುವ ರೀತಿಯಲ್ಲಿ ಅವರು ಪೀಠವನ್ನು ನಿರ್ವಹಿಸಿದರು. ಬೃಂದಾವನಸ್ಥರಾಗಿ ಇಲ್ಲಿ ನೆಲೆಸಿರುವ ವ್ಯಾಸರಾಜರು ಸಕಲ ಭಕ್ತರಿಗೆ ಆಶೀರ್ವದಿಸುತ್ತಾರೆ ಎಂದರು. ಶ್ರೀ ಅಶೋಕ್ ಹಾರನಹಳ್ಳಿ ಅವರಿಗೆ ಶ್ರೀಮಠದಿಂದ 'ವ್ಯಾಸರಾಜ ಸೇವಾಧುರಂಧರ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಅಶೋಕ್ ಹಾರನಹಳ್ಳಿ ಪ್ರಸಿದ್ಧ ನ್ಯಾಯವಾದಿಗಳಾಗಿ ನಮ್ಮ ಮಠಕ್ಕೆ ಹಲವು ಸೇವೆ ಸಲ್ಲಿಸಿದ್ದಾರೆ. ನಮ್ಮ ಪೀಠಕ್ಕೆ ಬಂದ ತೊಂದರೆಗಳ ನಿವಾರಣೆಗೆ ಕಾನೂನು ಮೂಲಕ ಮಠಕ್ಕೆ ರಕ್ಷಣೆ ನೀಡಿದವರಾಗಿದ್ದಾರೆ. ಶ್ರೀಮಠದ ಭಕ್ತರಾಗಿರುವ ಅವರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯಾಧ್ಯಕ್ಷರಾಗಿ ಜವಾಬ್ದಾರಿ ತೆಗೆದುಕೊಂಡಿರುತ್ತಾರೆ. ಅವರ ಅವಧಿಯಲ್ಲಿ ಬ್ರಾಹ್ಮಣ ಸಮಾಜ ಇನ್ನಷ್ಟು ಸಂಘಟಿತವಾಗಿ ಕೆಲಸ ಮಾಡಲಿ, ಸಮಾಜಕ್ಕೆ ಎದುರಾಗುವ ಸಮಸ್ಯೆಗಳಿಗೆ ಹಾರನಹಳ್ಳಿ ಅವರು ದಿಟ್ಟವಾಗಿ ಎದುರಿಸಿ ಸರ್ವ ಬ್ರಾಹ್ಮಣ ಸಮಾಜದ ಒಳಿತಿಗೆ ಕೆಲಸ ಮಾಡುತ್ತಾರೆ ಎಂಬ ವಿಶ್ವಾಸವದೆ ಎಂದರು. ಬ್ರಾಹ್ಮಣ ಸಮಾಜದ ಮುಖಂಡರಾದ ಡಾ॥ ಎಂ.ಆರ್.ವಿ; ಪ್ರಸಾದ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಖಜಾಂಚಿಗಳಾದ ವೆಂಕಟೇಶ್ ಎಸ್. ನಾಯಕ್, ನಾಗೇಂದ್ರ, ಕಡಪ, ಹನುಮೇಶ್ ಆಚಾರ್ ಮತ್ತಿತರು ಇದ್ದರು. ವ್ಯಾಸರಾಜ ಮಠದ ದಿವಾನರಾದ ಬ್ರಹ್ಮಣ್ಯಾಚಾರ್, ವಿಠೋಭಾಚಾರ್ ಮಧುಸೂದನಾಚಾರ್, ಅನಂತ ಆಚಾರ್, ಪಂಡಿತರಾದ ಹರಿದಾಸ ಭಟ್ಟರು, ಶೇಷಗಿರಿ ಆಚಾರ್, ಅಪ್ಪಣ್ಣಾಚಾರ್ ಮಹಿಷಿ, ಉಮರ್ಜಿ ರಾಮಾಚಾರ್, ವೆಂಕಟಗಿರಿ ಗುರುರಾಜ ದೇಶಪಾಂಡೆ, ರಾಯರ ಮಠದ ವ್ಯವಸ್ಥಾಪಕ ಸುಮಂತ ಕುಲಕರ್ಣಿ ಇದ್ದರು.

**ಕಾಶ್ಮೀರ ಪಂಡಿತರ ದುಃಸ್ಥಿತಿಗೆ ವಿಷಾದ**

ಕೊಪ್ಪಳ : ಸನಾತನ ಹಿಂದು ಧರ್ಮ ರಕ್ಷಣೆ ಬ್ರಾಹ್ಮಣ ಸಮಾಜದ ಪ್ರಮುಖ ಹೊಣೆ, ಇಡೀ ಲೋಕಕ್ಕೆ ಒಳ್ಳೆಯದಾಗಲಿ ಎಂದು ಬಯಸುವ ಬ್ರಾಹ್ಮಣ ಸಮಾಜ ಕೂಡಾ ಸಂಘಟನೆಯ ಶಕ್ತಿ ಹೆಚ್ಚಿಸಿಕೊಳ್ಳಬೇಕು. ಕಾಶ್ಮೀರದಲ್ಲಿ ಪಂಡಿತರಿಗೆ ಆಗಿರುವ ದುಃಸ್ಥಿತಿ ಚಲನಚಿತ್ರದ ಮೂಲಕ ತಿಳಿದುಕೊಳ್ಳಬೇಕಾಗಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿಯವರು ಹೇಳಿದರು.

'ಬ್ರಾಹ್ಮಣ ಸಮಾಜಕ್ಕೆ ಮತ್ತು ಸಕಲ ಸನಾತನ ಸಮಾಜವನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ನಾವೆಲ್ಲ ಸಂಘಟಿತರಾಗಬೇಕು. ಬ್ರಾಹ್ಮಣ ಸಮಾಜಕ್ಕೆ ಆಗುವ ತೊಂದರೆ ನಿವಾರಣೆಗೆ ನಮ್ಮ ಸಂಘಟನೆ ಬಲಗೊಳ್ಳಬೇಕು' ಎಂದರು.

ಸನಾತನ ಧರ್ಮದ ಮೌಲ್ಯಗಳನ್ನು ಉಳಿಸಿಕೊಂಡು ಹೋಗುವಂತೆ ನಮ್ಮ ಮಕ್ಕಳಿಗೆ ಮಾರ್ಗದರ್ಶನ ಮಾಡುವ ಅವಶ್ಯಕತೆ ಇದೆ. ವೈದಿಕ ಮಾರ್ಗವನ್ನು ರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯ. ಜಾತಿ ಆಧಾರದ ಮೇಲೆ ನಮಗೆ ಒಳ್ಳೆಯದಾಗಲಿ ಎಂದು ಬ್ರಾಹ್ಮಣರು ಎಲ್ಲಿಯೂ ಹೇಳುವುದಿಲ್ಲ. ಲೋಕಾಃ ಸಮಸ್ತ ಸುಖಿನೋ ಭವಂತು ಎಂದು ಹೇಳುತ್ತಾರೆ ಎಂದರು. ಸಮಾಜದ ರಾಜ್ಯ ಸಮಿತಿ ಸದಸ್ಯರಾದ ನಾರಾಯಣರಾವ್ ವೈದ್ಯ ಇದ್ದರು.

# ರಾಯಚೂರುನಲ್ಲಿ ಉತ್ತರ ಕರ್ನಾಟಕ ಕಾರ್ಯಕಾರಿಣಿ ಸಭೆ




**ರಾಯಚೂರು** : ದಿನಾಂಕ 09 /03 /2022ರಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉತ್ತರ ಕರ್ನಾಟಕ ಕಾರ್ಯಕಾರಿಣಿ ಸಭೆ ರಾಯಚೂರಿನಲ್ಲಿ ಯಶಸ್ವಿಯಾಗಿ ನಡೆಯಿತು.ಬ್ರಾಹ್ಮಣ ಸಮುದಾಯವನ್ನು ಸುಸ್ಥಿಗೆ ತರುವ ನಿಟ್ಟಿನಲ್ಲಿ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದಾಗಿ ಎಕೆಬಿಎಂಎಸ್ ಅಧ್ಯಕ್ಷ ಅಶೋಕ ಹಾರನಹಳ್ಳಿ ಹೇಳಿದರು. ಬ್ರಾಹ್ಮಣ ಸಮಯದಾಯದಲ್ಲಿ ಆರ್ಥಿಕವಾಗಿ ಹಿಂದುಳಿದವ ರನ್ನು ಮೇಲಕ್ಕೆತ್ತುವುದು ಸೇರಿದಂತೆ ಮಕ್ಕಳ ವಿದ್ಯಾಭ್ಯಾಸಕ್ಕೆ ಯಾವ ರೀತಿ ನೆರವು ಒದಗಿಸಬಹುದು ಎನ್ನುವುದರ ಕುರಿತು ಅವರು ಪ್ರಸ್ತಾಪಿಸಿದರು. ಬ್ರಾಹ್ಮಣ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ವಿದ್ಯಾನಿಧಿ ಸ್ಥಾಪನೆ ಹಾಗು ಬರುವ ದಿನಗಳಲ್ಲಿ ಹಮ್ಮಿಕೊಳ್ಳಲಿರುವ ಪ್ರತಿಭಾ ಪುರಸ್ಕಾರದ ಬಗ್ಗೆ ವಿವರಿಸಿದರು.

ಪ್ರತಿ ತಾಲುಕು ಮತ್ತು ಗ್ರಾಮೀಣ ಮಟ್ಟದಲ್ಲಿಯೂ ಕೂಡ ಗಾಯತ್ರಿ ಜಪಯಜ್ಞ, ಗುರುಪೂರ್ಣಿಮಾ, ಸಾಮೂಹಿಕ ಉಪನಯನ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ರೂಪುರೇಷೆ ಸಿದ್ಧಪಡಿಸಲಾಗುತ್ತಿದೆ ಎಂದು ಅವರು ಹೇಳಿದರು.

ಸಂಘಟನಾ ಕಾರ್ಯದರ್ಶಿ ರಾಘವೇಂದ್ರ ಭಟ್, ಉಪಾಧ್ಯಕ್ಷರಾದ ರಾಜೇಂದ್ರ, ಪ್ರಮೋದ ಮನ್ನೊಳಿ, ಆರ್.ಎಸ್ ಮುತಾಲಿಕ, ಅವರು ಕೂಡ ಸಂಘಟನೆ ಬಗ್ಗೆ ವಿವರಿಸಿದರು.

ಹಿರಿಯಣ್ಣಸ್ವಾಮಿಯವರು ಮಾತನಾಡಿ ಬ್ರಾಹ್ಮಣರ ಸಂಘಟನೆ ಅವಶ್ಯಕತೆ ಬಗ್ಗೆ ಪ್ರಸ್ತಾಪ ಮಾಡಿದರು. ಎಕೆಬಿಎಂಎಸ್‌ನ ಸಹ ಕಾರ್ಯದರ್ಶಿ ಕಾರ್ತಿಕ ಬಾಪಟ್, ರಾಘವೇಂದ್ರ ಕುಲ್ಕರ್ಣಿ, ಮುರಳೀಧರ್, ಪುರುಷೋತ್ತಮ ಯುವ ಘಟಕದ ಸಂಚಾಲಕ ಸಂದೀಪ್ ರವಿ, ಕೂಡ ಮಾತನಾಡಿ ಮಹಾಸಭಾದ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಿಸಿದರು .

ರಾಯಚೂರು ಬ್ರಾಹ್ಮಣ ಸಂಘಟನೆ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟಿತು .





ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯಾಧ್ಯಕ್ಷರಾದ ಸನ್ಮಾನ್ಯ ಶ್ರೀ ಅಶೋಕ್ ಹಾರನಹಳ್ಳಿ ಅವರು ರಾಯಚೂರಿನ ಜವಾಹರನಗರ ರಾಘವೇಂದ್ರಸ್ವಾಮಿಗಳ ಮಠದ ಆವರಣ ದಲ್ಲಿರುವ ಶ್ರೀ ಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠಕ್ಕೆ ಭೇಟಿ ನೀಡಿ ವೇದಾಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಕುಶಲೋಪರಿ ವಿಚಾರಿಸಿ ಮಾಹಿತಿ ಪಡೆದುಕೊಂಡರು.



ಅಖಿಲ ಕರ್ಕಾಟಕ ಬ್ರಾಹ್ಮಣ ಮಹಾಸಭಾದ ಉತ್ತರ ಕರ್ನಾಟಕ ಕಾರ್ಯಕಾರಿಣಿ ಸಭೆಗೂ ಮುನ್ನ ನರಸಿಂಗರಾವ್ ದೇಶಪಾಂಡೆ ಅವರ ನಿವಾಸದಲ್ಲಿ ಆಧ್ಯಕ್ಷ ಅಶೋಕ ಹಾರನಹಳ್ಳಿ ಅವರು ಶ್ರೀ ಸತ್ಯಾತ್ಮ ತೀರ್ಥ ಶ್ರೀಗಳ ಆಶೀರ್ವಾದ ಪಡೆದುಕೊಂಡರು.

ಕಾರ್ಯಕಾರಿಣಿ ಸದಸ್ಯರು ಸೇರಿದಂತೆ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಮಹಿಳಾ ವಿಭಾಗಕ್ಕೆ ಉದಾರ ದೇಣಿಗೆ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮಹಿಳಾ ವಿಭಾಗದ ವತಿಯಿಂದ ದಿನಾಂಕ 13–03–2022 ರಂದು ಹಮ್ಮಿಕೊಂಡಿರುವ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮಕ್ಕೆ ದಿ|| ಬಿಎನ್ ವಿ ಸುಬ್ರಹ್ಮಣ್ಯಂ ರವರ ಧರ್ಮಪತ್ನಿ ಶ್ರೀಮತಿ ಸೀತಾ ಸುಬ್ರಮಣ್ಯಂ ರವರು ದೊಡ್ಡ ಮೊತ್ತದ ದೇಣಿಗೆಯನ್ನು ನೀಡಿ ಪ್ರೋತ್ಸಾಹಿಸಿದ್ದಾರೆ.

## ಶ್ರೀ ಕಂಚಿ ಕಾಮಕೋಟಿ ಜಗದ್ಗುರುಗಳಿಂದ ಆಶೀರ್ವಾದ



(06/04, 8:12 pm) Ashok Haranahalli: ಶ್ರೀಮಜ್ಜಗದ್ಗುರು ಕಂಚಿ ಕಾಮಕೋಟಿ ಪೀಠಾಧೀಶ್ವರರಾದ ಶ್ರೀ ಶ್ರೀ ಶ್ರೀ ಶಂಕರ ವಿಜಯೇಂದ್ರ ಮಹಾಸ್ವಾಮಿಗಳ ಅನುಗ್ರಹವನ್ನು ಹೊಸಪೇಟೆಯ ವಿದ್ಯಾರಣ್ಯ ವಿದ್ಯಾಪೀಠದಲ್ಲಿ ಪಡೆಯಲಾಯಿತು

ಕರ್ನಾಟಕ ರಾಜ್ಯದಲ್ಲಿ ಬ್ರಾಹ್ಮಣರ ಕ್ಷೇಮಾಭಿವೃದ್ಧಿಯ ಸಂಬಂಧವಾಗಿ ಕೈಗೊಳ್ಳುವ ಕಾರ್ಯಕ್ರಮಗಳ ಬಗ್ಗೆ ಅನೇಕ ಸಲಹೆಗಳನ್ನು ನೀಡಿದರು. ಕಂಚಿ ಕಾಮಕೋಟಿ ಪೀಠ ಶಿಕ್ಷಣ ಕ್ಷೇತ್ರದಲ್ಲಿ ಕೈಗೊಂಡಿರುವ ಯೋಜನೆಗಳ ಉಪಯೋಗವನ್ನು ಕರ್ನಾಟಕದ ಬ್ರಾಹ್ಮಣರು ಪಡೆದುಕೊಳ್ಳಬೇಕು ಎಂದು ಹೇಳಿದರು ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕೈಗೊಂಡಿರುವ ಕಾರ್ಯಕ್ರಮಗಳನ್ನು ಮೆಚ್ಚಿ ಆಶೀರ್ವದಿಸಿದರು

[06/04, 8:12 pm] Ashok Haranahalli: :ಈ ಸಂದರ್ಭದಲ್ಲಿ ಹೊಸಪೇಟೆ ಮಾಜಿ ಶಾಸಕರಾದ ಗವಿಯಪ್ಪ ನವರು ಉಪಸ್ಥಿತರಿದ್ದರು: ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕಾರ್ಯಕಾರಿ ಸಮಿತಿ ಸದಸ್ಯರಾದ ಹೊಸಪೇಟೆಯ ಶ್ರೀ ಉಮೇಶ್ ಮತ್ತು ಶ್ರೀ ದಿವಾಕರ್ ಅವರು ಸಹ ಉಪಸ್ಥಿತರಿದ್ದರು

## ಉದಾರ ಸಹಾಯ



ವಕೀಲರಾದ ಶ್ರೀಮತಿ ಸಂಧ್ಯಾರವರು ಅಪಘಾತದಿಂದ ಕಾಲನ್ನು ಕಳೆದುಕೊಂಡ ರಾಮಾನುಜಭಟ್‌ರವರ ಮಗನ ಶಸ್ತ್ರ ಚಿಕಿತ್ಸೆಗಾಗಿ 40.000 ರೂಗಳನ್ನು ಮಹಾಸಭೆಯ ಮೂಲಕ ನೀಡಿ, ಔದಾರ್ಯ ತೋರಿರುತ್ತಾರೆ. ಅವರ ಉದಾರತೆಗಾಗಿ ಮಹಾಸಭೆ ಅವರನ್ನು ಅಭಿನಂದಿಸುತ್ತದೆ ಹಾಗೂ ಅವರಿಗೆ ಭಗವಂತ ಸನ್ಮಂಗಳವನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತದೆ.

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.), ಬೆಂಗಳೂರು.
## ಉಪಾಧ್ಯಕ್ಷರುಗಳಿಗೆ ಉಸ್ತುವಾರಿ ಜಿಲ್ಲೆಗಳ ಹಂಚಿಕೆ

| | | |
|---|---|---|
| 1. ಡಾ|| ಆನಂದತೀರ್ಥ ಫಡ್ನೀಸ್ | – | ರಾಯಚೂರು, ಕೊಪ್ಪಳ |
| 2. ಶ್ರೀ ಪ್ರಮೋದ್ ಮನೋಳಿ | – | ಹಾವೇರಿ, ಹುಬ್ಬಳ್ಳಿ–ಧಾರವಾಡ, ಬಳ್ಳಾರಿ |
| 3. ಶ್ರೀ ಮುತಾಲಿಕ್ ದೇಸಾಯ | – | ಬೆಳಗಾಂ |
| 4. ಡಾ|| ಗಿರೀಶ್ ಆರ್ ಮಸೂರಕರ್ | – | ಬಾಗಲಕೋಟೆ |
| 5. ಶ್ರೀ ಶಶಿಭೂಷಣ ಹೆಗಡೆ | – | ಉತ್ತರ ಕನ್ನಡ |
| 6. ಶ್ರೀ ನಟರಾಜ ಭಾಗ್ವತ್ | – | ಶಿವಮೊಗ್ಗ, ದಾವಣಗೆರೆ, ಉಡುಪಿ ಮತ್ತು ವಿಜಯನಗರ |
| 7. ಶ್ರೀ ರಾಜೇಂದ್ರ ಪ್ರಸಾದ್ | – | ಕೋಲಾರ, ರಾಮನಗರ |
| 8. ಶ್ರೀ ಸಿ.ಕೆ. ರಾಮಮೂರ್ತಿ | – | ಬೆಂಗಳೂರು ಗ್ರಾಮಾಂತರ, ತುಮಕೂರು, ಚಿಕ್ಕಬಳ್ಳಾಪುರ |
| 9. ಶ್ರೀಮತಿ ಪುಷ್ಪ ಅಯ್ಯಂಗಾರ್ | – | ಮೈಸೂರು |
| 10. ಶ್ರೀ ಜಿ.ಎನ್. ಹೆಗಡೆ | – | ಮಂಡ್ಯ, ಚಾಮರಾಜನಗರ |
| 11. ಶ್ರೀ ಮಹೇಶ್ ಕಜೆ | – | ದಕ್ಷಿಣ ಕನ್ನಡ |
| 12. ಶ್ರೀ ಹೆಚ್.ಆರ್. ಸುರೇಶ್ | – | ಹಾಸನ, ಚಿಕ್ಕಮಗಳೂರು, ಕೊಡಗು |
| 13. ಶ್ರೀ ರಂಗನಾಥ್ ದೇಸಾಯಿ | – | ಗುಲ್ಬರ್ಗಾ, ಬೀದರ್, ಯಾದಗಿರಿ |
| 14. ಶ್ರೀ ವಿಜಯೇಂದ್ರ ಗುರುನಾಥ ನಾಡಜೋಶಿ | – | ಗದಗ |

## ‘ದಿ ಕಾಶ್ಮೀರಿ ಫೈಲ್ಸ್ ‘ ಚಿತ್ರದ ವಿಶೇಷ ಪ್ರದರ್ಶನ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿರವರ ನೇತೃತ್ವದಲ್ಲಿ ಹಾಗೂ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಉದಯ್ ಗರುಡಾಚಾರ್ ಅವರ ಸಹಕಾರದೊಂದಿಗೆ "ದಿ ಕಾಶ್ಮೀರಿ ಫೈಲ್ಸ್ " ಚಿತ್ರದ ವಿಶೇಷ ಪ್ರದರ್ಶನವನ್ನು AKBMS ನ ಪದಾಧಿಕಾರಿಗಳಿಗೆ, ಕಾರ್ಯಕಾರಿ ಸಮಿತಿ ಸದಸ್ಯರುಗಳಿಗೆ ಹಾಗೂ ವಿಪ್ರ ಬಾಂಧವರಿಗೆ 26/03/2022 ರಂದು ಐನಾಕ್ಸ್ ಚಿತ್ರಮಂದಿರ, ಗರುಡಾ ಮಾಲ್ ಬೆಂಗಳೂರಿನಲ್ಲಿ ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಚಿತ್ರ ವೀಕ್ಷಿಸಿದ ಪ್ರತಿಯೊಬ್ಬರೂ ಅಂದು ಕಾಶ್ಮೀರದಲ್ಲಿ ನಡೆದ ಕಾಶ್ಮೀರಿ ಪಂಡಿತರ ನರಮೇಧವನ್ನು ಖಂಡಿಸಿದರು. ಮುಂದಿನ ದಿನಗಳಲ್ಲಿ ಮಹಾಸಭಾ ಈ ವಿಷಯದ ಬಗ್ಗೆ ಸಂವಾದವನ್ನು ಏರ್ಪಡಿಸಲಿದೆ. ಅತೀ ಶೀಘ್ರದಲ್ಲಿ ಇದರ ಹೆಚ್ಚಿನ ವಿವರಗಳನ್ನು ನಿಮ್ಮೊಡನೆ ಹಂಚಿಕೊಳ್ಳಲಾಗುವುದು.




**ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ :** ಪ್ರಯುಕ್ತ ದಿನಾಂಕ 08.03.2022ರಂದು ಬೆಳಿಗ್ಗೆ 10.30 ರಿಂದ ಗಾಯತ್ರಿ ಭವನದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಹಿಳಾ ವಿಭಾಗದ ವತಿಯಿಂದ ಬೆಂಗಳೂರಿನ ಜೆಪಿ ನಗರದ ಶೇಖರ್ ಐ ಹಾಸ್ಪಿಟಲ್ ಸಹಯೋಗದೊಂದಿಗೆ ಗ್ಲುಕೋಮಾಯುಕ್ತ ಕಣ್ಣಿನ ಪರೀಕ್ಷೆಯ ಶಿಬಿರವನ್ನು ಏರ್ಪಡಿಸಲಾಗಿತ್ತು.

ಅನೇಕ ಮಹಿಳೆಯರು ಮತ್ತು ಪುರುಷರು ಈ ಶಿಬಿರದ ಸದುಪಯೋಗವನ್ನು ಪಡೆದುಕೊಂಡರು.

## ಆಂಗ್ಲಭಾಷೆಯ ವಿಪ್ರನುಡಿ ಬಿಡುಗಡೆ–ಪಂಚಾಂಗ ಶ್ರವಣ





ಆಂಗ್ಲಭಾಷೆಯ ವಿಪ್ರನುಡಿಯ ಲೋಕಾರ್ಪಣೆಯನ್ನು ದಿನಾಂಕ 02.04.2022 ಯುಗಾದಿಯಂದು ನೇರವೇರಿಸಲಾಯಿತು. ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ವಿಪ್ರಬಾಂಧವರು ಭಾಗವಹಿಸಿದ್ದರು. ಪತ್ರಿಕೆಯನ್ನು ಬಿಡುಗಡೆ ಮಾಡುತ್ತಾ ಮಹಾಸಭೆಯ ಅಧ್ಯಕ್ಷರು ಹೆಚ್ಚಿನ ಸಂಖ್ಯೆಯಲ್ಲಿ ಇಂಗ್ಲಿಷ್ ವಿಪ್ರನುಡಿಗೂ ಚಂದಾದಾರರಾಗಲು ಮನವಿ ಮಾಡಿದರು, ಹಾಗೂ ಕನಿಷ್ಠ ಐದನೂರು ಮಂದಿ ಚಂದಾದಾರರಾದರೆ ಇಂಗ್ಲಿಷ್ ವಿಪ್ರನುಡಿಯನ್ನು ಮುದ್ರಣರೂಪ ದಲ್ಲಿಯೂ ಪ್ರಕಟಿಸಲಾಗುವುದೆಂದು ತಿಳಿಸಿದರು. ಈ ಸಂದರ್ಭದಲ್ಲಿ ಪ್ರದಾನ ಸಂಪಾದಕರಾದ ಪ್ರಸಿದ್ಧ ಸಾಹಿತಿ ವಾಗ್ಮಿ ಶ್ರೀ ಸತ್ತೇಶ್ ಬೆಳ್ಳೂರ್‌ರವರು ಮಾತನಾಡಿ ಲೇಖನವನ್ನು ನೀಡಿದ ಲೇಖಕರಿಗೆ ವಂದಿಸುತ್ತ ಪತ್ರಿಕೆಯು ಇನ್ನೂ ಹೆಚ್ಚು ಮೌಲಿಕವಾಗಿ ಹೊರಬರಲು ಎಲ್ಲ ಸಹೃದಯರ ಬೆಂಬಲಕೋರಿದರು. ವಿಪ್ರನುಡಿ ಸಂಪಾದಕ ಡಾ॥ ಎಂ.ಕೆ. ಶ್ರೀಧರ್ ಹಾಗೂ ಹಲವು ಲೇಖಕ, ಲೇಖಕಿಯರು ಮಾತನಾಡಿ ಕಾರ್ಯಕ್ರಮವನ್ನು ಚಂದಗಾಣಿಸಿದರು.

ಈ ಕಾರ್ಯಕ್ರಮಕ್ಕೆ ಮೊದಲು ಸಂವತ್ಸರದ ಮೊದಲ ಕಾರ್ಯಕ್ರಮವಾಗಿ ವಿದ್ವಾನ್ ಸುದರ್ಶನ ಶರ್ಮಾರವರಿಂದ ಪಂಚಾಂಗ ಶ್ರವಣ ಕಾರ್ಯಕ್ರಮವು ಸಾಂಘವಾಗಿ ನೆರವೇರಿತು.

ವಿಪ್ರನುಡಿಗೆ ಚಂದಾದಾರರಾಗಲು ಆನ್‌ಲೈನ್‌ನಲ್ಲಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

## ಬ್ರಾಹ್ಮಣ ಸಂಘ, ಟಿ.ದಾಸರಹಳ್ಳಿ ನೂತನ ಪದಾಧಿಕಾರಿಗಳು

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ನೋಂದಾಯಿತ ಸಂಸ್ಥೆಯಾಗಿರುವ ಬ್ರಾಹ್ಮಣ ಸಂಘ, ಟಿ.ದಾಸರಹಳ್ಳಿ (ರಿ) – ಈ ಸಂಘದ ನೂತನ ಕಾರ್ಯಕಾರಿ ಸಮಿತಿಯು 2021–24ನೇ ಸಾಲಿಗೆ ಅವಿರೋಧವಾಗಿ ಆಯ್ಕೆಯಾಗಿದ್ದು, ನೂತನ ಪದಾಧಿಕಾರಿಗಳಿಗೆ ಹಾಗೂ ಸಮಿತಿಯ ಸದಸ್ಯರುಗಳಿಗೆ ಮಹಾಸಭೆಯ ಅಭಿನಂದನೆಗಳು.

ಶ್ರೀ ಗೋಪಿನಾಥ್ ಎನ್... ಗೌರವ ಅಧ್ಯಕ್ಷರು, ಶ್ರೀ ಶ್ರೀಧರಮೂರ್ತಿ ಎಸ್.ಜಿ. ಕಾರ್ಯಾಧ್ಯಕ್ಷರು, ಶ್ರೀಮತಿ ಭಾನುಮತಿ ಬಿ.ಆರ್. .. ಉಪಾಧ್ಯಕ್ಷರು, ಶ್ರೀ ಜ್ವಾಲಾಪತಯ್ಯ ಎ.ಲ್. .. ಪ್ರಧಾನ ಕಾರ್ಯದರ್ಶಿ, ಶ್ರೀ ಮಂಜುನಾಥ್ ಟಿ.ಕೆ. .. ಜೊತೆ ಕಾರ್ಯದರ್ಶಿ, ಶ್ರೀ ಚಂದ್ರಶೇಖರ್ ಎನ್. .. ಖಜಾಂಚಿ ಮತ್ತು ಶ್ರೀಮತಿ ರೇಖಾ ಗುರುಮೂರ್ತಿ .. ಸಂಘಟನಾ ಕಾರ್ಯದರ್ಶಿ.

# ಮಹಿಳಾ ವಿಭಾಗದಿಂದ ಶ್ರೀ ನರಸಿಂಹ ಸಹಸ್ರನಾಮ ಪಠನ



08.03.2022ರಂದು ಸಂಜೆ 4.30ರಿಂದ ಗಾಯತ್ರಿ ಭವನದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಹಿಳಾ ವಿಭಾಗದ ವತಿಯಿಂದ ಶ್ರೀ ನರಸಿಂಹ ಸಹಸ್ರನಾಮ ಪಠನ ಪೂಜಾ ಕೈಂಕರ್ಯವು ವಿಜೃಂಭಣೆಯಿಂದ ನೆರವೇರಿತು

ಕೂಟ ಬ್ರಾಹ್ಮಣ ಮಹಿಳೆಯರ ಸಹಕಾರದೊಂದಿಗೆ ನೂರಾರು ಮಹಿಳೆಯರು ಶ್ರೀನರಸಿಂಹ ಸಹಸ್ರನಾಮ ಪಠನವನ್ನು ನೆರವೇರಿಸಿದರು. ನರಸಿಂಹ ಸಹಸ್ರನಾಮ ಪಠನದ ಪುಸ್ತಕವನ್ನು ಶ್ರೀಮತಿ ಸರೋಜಾ ರಾವ್‌ರವರು ಉಚಿತವಾಗಿ ಎಲ್ಲಾ ಮಹಿಳೆಯರಿಗೆ ವಿತರಿಸಿದರು.

ಈ ಕಾರ್ಯಕ್ರಮದಲ್ಲಿ ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಮತ್ತು ಶ್ರೀಮತಿ ಮೇದಿನಿ ಉದಯ್ ಗರುಡಾಚಾರ್, ಉಪಾಧ್ಯಕ್ಷರಾದ ಸಿ.ಕೆ. ರಾಮಮೂರ್ತಿರವರು ಭಾಗವಹಿಸಿದ್ದರು

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)

## ವಧು-ವರ ಮಾಹಿತಿ ಕೇಂದ್ರ, ಬೆಂಗಳೂರು

**ಸ್ಥಳ : ಗಾಯತ್ರಿ ಭವನ**

ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,
ಬನಶಂಕರಿ 2ನೆ ಹಂತ, ಬೆಂಗಳೂರು-70.
ದೂರವಾಣಿ : 080-26770066/26771695
ಸಮಯ : ಸಂಜೆ 5.00 ರಿಂದ 7.00 ರವರೆಗೆ
ಮಂಗಳವಾರ ಮತ್ತು ಶನಿವಾರ

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಪೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು** : ಶ್ರೀಮತಿ ಜಯಲತಾ ಸತ್ಯನಾರಾಯಣ್

**ಸದಸ್ಯರು**

ಶ್ರೀಮತಿ ರಮಾ ಶ್ರೀನಾಥ್, ಶ್ರೀಮತಿ ಪಾರ್ವತಿ ಸ್ವಾಮಿ
ಶ್ರೀಮತಿ ಗಾಯತ್ರಿ ರಾವ್


ಜಾಹೀರಾತು

## ಸೋಮಯಾಗದಲ್ಲಿ ಪಾಲ್ಗೊಳ್ಳಿ

"ಸೋಮಯಾಗ" ಒಂದು ದಿವ್ಯವಾದ ಯಜ್ಞ, ಪ್ರಾಚೀನಕಾಲದಲ್ಲಿ, ಎಲ್ಲಾ ಯುಗಗಳಲ್ಲಿ ಈ ಯಾಗಕ್ಕೆ ಬಹಳ ಮಹತ್ವವನ್ನು ನಮ್ಮ ಪೂರ್ವಜರು ನೀಡುತ್ತಾ ಬಂದಿರುತ್ತಾರೆ. ಇದು ಪರಿಸರ ಪಾವಿತ್ರ್ಯವನ್ನು ಶುದ್ಧೀಕರಿಸಿ ದಿವ್ಯತ್ವವನ್ನು ಕರುಣಿಸುವ ಶ್ರೇಷ್ಠವಾದ ಶ್ರೌತಕರ್ಮಗಳಲ್ಲಿ ಒಂದಾಗಿದೆ. ಈ ಯಜ್ಞ ವಿಧಿಯು ವೇದಗಳಲ್ಲಿ ಹಾಗೂ ಕಲ್ಪಸೂತ್ರದಲ್ಲಿ ಸೂಚಿಸಿದ ವಿಧಾನಗಳ ಮೇಲೆ ಆಧಾರಿತವಾಗಿದೆ. ಇದರಂತೆ ಸೋಮಯಾಗವು ಏಳು ಪ್ರಕಾರಗಳಿಂದ ಕೂಡಿದೆ. 1) ಅಗ್ನಿಷ್ಟೋಮ 2) ಉಕ್ಥ್ಯ 3) ಷೋಡಶೀ 4) ಅತ್ಯಗ್ನಿಷ್ಟೋಮ 5) ಅತಿರಾತ್ರ 6) ವಾಜಪೇಯ 7) ಆಪ್ತೋರ್ಯಾಮ ಎಂಬುದಾಗಿದೆ.

"ಅಗ್ನಿಷ್ಟೋಮೋ ವೈ ಸ್ವರ್ಗಕಾಮೋಯಜೇತ" . . . ಎಂಬ ಋಗ್ವೇದ ವಾಕ್ಯದಂತೆ ಈ ಭೂಮಿಯಲ್ಲಿ ವಾಸಿಸುವ ಎಲ್ಲಾ ಜೀವಿಗಳಿಗೂ ಸಮೃದ್ಧಿ, ಆರೋಗ್ಯ ಹಾಗೂ ಉತ್ತಮ ಪರಿಸರವನ್ನು ನಿರ್ಮಾಣಮಾಡುವ ಶ್ರೌತಕ್ರಿಯೆ ಇದಾಗಿದೆ. ಈ ಯಜ್ಞದಲ್ಲಿ "ಸೋಮಲತೆ" ಎಂಬ ಆಯುರ್ವೇದ ಗಿಡಮೂಲಿಕೆಯ ರಸವನ್ನು ತೆಗೆದು ಬೇರೆ ದ್ರವ್ಯಗಳೊಂದಿಗೆ ಆಹುತಿ ನೀಡಲಾಗುತ್ತದೆ. ಈ ವಿಶೇಷ ಯಜ್ಞದಲ್ಲಿ ಭಾಗವಹಿಸುವ ಎಲ್ಲರಿಗೂ ಆಯುರಾರೋಗ್ಯ ವೃದ್ಧಿ, ಕ್ಷೇಮ ಉಂಟಾಗುವುದರ ಜೊತೆಗೆ ಜಗತ್ತಿನ ರೋಗಗಳನ್ನೂ ಸಹ ಗುಣಪಡಿಸುವ ಸಾಮರ್ಥ್ಯ ಹೊಂದಿದೆ.

ಜಗತ್ತಿನ ಪ್ರಪ್ರಥಮ ಯೋಗ ವಿಶ್ವವಿದ್ಯಾಲಯವಾದ "ಎಸ್ ವ್ಯಾಸ" ವಿಶ್ವವಿದ್ಯಾಲಯದಲ್ಲಿ ಇದನ್ನು 2022 ಮೇ 3 ರಿಂದ (ಅಕ್ಷಯ ತೃತೀಯಾ) ಮೇ 16 ರವರೆಗೂ "ಪಶುಕಾಮ ನವರಾತ್ರಾ ಮಹಾಸೋಮ ಯಾಗ" ಎಂಬ ಶೀರ್ಷಿಕೆ ಅಡಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಮಹಾರಾಷ್ಟ್ರದ ಗಂಗಾಖೇಡ ಪ್ರಾಂತ್ಯದಲ್ಲಿ ನೆಲಸಿರುವ ಶ್ರೀ ಯಜ್ಞೇಶ್ವರ್ ಸೆಲುಕರ್‌ಜೀ ಅವರ ನೇತೃತ್ವದಲ್ಲಿ 150ಕ್ಕೂ ಮಿಗಿಲಾದ ಋತ್ವಿಜರೂ ಹಾಗೂ ಸ್ವಯಂಸೇವಕರಿಂದ ವಿಶಾಲವಾದ ಯಜ್ಞ ಮಂಟಪದಲ್ಲಿ ಕ್ಷಯಾಗ ನೆರವೇರುತ್ತದೆ. ಬಹಳ ಅಪರೂಪವಾದ ಈ ಯಜ್ಞದಲ್ಲಿ ವಿಪ್ರಬಂಧುಗಳು ಪಾಲ್ಗೊಳ್ಳಲು ಅವಕಾಶವಿರುತ್ತದೆ. ಈ ಯಾಗದಲ್ಲಿ ಹಲವಾರು ಪರಿಕರ-ದ್ರವ್ಯಗಳು, ಋತ್ವಿಜರ ಸಂಭಾವನೆ, ನಡೆಯುವ ಈ ಅಪರೂಪದ ಸೋಮಯಾಗದಲ್ಲಿ ಮುಂತಾದ್ದಕ್ಕೆ ತಾವುಗಳು ಪ್ರಾಯೋಜನೆ ಮಾಡಬಹುದು. 14 ದಿನಗಳು ನಡೆಯುವ ಈ ಕಾರ್ಯಕ್ಕೆ ನೀಡುವ ರೂ.1,000/= ಹಾಗೂ ಹೆಚ್ಚಿನ ದೇಣಿಗೆಗೆ 80ಜಿ ತೆರಿಗೆ ವಿನಾಯಿತಿ ಇರುತ್ತದೆ. ಬೆಂಗಳೂರಿನ ಆನೇಕಲ್‌ತಾಲ್ಲೂಕ್, ಜಿಗಣಿ ಹೋಬಳಿಯಲ್ಲಿರುವ ಈ ವಿಶ್ವವಿದ್ಯಾಲಯದ ಆವರಣದಲ್ಲಿ ಅನ್ನಸಂತರ್ಪಣೆಗೆ ಎಲ್ಲರೂ ಪಾಲ್ಗೊಳ್ಳಿರಿ. ತಾವುಗಳು ನೀಡುವ ಮೊತ್ತವನ್ನು ಚೆಕ್ ಮುಖಾಂತರ "ಎಸ್‌ವ್ಯಾಸ ಬೆಂಗಳೂರು" ಹೆಸರಿನಲ್ಲಿ ನೀಡಿ ರಶೀದಿಯನ್ನು ಪಡೆಯಬಹುದು. ದೇಣಿಗೆಯ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.

"ಪ್ರೊ. ಎಂ.ಕೆ. ಶ್ರೀಧರ್, ಕುಲಸಚಿವರು,
ಎಸ್. ವ್ಯಾಸಯೋಗ ವಿಶ್ವವಿದ್ಯಾಲಯ, ಬೆಂಗಳೂರು. 9480467836. ಇ ಮೇಲ್ :registrar@suvyasa.edu.in

## ಬೇಲೂರು ತಾಲೂಕು ಬ್ರಾಹ್ಮಣ ಮಹಾಸಭೆ ವತಿಯಿಂದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸದಸ್ಯತ್ವ ಅಭಿಯಾನ:




25/02/2022 ಹಾಸನ ಜಿಲ್ಲೆ ಬೇಲೂರು ತಾಲೂಕು ಬ್ರಾಹ್ಮಣ ಮಹಾಸಭಾದ ವತಿಯಿಂದ ಚನ್ನಕೇಶವ ಸನ್ನಿಧಾನದಲ್ಲಿ ಸ್ವಾಮಿಗೆ ಮಹಾಭಿಷೇಕ ನಂತರ ತಾಲೂಕು ಬ್ರಾಹ್ಮಣ ಮಹಾಸಭಾದ ವತಿಯಿಂದ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಲಾಯಿತು ಈ ಕಾರ್ಯಕ್ರಮದಲ್ಲಿ ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಗೋ. ಮಧುಸೂದನ್ ರವರು ಉಪಸ್ಥಿತರಿದ್ದರು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ನರಸಿಂಹಮೂರ್ತಿ, ಶ್ರೀ ಮಂಜುನಾಥ್ ಶಾಸ್ತ್ರಿ ಹಾಗೂ ತಾಲೂಕು ಬ್ರಾಹ್ಮಣ ಮಹಾಸಭಾದ ಪದಾಧಿಕಾರಿಗಳು ಉಪಸ್ಥಿತರಿದ್ದರು ಕಾರ್ಯಕ್ರಮವನ್ನು ತಾಲೂಕು ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರು ಹಾಗೂ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ವಿಜಯ ಕೇಶವರವರು ಬಹಳ ಅಚ್ಚುಕಟ್ಟಾಗಿ ಏರ್ಪಡಿಸಿದ್ದರು.

## ಕಲಘಟಗಿಯಲ್ಲಿ ಮಹಾಸಭಾದ ಸದಸ್ಯತ್ವ ಅಭಿಯಾನ:



ಶಿಕ್ಷಣ ಪ್ರೇಮಿಗಳು ಹಾಗು ಕಲಘಟಗಿ ಬ್ರಾಹ್ಮಣ ಸಭಾದ ಅಧ್ಯಕ್ಷರಾದ ಶ್ರೀ ಶ್ರೀಧರ್ ಪಾಟೀಲ್ ಅವರು ಕಲಘಟಗಿಯಲ್ಲಿ ಮಹಾಸಭಾದ ಸದಸ್ಯತ್ವ ಅಭಿಯಾನಕ್ಕೆ ತಮ್ಮ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದಾರೆ. ಈ ಸಂಧರ್ಭದಲ್ಲಿ ಮಹಾಸಭಾದ ಸಂಘಟನೆ ಹಾಗೂ ಸದಸ್ಯತ್ವ ಅಭಿಯಾನದ ರೂಪು ರೇಷೆಗಳ ಬಗ್ಗೆ ಮಹಾಸಭಾದ ಕಾರ್ಯಕಾರಿಣಿ ಸದಸ್ಯರಾದ ವಿಜಯ ನಾಡಜೋಶಿ ಅವರು ಶ್ರೀಧರ್ ಪಾಟೀಲ್ ಅವರೊಂದಿಗೆ ಸುದೀರ್ಘವಾಗಿ ಚರ್ಚಿಸಿದರು.

## ಹಾವೇರಿಯಲ್ಲಿ ಸದಸ್ಯತ್ವ ಅಭಿಯಾನ



ಹಾವೇರಿಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸದಸ್ಯತ್ವ ಅಭಿಯಾನಕ್ಕೆ ಹಾವೇರಿಯ ಸಮಸ್ತ ವಿಪ್ರ ಬಾಂಧವರಿಂದ ಚಾಲನೆ ಗೊಂಡಿತು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶ್ರೀ ಪ್ರಮೋದ್ ಮನೋಳಿ ಅವರು ಮಹಾಸಭಾದ ಎಲ್ಲ ಚಟುವಟಿಕೆಗಳನ್ನು ವಿವರಿಸಿ ರಾಜ್ಯಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರ ಕೈ ಬಲಪಡಿಸಿ ಹಾಗೂ ಮಹಾಸಭೆಯನ್ನು ಸದೃಢಗೊಳಿಸಲು ಸಮಾಜದ ಮುಖಂಡರುಗಳನ್ನು ಕೇಳಿಕೊಂಡರು. ಶ್ರೀ ಪ್ರಭಾಕರ್ ಮಂಗಳೂರು, ತಾಲೂಕು ಅಧ್ಯಕ್ಷರಾದ ಶ್ರೀ ವಸಂತ ಮೊಕ್ತಾಲಿ, ಶಂಕರ್ ಭಟ್ ಜೋಷಿ, ಶ್ರೀ ಬಾದಾಮಿ, ಬಳ್ಳಾರಿ ಉಮೇಶ್ ರಟ್ಟಿಹಳ್ಳಿ, ಪುಣ್ಯವಂತ ಕಟ್ಟಿ, ಭಗವಂತ ಕುಲಕರ್ಣಿ ಶ್ರೀ ಗಡಿಗಿ ಹಾಗೂ ಇನ್ನೂ ಅನೇಕ ವಿಪ್ರ ಮುಖಂಡರು ಸಭೆಯನ್ನು ನಡೆಸಿಕೊಟ್ಟರು ಹಾನಗಲ್ ತಾಲೂಕಿನ ಶ್ರೀ ರವಿ ಪುರೋಹಿತ್ ಗಿರೀಶ್ ದೇಶಪಾಂಡೆಯವರು ಸಂದರ್ಭದಲ್ಲಿ ಹಾಜರಿದ್ದರು.

## ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥರಿಂದ ಸದಸ್ಯತ್ವ ಅಭಿಯಾನಕ್ಕೆ ಆಶೀರ್ವಾದ



ಶ್ರೀರಾಘವೇಂದ್ರಸ್ವಾಮಿಗಳವರ ಪಟ್ಟಾಭಿಷೇಕ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರಾದ ಶ್ರೀ ಪ್ರಮೋದ್ ಮನೋಳಿ ಅವರನ್ನು ಆಶೀರ್ವದಿಸಿ ಮಹಾಸಭಾದ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿ ಶುಭ ಹಾರೈಸಿದರು.

## ಬೆಳಗಾವಿಯಲ್ಲಿ ಸದಸ್ಯತ್ವ ಅಭಿಯಾನ



ಬೆಳಗಾವಿಯಲ್ಲಿ ನಡೆದ ಬ್ರಾಹಣ ಉದ್ದಿಮೆದಾರರ ಸಭೆಯಲ್ಲಿ ಬ್ರಾಹ್ಮಣ ಭವನ ನಿರ್ಮಾಣ,ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣರಿಗೆ ನೆರವು.ಸದಸ್ಯತ್ವ ಅಭಿಯಾನಕ್ಕೆ ಒತ್ತು ಹಾಗು ಮಹಾಸಭೆಯ ಸಂಘಟನೆ ಬಗ್ಗೆ ಚರ್ಚಿಸಲಾಯಿತು. ಬೆಳಗಾವಿಯ ಉದ್ಯಮ ಬಾಗದಲ್ಲಿರುವ ಸೆಲಿಬ್ರಿಷನ್ ಸಭಾಂಗಣದಲ್ಲಿ ಹೆಸರಾಂತ ಉದ್ಯಮಿ ಭರತ ದೇಶಪಾಂಡೆ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರ ಮಾಡಲಾಯಿತು. ಆರ್ಥಿಕ ಮುಗ್ಗಟ್ಟಿನಿಂದ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿರುವ ಬಡ ವಿದ್ಯಾರ್ಥಿಗಳನ್ನು ದತ್ತು ತೆಗೆದುಕೊಳ್ಳುವ ಕುರಿತು ಖ್ಯಾತ ಉದ್ಯಮಿ ಮಧ್ವಾಚಾರ್ಯ ಅವರ ಅಭಿಪ್ರಾಯಕ್ಕೆ ಎಲ್ಲರೂ ಸಹಮತ ವ್ಯಕ್ತಪಡಿಸಿದರು. ಬ್ರಾಹ್ಮಣ ಸಮುದಾಯದಲ್ಲಿ ಉದ್ಯಮಿಗಳು ತಮ್ಮದೇ ಆದ ವರ್ಚಸ್ಸನ್ನು ಹೊಂದಿದ್ದಾರೆ, ಅಷ್ಟೇ ಅಲ್ಲ ಎಲ್ಲ ವರ್ಗದವರಿಗೂ ಕೂಡ ಬೇಕಾದ ಉದ್ಯಮಿಗಳು ನಮ್ಮ ಬ್ರಾಹ್ಮಣ ಸಮಾಜದಲ್ಲಿದ್ದಾರೆ. ಹೀಗಾಗಿ ಒಬ್ಬೊಬ್ಬ ಉದ್ಯಮಿಗಳು ಬಡ ವಿದ್ಯಾರ್ಥಿಗಳನ್ನು ಗುರುತಿಸಿ ದತ್ತು ತೆಗೆದುಕೊಳ್ಳುವ ಕೆಲಸವನ್ನು ಮಾಡಿದರೆ ಅದಕ್ಕಿಂತ ಪುಣ್ಯದ ಕೆಲಸ ಮತ್ತೊಂದಿಲ್ಲ ಎಂದು ಬಹುತೇಕರು ಅಭಿಪ್ರಾಯಪಟ್ಟರು.

ಭರತ ದೇಶಪಾಂಡೆ ಮಾತನಾಡಿ, ಪ್ರತಿಯೊಬ್ಬರು ಎಕೆಬಿಎಂಎಸ್ ಸದಸ್ಯರಾಗಬೇಕು. ಈ ನಿಟ್ಟಿನಲ್ಲಿ ಎಲ್ಲರೂ ಕಾರ್ಯತತ್ಪರರಾಗಬೇಕು. ಇದರ ಜೊತೆಗೆ ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಒಗ್ಗಟ್ಟನ್ನು ಕಾಯ್ದುಕೊಂಡು ಹೋಗಬೇಕು ಎಂದರು. ಸಂಘಟನೆ ಕೆಲಸವನ್ನು ಇನ್ನಷ್ಟು ಚುರುಕಾಗಿ ಮಾಡಬೇಕು ಎನ್ನುವ ಸಲಹೆಯನ್ನು ಉದ್ಯಮಿ ರಾಮ ಭಂಡಾರಿ ಅವರು ನೀಡಿದರು., ಬೆಳಗಾವಿಯಲ್ಲಿಯೇ ಪ್ರತಿ ವಾರ್ಡುವಾರು ಬ್ರಾಹ್ಮಣರ ಸಭೆಗಳನ್ನು ಮಾಡುವ ಮೂಲಕ ಸಂಘಟನೆಯನ್ನು ಇನ್ನಷ್ಟು ಬಲಿಷ್ಠ ಮಾಡಬೇಕು ಎಂದರು. ಈ ನಿಟ್ಟಿನಲ್ಲಿ ಸದಸ್ಯತ್ವ ಅಭಿಯಾನವೂ ಸೇರಿದಂತೆ ಆರಂಭಿಕ ಹಂತದಲ್ಲಿ ಬೆಳಗಾವಿಯಲ್ಲಿ ಪ್ರತಿ ವಾರ್ಡವಾರು ಮುಖಂಡರನ್ನು ಗುರುತಿಸಿ ಅವರಿಗೆ ಒಂದಿಷ್ಟು ಜವಾಬ್ದಾರಿಗಳನ್ನು ನೀಡಬೇಕು ಎಂದು ಅವರು ಸಲಹೆ ನೀಡಿದರು. ಅಷ್ಟೇ ಅಲ್ಲ ಜಿಲ್ಲಾ ಸಮಿತಿಗಳನ್ನು ರಚನೆ ಮಾಡಿ ಸಮಾಜದ ಪ್ರಗತಿಗಾಗಿ ಒಂದಿಷ್ಟು ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎನ್ನುವ ಸಲಹೆಯನ್ನು ಕೆಲವರು ನೀಡಿದರು. .ಉದ್ಯಮಿ ವಿಲಾಸ ಬಾದಾಮಿ ಅವರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆ ಸದಸ್ಯತ್ವ ಅಭಿಯಾನಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎನ್ನುವುದರ ಜೊತೆಗೆ ಸಮಿತಿ ರಚನೆ ಮಾಡಿ ಜವಾಬ್ದಾರಿ ಹಂಚಿಕೆ ಮಾಡಿಕೊಡಬೇಕು ಎನ್ನುವ ಸಲಹೆ ನೀಡಿದರು.ಸಂಜೀವ ಕುಲಕರ್ಣಿ, ಉಪಾಧ್ಯಕ್ಷ ಆರ್.ಎಸ್. ಮುತಾಲಿಕ. ಅನುಶ್ರೀ ದೇಶಪಾಂಡೆ, ಗುರುರಾಜ ಕುಲಕರ್ಣಿ ಅರ್ಚನಾ ತೇಲಂಗ ಇತರರು ಮಾತನಾಡಿದರು. ಎಕೆಬಿಎಂಎಸ್ ಅಧ್ಯಕ್ಷ ಅಶೋಕ ಹಾರನಹಳ್ಳಿ ಅವರ ಮುಂದಿನ ಯೋಜನೆಗಳ ಕುರಿತು ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯ ವಿಲಾಸ ಜೋಶಿ ವಿವರಿಸಿದರು. ಅಷ್ಟೇ ಅಲ್ಲ ಸದಸ್ಯತ್ವ ಅಭಿಯಾನದ ಕುರಿತಂತೆ ಕೆಲವೊಂದಿಷ್ಟು ಮಾಹಿತಿ ನೀಡಿದರು.

## ಚನ್ನರಾಯಪಟ್ಟಣ ಬ್ರಾಹ್ಮಣ ಸಭಾ ವತಿಯಿಂದ ಅಭಿನಂದನಾ ಕಾರ್ಯಕ್ರಮ



ದಿನಾಂಕ 19.3.22 ಶನಿವಾರ ಸಂಜೆ ಆರು ಗಂಟೆಗೆ ಚನ್ನರಾಯ ಪಟ್ಟಣ ತಾಲೂಕು ಬ್ರಾಹ್ಮಣ ಸಭಾ ವತಿಯಿಂದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ರವರಿಗೆ ಹಾಗು ಒಕ್ಕಲಿಗ ಸಂಘಕ್ಕೆ ಅಧ್ಯಕ್ಷರಾಗಿ ಆಯ್ಕೆಯಾದಂತಹ ಶ್ರವಣಬೆಳಗೊಳ ಶಾಸಕರಾದ ಶ್ರೀ ಬಾಲಕೃಷ್ಣ ಅವರಿಗೆ ಅಭಿನಂದನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು ಈ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರಾದ ಶ್ರೀ ರಾಜೇಂದ್ರ ಪ್ರಸಾದ್. ಸಹ ಕಾರ್ಯದರ್ಶಿಗಳಾದ ಪುರುಷೋತ್ತಮ್, ಕಾರ್ತಿಕ್ ಬಾಪಟ್. ಯುವ ವೇದಿಕೆಯ ರಾಜ್ಯ ಸಂಚಾಲಕರಾದ ಸಂದೀಪ್ ರವಿ ಮತ್ತು ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಬಿ ಎಸ್ ರಾಘವೇಂದ್ರ ಭಟ್ ಮತ್ತು ಐಟಿ ವಿಭಾಗದ ಮುಖ್ಯಸ್ಥರಾದ ಶ್ರೀಕೃಷ್ಣ ಸ್ವಾಮಿಯವರು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರಾದ ಅನಂತರಾಮುರವರು ಉಪಸ್ಥಿತರಿದ್ದರು. ಚನ್ನರಾಯಪಟ್ಟಣ ತಾಲೂಕು ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರ ನೇತೃತ್ವದಲ್ಲಿ ಕಾರ್ಯಕ್ರಮವನ್ನು ಬಹಳ ಅಚ್ಚುಕಟ್ಟಾಗಿ ಏರ್ಪಡಿಸಿದ್ದರು ತಾಲೂಕಿನ ಸುಮಾರು 250 ಜನ ವಿಪ್ರ ಬಾಂಧವರು ಈ ಕಾರ್ಯಕ್ರಮ ದಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮವು ಬಹಳ ಯಶಸ್ವಿಯಾಗಿ ನೆರವೇರಿತು. ಮಹಾಸಭಾದ ಅಧ್ಯಕ್ಷರು ಮಾತನಾಡಿ ಮಹಾಸಭಾದ ಎಲ್ಲ ಯೋಜನೆಗಳನ್ನು ವಿವರಿಸಿದರು ಹಾಗೂ ಬ್ರಾಹ್ಮಣ ಸಮಾಜದ ಸಂಸ್ಕೃತಿ ಸ್ವಾವಲಂಬನೆಯ ಬಗ್ಗೆ ಮಾತನಾಡಿದರು ಹಾಗೂ ಮಹಾಸಭಾದ ಸದಸ್ಯತ್ವವನ್ನು ಪಡೆದು ಸಂಘಟನೆಯನ್ನು ಬಲಪಡಿಸಬೇಕೆಂದು ಮನವಿ ಮಾಡಿದರು, ಈ ಸಂದರ್ಭದಲ್ಲಿ ಸ್ಥಳೀಯ ಶಾಸಕರಾದ ಬಾಲಕೃಷ್ಣ ಅವರು ತಾಲೂಕು ಬ್ರಾಹ್ಮಣ ಸಮಾಜ ಚೆನ್ನರಾಯಪಟ್ಟಣ ನಿರ್ಮಿಸಲು ಉದ್ದೇಶಿಸಿರುವ ನೂತನ ಕಟ್ಟಡಕ್ಕೆ 10 ಲಕ್ಷ ರೂಪಾಯಿಗಳ ಅನುದಾನವನ್ನು ಸ್ಥಳದಲ್ಲೇ ಘೋಷಿಸಿದರು ಹಾಗು ಮಹಾಸಭಾದ ನೂತನ ಯೋಜನೆಗಳನ್ನು ಶ್ಲಾಘಿಸಿದರು.

## ಹುಬ್ಬಳ್ಳಿಯಲ್ಲಿ ಸದಸ್ಯತ್ವ ಅಭಿಯಾನ



ಮಾನ್ಯರೇ ದಿನಾಂಕ 27-2-2022 ರಂದು ಹುಬ್ಬಳ್ಳಿಯಲ್ಲಿ ಸಿಲ್ವರ್ ಪಾರ್ಕ್‌ನಲ್ಲಿ ಬ್ರಾಹ್ಮಣ ಸಮಾಜದ ಸಭೆ ಕರೆಯಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಡಾಕ್ಟರ್ ಸಂದೀಪ್ ಕುಲ್ಕರ್ಣಿ ವಹಿಸಿದ್ದರು ಸಭೆಗೆ ಅತಿಥಿಗಳಾಗಿ ಕರ್ನಾಟಕ ಸರ್ಕಾರದ ಬ್ರಾಹ್ಮಣ ಅಭಿವೃದ್ಧಿ ನಿಗಮದ ನಿರ್ದೇಶಕರಾದ ಶ್ರೀ ವಸಂತ ನಾಡಜೋಶಿ ಆಗಮಿಸಿದ್ದರು. ಸಭೆಯಲ್ಲಿ ಶ್ರೀವಿಜಯೇಂದ್ರ ಇನಮ್ದಾರ್, ಶ್ರೀ ಸುದರ್ಶನ್ ದಿನ್ನಿಹಳ್ಳಿ ಶ್ರೀ ಡಿ.ಪಿ ಪಾಟೀಲ್ ಶ್ರೀ ಮುಜುಂದಾರ್ ಶ್ರೀ ಕಿರಣಗಡ್ ಮುಂತಾದ ಪ್ರಮುಖರು ಉಪಸ್ಥಿತರಿದ್ದರು. ಶ್ರೀ ವಸಂತ ನಾಡಜೋಶಿ ಮಾತನಾಡಿ ಸದಸ್ಯತ್ವ ಅಭಿಯಾನ ಪ್ರಾರಂಭವಾಗಿದ್ದು ಮಾನ್ಯ ಶ್ರೀ ಅಶೋಕ್ ಹಾರನಹಳ್ಳಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯಾಧ್ಯಕ್ಷರಾದ ಇವರ ನೇತೃತ್ವದಲ್ಲಿ ನಡೆಯುತ್ತಿದ್ದ ಎಲ್ಲರೂ ಸದಸ್ಯರಾಗಬೇಕೆಂದು ವಿನಂತಿಸಿಕೊಂಡರು. ವಿಪ್ರ ಸದಸ್ಯರಾಗಲು ಫಾರ್ಮನ್ನು ವಿತರಿಸಿದರು

## ರಾಯಚೂರಿನಲ್ಲಿ ಮಹಾಸಭೆ ಬಲ ಪಡಿಸುವ ಬಗ್ಗೆ ಚರ್ಚೆ



04-03-2022 ರಂದು ಸಂಜೆ ರಾಯಚೂರಿನಲ್ಲಿ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಮಹಾಸಭೆಯ ಸದಸ್ಯತ್ವ ಅಭಿಯಾನವನ್ನು ಶ್ರೀ ನರಸಿಂಗ ರಾವ್ ದೇಶಪಾಂಡೆ, ಶ್ರೀ ಗಿರೀಶ್ ಕನಕವಿಡು, ಅರವಿಂದ ಕುಲಕರ್ಣಿ, ರಾಘವೇಂದ್ರ ಚೂಡಾಮಣಿ , ಪ್ರಾಣೇಶ್ ಮುತಾಲಿಕ್ , ಹನುಮಂತ ರಾವ್ ದೇಸಾಯಿ, ವೆಂಕಟೇಶ್ ದೇಸಾಯಿ , ಶ್ರೀಪಾದ್ ದೇಸಾಯಿ , ವಿನೋದ್ ಕಕ್ಕೇರಿ ಮತ್ತು ಇನ್ನು ಹಲವು ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಹಾಸಭೆ ಬಲ ಪಡಿಸುವ ಬಗ್ಗೆ ಚರ್ಚಿಸಿದರು, ಉಪಾಧ್ಯಕ್ಷರಾದ ಆನಂದತೀರ್ಥ ಫಡ್ನಿಸ್ ಅವರು ಮಹಾಸಭಾದ ಸದಸ್ಯತ್ವ ಅಭಿಯಾನದ ಬಗ್ಗೆ ವಿವರಿಸಿದರು.

## ಮಲ್ಲೇಶ್ವರದ ಶೃಂಗೇರಿ ಮಠದಲ್ಲಿ



ದಿನಾಂಕ 05/03/2022 ರಂದು ಮಲ್ಲೇಶ್ವರದ ಶೃಂಗೇರಿ ಮಠದಲ್ಲಿ ಮಹಾಸಭಾದ ಕಾರ್ಯಕಾರಿಣಿ ಸದಸ್ಯರಾದ ಕೌಶಿಕ್ ಶಾಸ್ತ್ರಿ ಹಾಗು ಮಠದ ವ್ಯವಸ್ಥಾಪಕರಾದ ಜಿ ವಸಂತ ರಾವ್ ಅವರ ನೇತೃತ್ವದಲ್ಲಿ ಸದಸ್ಯತ್ವ ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು

## ಶ್ರೀ ನಿಮಿಷಾಂಭಾ ದೇವಿ ದೇವಸ್ಥಾನದಲ್ಲಿ ಸದಸ್ಯತ್ವ ಅಭಿಯಾನ



ಶುಕ್ರವಾರ ದಿನಾಂಕ 11-03-2022ರಂದು ರಾಜರಾಜೇಶ್ವರಿ ನಗರದ ಶ್ರೀ ಶ್ರೀ ನಿಮಿಷಾಂಬಾ ದೇವಿ ದೇವಸ್ಥಾನದಲ್ಲಿ ಚಂಡಿಕಾ ಹೋಮ ಕಾರ್ಯಕ್ರಮವನ್ನು ಭಕ್ತಾದಿಗಳೊಬ್ಬರು ಏರ್ಪಡಿಸಿದ್ದರು, ಈ ಸಂದರ್ಭ ದಲ್ಲಿ ಅನೇಕ ವಿಪ್ರ ಬಂಧುಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು, ಈ ಸುಸಂದರ್ಭದಲ್ಲಿ AKBMS ಸದಸ್ಯತ್ವ ಅಭಿಯಾನಕ್ಕೆ ಕಾರ್ಯಕಾರಿಣಿ ಸದ್ಯಸರಾದ ಎಸ್ ಕೆ ಕೌಶಿಕ್ ಮತ್ತು ಬೆಂಗಳೂರು ಉತ್ತರ ವಲಯದ ಸಹ ಸಂಚಾಲಕರುಗಳಾದ ಶ್ರೀ ಶ್ರೀ ಕಂಠಪ್ರಸಾದ್ , ಶ್ರೀ ಪುರುಷೋತ್ತಮ ರಾವ್ ಮತ್ತು ಶ್ರೀ ಜಗದೀಶ್ ಚಕ್ರ ಗಿರಿ ಚಾಲನೆ ನೀಡಿದರು, ಈ ಸಂದರ್ಭದಲ್ಲಿ ಮಹಿಳಾ ಮಂಡಳಿ ಸದಸ್ಯರುಗಳಾದ ಶ್ರೀಮತಿ ಕೆ ಎಸ್ ಮಹಾಲಕ್ಷ್ಮಿ , ಶ್ರೀಮತಿ ಶೋಭಾ , ಶ್ರೀಮತಿ ಅರುಣಾದೇವಿ ಅವರು ಉಪಸ್ಥಿತರಿದ್ದರು.

ಜಾಹೀರಾತು

**ವರ ಬೇಕಾಗಿದೆ**

**ಬಿ.ಎ., ಎಲ್.ಎಲ್.ಬಿ. (ವಕೀಲರು)**

**ಕನ್ಯೆಗೆ ಸೂಕ್ತ ವರ ಬೇಕಾಗಿದೆ.**

**9844505528, 9886358394**

**ಹೊಸಪೇಟೆ ನಗರದ ಸರ್ವೋತ್ತಮ ಟ್ರಸ್ಟ್ ನಲ್ಲಿ ಸದಸ್ಯತ್ವ ಅಭಿಯಾನ:**



ಹೊಸಪೇಟೆ ನಗರದ ಸರ್ವೋತ್ತಮ ಟ್ರಸ್ಟ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಾಗು ಹೊಸಪೇಟೆ ತಾಲೂಕು ಬ್ರಾಹ್ಮಣ ಸಂಘದ ಆಶ್ರಯದಲ್ಲಿ ಸದಸ್ಯತ್ವ ಅಭಿಯಾನ ಯಶಸ್ವಿಯಾಗಿ ನಡೆಯಿತು. ಸಭೆಯಲ್ಲಿ ಟ್ರಸ್ಟ್ ಪದಾಧಿಕಾರಿಗಲಾದ ವಿ.ಡಿ ಜೋಶಿ , ಬಿ.ಕೆ ನಾಗರಾಜ್ ರಾವ್ ,ರಾಮಬ್ರಹ್ಮಮ್ ಶ್ರೀಯುತ ಇಟಗಿ ಹಾಗು ಹಿರಿಯ ಉಪಾಧ್ಯಕ್ಷ ಹಾಗು ಹಿರಿಯ ವಕೀಲರಾದ ಕೆ. ಪ್ರಭಾಕರ್ ರಾವ್, ಧಾರ್ಮಿಕ ಪರಿಷತ್ ಸದಸ್ಯ ಅನಿಲ್ ಜೋಶಿ ಉಪಸ್ಥಿತರಿದ್ದರು ಹಾಗು ರಾಜ್ಯ ಮಹಾಸಭಾದ ಕಾರ್ಯಕಾರಿ ಮಂಡಳಿ ಜಿಲ್ಲಾ ಪ್ರತಿನಿಧಿ ಹಾಗು ಹಿರಿಯ ವಕೀಲ ಉಮೇಶ್.ಹೆಚ್ ಜ್ಯೋತಿ ಬೆಳಗಿಸುವ ಮೂಲಕ ನಗರದ ಧ್ಯಾನ ಆಂಜನೇಯ ಸ್ವಾಮಿ ದೇವಸ್ಥಾನ ದಲ್ಲಿ ಉದ್ಘಾಟಿಸಿದರು, ಹಿರಿಯ ವಕೀಲ ಹಾಗು ಸಂಗೀತ ಭಾರತಿಯ ಎಚ್. ಪಿ ಕಲ್ಲಂಭಟ್ ಅಚ್ಚುಕಟ್ಟಾಗಿ ಕಾರ್ಯಕ್ರಮ ನಿರೂಪಿಸಿದರು .

**ಕಾರ್ಯಕಾರಿಣಿ ಸದಸ್ಯರಾದ ಶ್ರೀಮತಿ ಶಶಿಕಲಾ ಅವರಿಂದ ವಿಜಯನಗರದ ಮೈತ್ರಿ ಮಹಿಳಾ ಮಂಡಳಿಯಲ್ಲಿ ಸದಸ್ಯತ್ವ ಅಭಿಯಾನ:**





**ಚಿಂತಾಮಣಿ ತಾಲ್ಲೂಕಿನಲ್ಲಿ** ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸದಸ್ಯತ್ವ ಅಭಿಯಾನವನ್ನು ಹಮ್ಮಿಕೊಂಡಿದ್ದು ಒಟ್ಟು 219 ಸದಸ್ಯತ್ವಕ್ಕೆ ನೊಂದಣಿಯಾಗಿರುವ ಪತ್ರಗಳನ್ನು ಹಾಗೂ 1,09,000 ಹಣವನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದಂತಹ ಅಶೋಕ್ ಹಾರನಹಳ್ಳಿ ಅವರಿಗೆ ನೀಡಲಾಯಿತು.

**ಹುಬ್ಬಳ್ಳಿಯಲ್ಲಿ ಮಾಜಿ ಮುಖ್ಯಮಂತ್ರಿ ಶ್ರೀ ಜಗದೀಶ್ ಶೆಟ್ಟರ್ ಅವರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರಾದ ಶ್ರೀ ಪ್ರಮೋದ ಮನೋಳಿ ಅವರನ್ನು ಸನ್ಮಾನಿಸಿದರು:**



## ಉದಾರ ದೇಣಿಗೆ ನೀಡಲು ಮನವಿ

ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರ ಸಮರ್ಥ ಮಾರ್ಗದರ್ಶನದಲ್ಲಿ ಗಾಯತ್ರೀ ಭವನದ ನವೀಕರಣವನ್ನು, ವಿದ್ಯಾವಾಸಿನಿ ಮಹಿಳಾ ವಿದ್ಯಾರ್ಥಿನಿಲಯದ ನವೀಕರಣವನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಕಾಮಗಾರಿಗೆ ಸಾಕಷ್ಟು ಧನ ಸಂಪನ್ಮೂಲದ ಅಗತ್ಯವಿದೆ. ಈ ದಿಶೆಯಲ್ಲಿ ತಮ್ಮ ಸಹಾಯವನ್ನು ನಿರೀಕ್ಷಿಸುತ್ತೇವೆ. ಮಹಾಸಭಾದ ಅಂಗಸಂಸ್ಥೆಯಾದ ಸಪ್ತರ್ಷಿ ಫೌಂಡೇಷನ್ ಹೆಸರಿನಲ್ಲಿ ತಾವು ಚೆಕ್ ಅನ್ನು ನೀಡಬಹುದು. ತಾವು ಉದಾರವಾಗಿ ನೀಡಿದ ಹಣಕ್ಕೆ 80ಜಿ ತೆರಿಗೆ ವಿನಾಯಿತಿ ಇದೆ. ತಾವು ನಮ್ಮೊಂದಿಗೆ ಈ ಕಾರ್ಯದಲ್ಲಿ ಕೈಜೋಡಿಸಬೇಕಾಗಿ ಸವಿನಯ ಕೋರಿಕೆ.

**ಬ್ಯಾಂಕ್ ವಿವರ**

| | | |
|---|---|---|
| ಬ್ಯಾಂಕ್ | : | ಕರ್ನಾಟಕ ಬ್ಯಾಂಕ್ |
| ಖಾತಾ ಹೆಸರು | : | ಸಪ್ತರ್ಷಿ ಫೌಂಡೇಷನ್ |
| ಖಾತಾ ಸಂಖ್ಯೆ | : | 1072500102061001 |
| ಐಎಫ್‌ಎಸ್‌ಸಿ | : | KARB0000107 |
| ಶಾಖೆ | : | ಬನಶಂಕರಿ ಎರಡನೇ ಹಂತ, ಬೆಂಗಳೂರು |

# ಶ್ರೀಜಯತೀರ್ಥವಿದ್ಯಾಪೀಠದ ಶ್ರೀಮನ್ನ್ಯಾಯಸುಧಾಮಂಗಲಮಹೋತ್ಸವ

ಪಂ. ಶ್ರೀಧರಾಚಾರ್ಯ ಹೆಚ್. ಎಲ್.



ಗುರುಕುಲ ವಿದ್ಯಾರ್ಜನೆಯು ಮರುಕಳಿಸುತ್ತಿರುವ ರೀತಿಯಲ್ಲಿ ಸಾಕ್ಷಿಯಾದ ಸುಧಾಮಂಗಲ ಮಹೋತ್ಸವವು ಬೆಂಗಳೂರಿನ ಉತ್ತರಾದಿಮಠ ಹಾಗೂ ಗುಲಬರ್ಗಾ ಜಿಲ್ಲೆಯ ಕಾಗಿಣೀ ನದೀತೀರ ಮಳಖೇಡ ಕ್ಷೇತ್ರದಲ್ಲಿ ಬಹಳ ಅಭೂತಪೂರ್ವ ರೀತಿಯಲ್ಲಿ ನಡೆಯಿತು.

ಏನಿದು? "ಶ್ರೀಮನ್ನ್ಯಾಯಸುಧಾಮಂಗಲಮಹೋತ್ಸವ" ಶ್ರೀ ಮಧ್ವಾಚಾರ್ಯರು ಬ್ರಹ್ಮಸೂತ್ರಗಳಿಗೆ ರಚಿಸಿದ "ಅನುವ್ಯಾಖ್ಯಾನ"ದ ಟೀಕಾ, ಲೋಕಪ್ರಸಿದ್ಧವಾದ, ಪಂಡಿತರೆಂದು ಮಾನ್ಯವಾಗಲಿಕ್ಕೆ ಶಾಸ್ತ್ರಾಧ್ಯಯನದ ಪರಿಪೂರ್ಣತೆಗೆ ಮಾನದಂಡವೆನಿಸಿದ ಮೇರುಕೃತಿ ಅದುವೇ "ಶ್ರೀಮನ್ನ್ಯಾಯಸುಧಾ". ಇದನ್ನು ರಚಿಸಿಕೊಟ್ಟವರು ಮಧ್ವಾಚಾರ್ಯರ ಗ್ರಂಥಗಳಿಗೆ ಅತ್ಯಭೂತಪೂರ್ವವಾದ ರೀತಿಯಲ್ಲಿ ಟೀಕೆಗಳನ್ನು ರಚಿಸಿ, ಜಗತ್ತಿನಲ್ಲಿ ಟೀಕಾರಾಯರೆಂದೇ ಪ್ರಸಿದ್ಧರಾದ, 14ನೇ ಶತಮಾನದ ಸಮಸ್ತ ಶಾಸ್ತ್ರಗಳ ಪಾಂಡಿತ್ಯಮೇರುಗಳಾದ, ದ್ವೈತಮತ ಪರಮಹಂಸಪೀಠದ ಪರಂಪರೆಯಲ್ಲಿ ಬಂದಿರುವ "ಶ್ರೀಮಜ್ಜಯತೀರ್ಥರು". ಇವರ ಮೂಲವೃಂದಾವನ ಕಾಗಿಣೀತಟ ಮಳಖೇಡ ಕ್ಷೇತ್ರದಲ್ಲಿದೆ.

"ಶ್ರೀಮನ್ನ್ಯಾಯಸುಧಾ" ಗ್ರಂಥದ ಅಧ್ಯಯನಕ್ಕೆ ಮೂಲವಾಗಿ ಕಾವ್ಯ, ವ್ಯಾಕರಣ, ಮೀಮಾಂಸಾ, ತರ್ಕಶಾಸ್ತ್ರ, ವೇದಾಂತದ ಆರಂಭಿಕ ಗ್ರಂಥಗಳು ಇವುಗಳಲ್ಲೆಲ್ಲ ಆಳವಾದ ಪಾಂಡಿತ್ಯ ಸಂಪಾದಿಸಿಯೇ ಸುಧೆಯ ಅಧ್ಯಯನ ಸಾಧ್ಯವಾಗಿರುವಂತದ್ದಾಗಿದೆ.

ಪ್ರಕೃತ ಜಯತೀರ್ಥವಿದ್ಯಾಪೀಠವು ದ್ವೈತವೇದಾಂತದಲ್ಲಿ ವಿಶೇಷ ಶಿಕ್ಷಣ ಗುರುಕುಲ ಮಾದರಿಯಲ್ಲಿ ನಡೆದುಬಂದಿದೆ. ಸಣ್ಣ ಬಾಲಕರಾಗಿ ಉಪನೀತರಾಗಿ ಬರುವ ಚಿಣ್ಣರಿಗೆ ಇಲ್ಲಿ ಸ್ನಾನ, ಸಂಧ್ಯಾ, ಆಚಾರ, ವಿಚಾರ ಹಾಗೂ ಮೇಲೆ ತಿಳಿಸಿದ ಎಲ್ಲ ಶಾಸ್ತ್ರಗಳ ಪಾಠಗಳು ಉತ್ತಮ ನುರಿತ ಆಳಪಾಂಡಿತ್ಯವುಳ್ಳ ಅಧ್ಯಾಪಕರಿಂದ ನಡೆದುಬರುತ್ತಿದೆ.

ಜೊತೆಯಲ್ಲಿ ಇಲ್ಲಿ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳ ಸರ್ವತೋಮುಖವಾದ ಉಪಾಹಾರ, ವಸ್ತ್ರ, ವಸತಿ ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ಪೂರ್ಣದಿಗ್ದರ್ಶನ, ಅನುಗ್ರಹ, ಆಶೀರ್ವಾದ ಪ್ರಸ್ತುತಪೀಠದಲ್ಲಿ ವಿರಾಜಮಾನರಾದ ಪರಮಪೂಜ್ಯ ಶ್ರೀಸತ್ಯಾತ್ಮ ತೀರ್ಥಶ್ರೀಪಾದರಿಂದ ಇದೆ.

ಈ ಸಂಸ್ಥೆಯ ಪ್ರಾಂಶುಪಾಲರಾದ ವಿದ್ವಾಂಸ ಡಾ॥ ಸತ್ಯಧ್ಯಾನಾಚಾರ್ ಕಟ್ಟಿ. ಇವರಂತೂ ಹಗಲು ಇರುಳು ಅತ್ಯಂತ ಪ್ರೇಮಪ್ರೀತಿಗಳಿಂದ ವಿದ್ಯಾರ್ಥಿಗಳ ಭೋಜನ, ಆರೋಗ್ಯ, ಆಟ, ಪಾಠ ಇವುಗಳ ಬಗ್ಗೆ ವಿಶೇಷ ಕಾಳಜಿವಹಿಸುವುದಲ್ಲದೇ ಸ್ವಯಂ ತಾವು ಕೂಡ ಉದ್ಗ್ರಂಥಗಳ ಪಾಠ ಹೇಳಿ ಚಿಂತನ ಮಾಡಿಸುತ್ತಾರೆ. ಅಲ್ಲದೇ ವಿದ್ಯಾರ್ಥಿಗಳ ಕೌಟುಂಬಿಕ ಆರ್ಥಿಕ ಪರಿಸ್ಥಿತಿ, ಆರೋಗ್ಯ ಮೊದಲಾದ ವಿಷಯಗಳಲ್ಲಿ ಮುತುವರ್ಜಿವಹಿಸಿ, ಸಹಾಯಹಸ್ತ ಚಾಚಿ, ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಯಾವ ಕುಂದು ಕೊರತೆಗಳು ಬಾರದಂತೆ ನೋಡಿಕೊಳ್ಳುತ್ತಾರೆ.

ಪಂ॥ ವಿದ್ಯಾಧೀಶಾಚಾರ್ಯರು ವಿದ್ಯಾರ್ಥಿಗಳಿಗೆ ಪಾಠ ಹೇಳುವುದಲ್ಲದೇ ಶ್ರೀಗಳಿಂದ ಸ್ಥಾಪಿತವಾದ "ವಿಶ್ವಮಧ್ವ

ಮಹಾಪರಿಷತ್" ಈ ಸಂಸ್ಥೆಯ ನಿರ್ದೇಶಕರಾಗಿದ್ದಾರೆ. ಪ್ರಾಚೀನ ಹಸ್ತಪ್ರತಿಗಳ ಸಂಶೋಧನೆ ಮುಂತಾದ ಕಾರ್ಯಗಳಲ್ಲಿ ವಿದ್ಯಾಪೀಠದಿಂದ ಹೊರಬಂದಿರುವ ಪಂಡಿತರನ್ನು ನಿಯಮಿಸಿ, ಪಂಡಿತರ ಪೋಷಣೆಯ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಅಲ್ಲದೇ ದೇಶದ ನಾನಾ ಭಾಗದಲ್ಲಿ ಧರ್ಮಪ್ರಚಾರ ಆಗುವಂತೆ ಪಂಡಿತರಿಗೆ ದಿಗ್ದರ್ಶನ ಮಾಡಿ ಸಮಾಜದಲ್ಲಿ ಧರ್ಮಜಾಗೃತಿ ಮೂಡಿಸುತ್ತಿದ್ದಾರೆ. ಶ್ರೀಮಠದ ಎಲ್ಲ ಕಾರ್ಯಕ್ರಮಗಳು ದೇಶದಲ್ಲಿ ಎಲ್ಲಿ ನಡೆದರೂ ಅದರ ಸಮಸ್ತ ಜವಾಬ್ದಾರಿಯನ್ನು ಹೊತ್ತು ಸುವ್ಯವಸ್ಥಿತ ರೀತಿಯಲ್ಲಿ ನಡೆಸುತ್ತಾರೆ. ಅದರಂತೆ ವಿದ್ಯಾಪೀಠದಲ್ಲಿ ಅನೇಕ ಉತ್ತಮ ಅಧ್ಯಾಪಕರು ಶ್ರೀಮಠದ ಸೇವಾಮನೋಭಾವದಿಂದ ವಿದ್ಯಾರ್ಥಿಗಳಿಗೆ ಪಾಠಮಾಡುತ್ತಾರೆ.

"ಶ್ರೀಮನ್ನ್ಯಾಯಸುಧಾ" ಎಂದರೆ ಜಗತ್ತು, ಸೃಷ್ಟಿ, ದೇವರು, ಜೀವ, ಜ್ಞಾನ, ಅಜ್ಞಾನ, ಭ್ರಾಂತಿ, ಸಂಸಾರ, ಮುಕ್ತಿ, ಪ್ರಮಾಣಗಳು, ಪ್ರಮೇಯಗಳು ಈ ಎಲ್ಲ ವಿಚಾರಗಳ ಬಗ್ಗೆ ಇಡೀ ಭರತಖಂಡದಲ್ಲಿ ಹಿಂದಿನಿಂದಲೂ ಇರುವ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಾಕ್ತದರ್ಶನ, ಜೈನ, ಬೌದ್ಧ, ಚಾರ್ವಾಕ, ವೈಶೇಷಿಕ, ತಾರ್ಕಿಕ, ಮೀಮಾಂಸಕ, ಮಾಧ್ಯಮಿಕ, ಭಾಸ್ಕರವಾದ, ಪಾಶುಪತ, ವೈಭಾಷಿಕ, ಸಾಂಖ್ಯ ಈ ಎಲ್ಲ ಭಾರತೀಯ ಶಾಸ್ತ್ರವಿಚಾರಗಳ ಆಳವಾದ ವಿಮರ್ಶೆ ಮತ್ತು ಯಾವುದು ಸತ್ಯವಾದದ್ದು, ಪ್ರಾಮಾಣಿಕವಾದದ್ದು ಎಂಬ ತಿಳುವಳಿಕೆಗೆ ಬ್ರಹ್ಮಸೂತ್ರಗಳೆಂಬ ನ್ಯಾಯಾನುಸಂಧಾನ, ಆ ಅನುಸಂಧಾನ ನಿರ್ದಿಷ್ಟ ಕ್ರಮದಲ್ಲಿಯೇ ಇರಬೇಕೆಂಬ ವಿಷಯದಲ್ಲಿ ಪ್ರಮಾಣಗಳ ಅಳವಡಿಕೆ, ಹೀಗೆ ಈ ಎಲ್ಲ ಸಮಸ್ತ ವಿಚಾರಗಳನ್ನು ದೀರ್ಘವಾಗಿ ತಿಳಿಸಿಕೊಡುವ ಕೃತಿ. ಅದು ಅತ್ಯಂತ ಶ್ರೇಷ್ಠಗ್ರಂಥ.

ಉತ್ತಾರಾದಿಮಠದ ಪ್ರಕೃತ ಪೀಠಾಧೀಶರಾದ ಶ್ರೀಸತ್ಯಾತ್ಮ ತೀರ್ಥರು ಸ್ವಯಂ ಚತುಃಶಾಸ್ತ್ರಗಳಲ್ಲಿ ಉತ್ತಮ ಪ್ರಾವೀಣ್ಯ ಪಡೆದವ ರಾಗಿದ್ದು, ವ್ಯಾಕರಣ, ತರ್ಕ, ಮೀಮಾಂಸಾ, ವೇದಾಂತಗಳಲ್ಲಿ ಪಾಂಡಿತ್ಯದ ಮೇರು ಆಗಿದ್ದಾರೆ. ಕನ್ನಡ, ಇಂಗ್ಲಿಷ್, ಹಿಂದಿ, ಮರಾಠಿ, ತಮಿಳು, ಸಂಸ್ಕೃತ ಇತ್ಯಾದಿ ಭಾಷೆಗಳಲ್ಲಿ ನಿರರ್ಗಳವಾಗಿ ಮಾತಾಡ ಬಲ್ಲ ಕುಶಲತೆ ಹೊಂದಿದ್ದಾರೆ. ಸನ್ಯಾಸಿ ಜೀವನಕ್ರಮದ ಅತಿಕಾಠಿಣ್ಯ ಸಂಪ್ರದಾಯಬದ್ಧರಾಗಿದ್ದು ನಿರಂತರ ಸಂಸ್ಥಾನದ ಮೂಲರಾಮರ ಪೂಜಾಕ್ರಮ, ಆಚಾರ-ವಿಚಾರಗಳಲ್ಲಿ ಸ್ವಲ್ಪವೂ ಲೋಪವಾಗದಂತೆ ಜಗನ್ಮಾನ್ಯರಾಗಿದ್ದಾರೆ.

ವಿದ್ಯಾಪೀಠದಿಂದ ಸುಧಾಧ್ಯಯನಕ್ಕೆ ತಮ್ಮ ಬಳಿ ಬಂದ ವಿದ್ಯಾರ್ಥಿಗಳಿಗೆ "ಶ್ರೀಮನ್ನ್ಯಾಯಸುಧಾ" ಅಲ್ಲದೇ ಭಾಗವತ, ಪ್ರೌಢ ವ್ಯಾಕರಣ ತರ್ಕಗ್ರಂಥಗಳ ಪಾಠವನ್ನೂ ಹೇಳುತ್ತಾರೆ. ಸಮಾಜದ ಭಕ್ತರೆಲ್ಲರ ಮನೆಮನೆಗೆ ಭೇಟಿ ನೀಡಿ ರಾಮಪ್ರಸಾದದೊಂದಿಗೆ ಜ್ಞಾನಾಮೃತ ಉಪದೇಶವನ್ನು ನೀಡುತ್ತಾರೆ.

ಶ್ರೀಸತ್ಯಾತ್ಮತೀರ್ಥರು ಕಳೆದ ಎರಡು ವರ್ಷಗಳಿಂದ ಕರೋನ ನಿಮಿತ್ತ ಆಂಧ್ರದ ಗೋದಾವರೀತೀರ ಸುವರ್ಣಪುರಿಯಲ್ಲಿ ಒಂದೇಕಡೆ ಇದ್ದು, ಸತತ ಎರಡು ವರ್ಷ ಇಪ್ಪತ್ತು ಜನ ವಿದ್ಯಾರ್ಥಿಗಳಿಗೆ "ಶ್ರೀಮನ್ನ್ಯಾಯಸುಧಾ" ಪಾಠ ಹೇಳಿ, ಉತ್ತಮರೀತಿಯಲ್ಲಿ ತಯಾರು ಮಾಡಿಸಿ, ಫೆಬ್ರುವರಿ 28ರಿಂದ ಆರುದಿನಗಳ ಕಾಲ ತಮ್ಮ 11ನೇ "ಶ್ರೀಮನ್ನ್ಯಾಯಸುಧಾಮಂಗಲ"ದ ನಿಮಿತ್ತ ಬೆಂಗಳೂರಿನ ಉತ್ತರಾದಿ ಮಠದಲ್ಲಿ ಪರೀಕ್ಷೆಗಳನ್ನು ವಿದ್ವಾಂಸರ ಮೂಲಕ ಮಾಡಿಸಿದ್ದಾರೆ.

ಬೆಂಗಳೂರಿನ ಶ್ರೀದಿಗ್ವಿಜಯ ಲಕ್ಷ್ಮೀನರಸಿಂಹದೇವರ ಸನ್ನಿಧಾನ ಉತ್ತರಾದಿಮಠದಲ್ಲಿ ನಡೆದ ಸುಧಾಪರೀಕ್ಷೆ ಅನುವಾದಗಳು ಎಲ್ಲ ಶ್ರೇಷ್ಠಯತಿಗಳ, ವಿದ್ವಾಂಸರ, ಪಾಲಕರ, ಪೋಷಕರ, ವಿದ್ಯಾಪೀಠದ ಅಧ್ಯಾಪಕರ, ಸಮಸ್ತ ಭಕ್ತಾಭಿಮಾನಿಗಳ ಮನಸೂರೆಗೊಂಡು ಇಡೀ ಭಕ್ತವೃಂದಕ್ಕೆ ಜ್ಞಾನಸತ್ರದ ಪ್ರತಿಕ್ಷಣ ಅವಿಸ್ಮರಣೀಯವಾಗಿ ಉಳಿಯುವಂತಾಯಿತು.

ನೂರಾರು ವಿದ್ವಾಂಸರ ಸಮ್ಮುಖದಲ್ಲಿ 20 ವಿದ್ಯಾರ್ಥಿಗಳು ಎಲ್ಲಿ ಕೇಳಿದರಲ್ಲಿ ಅರಳು ಹುರಿದಂತೆ ಉತ್ತರಿಸುತ್ತಿದ್ದರು. ಐದಾರು ಸಾವಿರ ಪುಟಗಳ ಗ್ರಂಥದಲ್ಲಿರುವ ವಿಚಾರಗಳು, ಅದು ಸರ್ವಶಾಸ್ತ್ರದ ವಿಚಾರ, ತರ್ಕಬದ್ಧನಿರೂಪಣೆ, ವ್ಯಾಕರಣವಿಚಾರಗಳ ಬುದ್ಧಿಕೌಶಲ್ಯ, ಪ್ರಮಾಣಗಳ ಸಮುದ್ರದ ಸಿಂಚನ, ಸಮರ್ಥನಾಕ್ರಮ, ಅರ್ಥಗಳ ನಿರೂಪಣೆ, ಶಬ್ದಗಳ ವ್ಯುತ್ಪತ್ತಿ ಹೀಗೆ ಪ್ರಶ್ನೆಗಳ ಮೇಲೆ ಪ್ರಶ್ನೆಗಳು.

ಕೆಲವು ವಿದ್ಯಾರ್ಥಿಗಳು ಕೆಲವು ಅಧಿಕರಣಗಳ ಪರೀಕ್ಷೆ ನೀಡಿದರೆ, ಕೆಲವರು ಕೆಲವು ಅಧ್ಯಾಯಗಳ ಪರೀಕ್ಷೆ ಕೊಟ್ಟರು. ಹೀಗೆ ಅವರವರ ಪರೀಕ್ಷಾ ಅನುವಾದ ವಿಷಯಗಳಿಗೆ ತಕ್ಕಂತೆ ಅವರವರಿಗೆ ನ್ಯಾಯಯುತವಾದ ಸಮಯವಿತರಣೆ, ಪರೀಕ್ಷಕರಾದ ವಿದ್ವಾಂಸರ ವ್ಯವಸ್ಥೆ ಹೀಗೆಲ್ಲ ಸಮರ್ಪಕ ರೀತಿಯಲ್ಲಿತ್ತು.

ಆರು ಜನ ವಿದ್ಯಾರ್ಥಿಗಳಂತೂ ಸಂಪೂರ್ಣ "ಶ್ರೀಮನ್ನ್ಯಾಯ ಸುಧಾ" ಪರೀಕ್ಷೆ ನೀಡಿದವರು. ಸುಮಾರು 8 ರಿಂದ 10 ಗಂಟೆಗಳ ಕಾಲ ಪ್ರತಿಯೊಬ್ಬರ ಪರೀಕ್ಷೆ ಆಯಿತು. ಗ್ರಂಥದ ಪ್ರತಿಭಾಗದಲ್ಲೂ ಪರೀಕ್ಷೆ ನಡೆಸಿದ ವಿದ್ವಾಂಸರು ತಲೆದೂಗಿದರು. ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ, ಎಲ್ಲ ವಿದ್ವಾಂಸರ ಉತ್ಥಾನ-ಗೌರವದೊಂದಿಗೆ ಕರತಾಡನದಿಂದ ಅಭಿನಂದನೆಯನ್ನು ಪಡೆದರು.

ದೇವೇಂದ್ರ ಶರ್ಮ ಹಾಗೂ ಪ್ರಮೋದ ಕಟ್ಟಿ ಈ ಇಬ್ಬರು ವಿದ್ಯಾರ್ಥಿಗಳು ಸ್ವಲ್ಪವೂ ತಡಬಡಿಸದಂತೆ ನಿರರ್ಗಳವಾಗಿ ಸಂಸ್ಕೃತಭಾಷೆಯಲ್ಲಿ ಪರೀಕ್ಷೆ ನೀಡಿ, ಉಪಸ್ಥಿತರಿದ್ದ ಯತಿಗಳ ಹಾಗೂ ಎಲ್ಲ ವಿದ್ವಾಂಸರ ವಿಶೇಷ ಮೆಚ್ಚುಗೆಗೆ ಪಾತ್ರರಾದರು. ಕಾಶೀ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಪಂ॥ ರಾಜಾರಾಮ್ ಶುಕ್ಲ

ಹಾಗೂ ಪಂ. ಸತ್ತಿಗೇರಿ ಧೀರೇಂದ್ರಾಚಾರ್ಯ, ಪಂ. ಮಾಹುಲಿ ವಿದ್ಯಾಸಿಂಹಾಚಾರ್ಯ ಮೊದಲಾದ ಹಿರಿಯ ವಿದ್ವಾಂಸರು ಇವರ ವಿಶೇಷ ಪರಿಶ್ರಮ, ಪ್ರತಿಭೆಗಳನ್ನು ಮುಕ್ತಕಂಠದಿಂದ ಹೊಗಳಿ ಹರಸಿದರು.

ಈ ಸುಧಾಮಂಗಲಮಹೋತ್ಸವದಲ್ಲಿ ಪರೀಕ್ಷಕರಾಗಿ ಆಗಮಿಸಿ, ಪ್ರಶ್ನೆಗಳನ್ನು ಕೇಳಿ, ಆನಂದಿಸಿ, ಹಾರೈಸಿದ ವಿದ್ವಾಂಸರು ನೂರಾರು. ಅವರಲ್ಲಿ ಪಂ॥ ಮಾಹುಲಿ ವಿದ್ಯಾಸಿಂಹಾಚಾರ್ಯರು, ಪಂ॥ ಸತ್ತಿಗೇರಿ ಧೀರೇಂದ್ರಾಚಾರ್ಯರು, ಪಂ॥ಹರಿದಾಸಾಚಾರ್ಯರು, ಪಂ॥ ಸತ್ಯನಾರಾಯಣಾಚಾರ್ಯರು, ಪಂ॥ ಚಿಟಗುಪ್ಪ ಪದ್ಮನಾಭಾಚಾರ್ಯರು, ಪಂ॥ ಕೊರ್ಲಹಳ್ಳಿ ನರಸಿಂಹಾಚಾರ್ಯರು, ಪಂ॥ ರುಚಿರಾಚಾರ್ ಬಾಳಗಾರು, ಪಂ॥ ಶಾಮಾಚಾರ್ಯ ಬಂಡಿ ಇವರೇ ಮೊದಲಾದವರು.

ಈ ಶುಭ ಸಂದರ್ಭದಲ್ಲಿ ಶ್ರೀ ಸತ್ಯಾತ್ಮತೀರ್ಥಶ್ರೀಪಾದರ ಪ್ರೀತಿಯ ಅಭಿಮಾನದ ಆಮಂತ್ರಣಕ್ಕೆ ಓಗೊಟ್ಟು ಆಗಮಿಸಿ, ಉಪಸ್ಥಿತರಿದ್ದು, ಪ್ರಶ್ನೆಗಳನ್ನು ಕೇಳಿ, ಆನಂದಿಸಿ, ಪ್ರೋತ್ಸಾಹ ನೀಡಿ, ಆಶೀರ್ವದಿಸಿದ ಯತಿಗಳು ಈ ಕೆಳಕಂಡಂತೆ :

ಶ್ರೀಶ್ರೀವಿದ್ಯಾಧೀಶತೀರ್ಥರು ಫಲಿಮಾರುಮಠ, ಶ್ರೀಶ್ರೀವಿಶ್ವಪ್ರಸನ್ನ ತೀರ್ಥರು ಪೇಜಾವರಮಠ, ಶ್ರೀ ಶ್ರೀವಿದ್ಯಾಪ್ರಸನ್ನತೀರ್ಥರು ಸುಬ್ರಹ್ಮಣ್ಯಮಠ, ಶ್ರೀ ಶ್ರೀಈಶಪ್ರಿಯತೀರ್ಥರು ಅದುಮಾರಮಠ ಚಿಕ್ಕಪಟ್ಟ, ಶ್ರೀ ಶ್ರೀವಿದ್ಯೇಂದ್ರತೀರ್ಥರು ಚಿತ್ರಾಪುರಮಠ, ಶ್ರೀಶ್ರೀವಿದ್ಯೇಶತೀರ್ಥರು ಭಂಡಾರಕೆರೆಮಠ, ಶ್ರೀಶ್ರೀವಿದ್ಯಾವಲ್ಲಭತೀರ್ಥರು ಕಾಣಿಯೂರುಮಠ, ಶ್ರೀಶ್ರೀರಘುವರೇಂದ್ರತೀರ್ಥರು ಭೀಮನಕಟ್ಟೆ ಮಠ, ಶ್ರೀ ಶ್ರೀರಘುಭೂಷಣತೀರ್ಥರು ಬಾಳಗಾರುಮಠ, ಶ್ರೀಶ್ರೀಸುವಿದ್ಯೇಂದ್ರತೀರ್ಥರು ಶ್ರೀರಾಘವೇಂದ್ರಸ್ವಾಮಿಗಳಮಠ, ಶ್ರೀಶ್ರೀರಘುವಿಜಯತೀರ್ಥರು ಕೂಡ್ಲಿ ಆರ್ಯಅಕ್ಷೋಭ್ಯತೀರ್ಥಮಠ, ಶ್ರೀಶ್ರೀವಿದ್ಯಾಶ್ರೀಶತೀರ್ಥರು ವ್ಯಾಸರಾಜ ಮಠ ಸೊಸಲೆ, ಶ್ರೀಶ್ರೀಸುಜಯನಿಧಿತೀರ್ಥರು ಶ್ರೀಪಾದರಾಜಮಠ.

ಈ ಶುಭಸಂದರ್ಭದಲ್ಲಿ ಸಮಾಜದ ಅನೇಕ ಗಣ್ಯರು "ಶ್ರೀಮನ್ನ್ಯಾಯಸುಧಾ" ಮಂಗಲಕ್ಕೆ ಆಗಮಿಸಿ ಶ್ರೀಪಾದರ ಆಶೀರ್ವಾದ ಪಡೆದರು. 1) ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಎಸ್.ಆರ್. ಬೊಮ್ಮಾಯಿ ಅವರು ಮಾತನಾಡುತ್ತಾ, "ವೇದಗಳ ಅರ್ಥಭಾವ ತಿಳಿದಾಗ ಜೀವನದಲ್ಲಿ ವ್ಯಕ್ತಿತ್ವದ ಬದಲಾವಣೆ ಯಾಗುತ್ತದೆ. ನೀವೆಲ್ಲ ಇಷ್ಟು ಬೃಹತ್ ಶಾಸ್ತ್ರದ ಪರೀಕ್ಷೆ ಕೊಡುತ್ತಿದ್ದೀರಿ ಎಂದರೆ ನಿಮ್ಮ ಜ್ಞಾನ, ಬುದ್ಧಿಮತ್ತೆ, ಉಚ್ಚಾರಣಾ ಸಾಮರ್ಥ್ಯ ಇವೆಲ್ಲಾ ದೇಶದ ಸಂಪತ್ತು. ಈ ಸನಾತನಧರ್ಮ ಉಳಿಯಲಿ ಬೆಳೆಯಲಿ. ಈ ಜಗತ್ತಿನಲ್ಲಿ ಧರ್ಮದ ಬೇರು ಅಲುಗಾಡಿದಾಗ ಶ್ರೀಸತ್ಯಾತ್ಮರಂಥ ಮಹಾನುಭಾವರು ಅವತರಿಸಿ ಸನಾತನಧರ್ಮವನ್ನು ಗಟ್ಟಿ ಮಾಡುತ್ತಾರೆ. ಏನಾದರೂ ಆಗಲಿ! ಸೂರ್ಯಚಂದ್ರ ಇರುವವರೆಗೆ ಸನಾತನಧರ್ಮ ಇರುತ್ತದೆ. ಜಗತ್ತಿನ ಇಂದಿನ ಯುದ್ಧದ ವಾತಾವರಣದಲ್ಲಿ ಸಾಮಾನ್ಯ ಜನರಿಗೂ ಮುಟ್ಟುವಂತೆ ವೇದದ ಭಾವಾರ್ಥ ತಲುಪಬೇಕಾಗಿದೆ" ಎಂದರು. 2) ಲೋಕಸಭಾ ಸದಸ್ಯ ಶ್ರೀ ತೇಜಸ್ವಿಸೂರ್ಯ ಅವರು ಮಾತನಾಡುತ್ತಾ "ಮಠಗಳು ಯಾಕೆ ವಿಜೃಂಭಣೆ ಇಂದ ಇರಬೇಕು? ದೇವಸ್ಥಾನಗಳು ಯಾಕೆ ಸರ್ಕಾರದ ಸುಪರ್ದಿ ಇಲ್ಲದೆಯೆ ಸಮಾಜದ ಸುಪರ್ದಿಯಲ್ಲಿರಬೇಕು? ಈ ಪ್ರಶ್ನೆಗಳಿಗೆ ಉತ್ತರ – ಮಠಗಳು, ಮಠಾಧಿಪತಿಗಳು, ವಿದ್ವಾಂಸರು, ದೈವೀಕಾರ್ಯಗಳನ್ನ ಆಧ್ಯಾತ್ಮಕಾರ್ಯಗಳನ್ನು ನಡೆಸಿದಾಗ ಯಾವ ರೀತಿ ನಡೆಯುತ್ತೆ? ಯಾವ ರೀತಿ ಅದು ಉಳಿದುಕೊಂಡು ಬರುತ್ತೆ? ಅನ್ನೊದಕ್ಕೆ ಒಂದು ಜೀವಂತ ಉದಾಹರಣೆ ಅದು ಉತ್ತಾರಾದಿಮಠ. ಈ ದೇಶದಲ್ಲಿ ಪರಂಪರಾಗತವಾಗಿ ಬಂದಂತಹ ಶಾಸ್ತ್ರಯೋಜಿತವಾಗಿ ಶಾಸ್ತ್ರಬದ್ಧವಾಗಿರುವಂತಹ ಅನುಷ್ಠಾನ ಇಟ್ಟುಕೊಂಡಿರುವ ಕೆಲವೇ ಸನ್ಯಾಸಿಗಳಲ್ಲಿ ನಮ್ಮ ಉತ್ತರಾದಿಮಠದ ಸ್ವಾಮಿಗಳೂ ಒಬ್ಬರು. ನಾನು ಯಾವಾಗ ಶ್ರೀಮಠಕ್ಕೆ ಭೇಟಿ ಕೊಡುತ್ತೇನೊ ಆಗ ನನಗೆ ಸಂತಸವಾದದ್ದು ಎಲ್ಲರಿಗಿಂತ ಯುವಕರೇ ಹೆಚ್ಚು ಸಂಖ್ಯೆಯಲ್ಲಿ ಪಾಲ್ಗೊಳ್ಳುವುದು" ಎಂದರು. 3) ಭಾಸ್ಕರ್‌ರಾವ್, ಎಡಿಜಿಪಿ, ಇವರು ಮಾತನಾಡುತ್ತ "ಪ್ರತಿನಗರ, ರಾಜ್ಯ, ದೇಶ, ವಿದೇಶಗಳಲ್ಲಿ ಸುಖಶಾಂತಿ, ಸುಭಿಕ್ಷ, ನೆಮ್ಮದಿ ನೆಲೆಸಲಿಕ್ಕೆ ಪರಮಪೂಜ್ಯ ಸ್ವಾಮಿಗಳು ಎಲ್ಲ ರೀತಿಯಿಂದ ಕಾರ್ಯಕ್ರಮ ನಡೆಸುತ್ತಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ ಎಲ್ಲೆಡೆ ದುಃಖ–ಉದ್ವೇಗಗಳಿವೆ. ಅವು ಹೋಗಿ ಧನಾತ್ಮಕ ಶಕ್ತಿ ಬರಬೇಕಾದರೆ ಶ್ರೀಸತ್ಯಾತ್ಮತೀರ್ಥರಂತಹ ಮಹಾನುಭಾವರ ಅನುಗ್ರಹ ಕಾರಣ" ಎಂದರು. ಬ್ರಾಹ್ಮಣರು ತಮ್ಮ ಆಧ್ಯಾತ್ಮಿಕಶಕ್ತಿ ಯಿಂದಲೇ ಎಲ್ಲ ಕ್ಷೇತ್ರಗಳಲ್ಲಿ ಸ್ಥಾನಗಳಿಸಿ ಕ್ಷೇಮವಾಗಿ ಬಾಳುತ್ತಿದ್ದಾರೆ. ಅದನ್ನು ಉಳಿಸಿಕೊಳ್ಳಬೇಕಾಗಿದೆ ಎಂದರು. ಈ ಸಂದರ್ಭದಲ್ಲಿ ಶಾಸಕರಾದ ಶ್ರೀ ರವಿ ಎಲ್. ಸುಬ್ರಹ್ಮಣ್ಯ ಮತ್ತು ಜಲಸಂಪನ್ಮೂಲ ಸಚಿವ ಶ್ರೀಯುತ ಗೋವಿಂದರಾಜ ಕಾರ್ಜೋಳ ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ"ಶ್ರೀಮನ್ನ್ಯಾಯಸುಧಾಮಂಗಲಮಹೋತ್ಸವ" ದಲ್ಲಿ ಶ್ರೀಮದ್‌ಟೀಕಾಕೃತ್ಪಾದರ ಭವ್ಯವಾದ ರಥೋತ್ಸವ ಮೆರವಣಿಗೆ ನಡೆಯಿತು. ನೂರಾರು ಜನರ ಹಾಡು, ಭಜನೆ, ನೃತ್ಯ, ಪಾರಾಯಣ ಗಳಿಂದ ಕೂಡಿ ಪತಾಕಿ–ಬಾಣಬಿರುಸುಗಳಿಂದ ಕೂಡಿದ್ದಾಗಿ ಶೋಭಿಸಿತು.

ಬೆಂಗಳೂರು ಹಾಗೂ ಮಳಖೇಡದಲ್ಲಿ ನಡೆದ ಒಟ್ಟು 10 ದಿನಗಳ ಕಾರ್ಯಕ್ರಮದಲ್ಲಿ 50,000ಕ್ಕೂ ಮಿಕ್ಕ ಭಕ್ತರಿಗೆ ಫಲಹಾರ, ತೀರ್ಥಪ್ರಸಾದ, ಕಾಫೀ, ಟೀ, ವಸತಿ ಇವುಗಳ ವ್ಯವಸ್ಥೆ ತುಂಬ ಅಚ್ಚುಕಟ್ಟಾಗಿ ಇತ್ತು. ಭಕ್ತರಿಗೆ ಸ್ವಾಮಿಗಳು ಮಂತ್ರಾಕ್ಷತೆ, ತಪ್ತಮುದ್ರಾ ಧಾರಣೆ ಇವುಗಳನ್ನು ಅನುಗ್ರಹ ಮಾಡಿದರು.

ಒಟ್ಟಿನಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದವರೆಲ್ಲ ನಲಿವು ಸಂತಸ ಸಂಭ್ರಮಗಳಿಂದ ಕೂಡಿ ಮೆಲುಕು ಹಾಕುತ್ತಿದ್ದರು.

# ಹೊಯ್ಸಳ ಕರ್ನಾಟಕ ಸಂಘ ಚಾರಿಟಬಲ್ ಟ್ರಸ್ಟ್
# ಶ್ರೀಮತಿ ಸುಂದರಮ್ಮ ಸ್ಮಾರಕ ವಿದ್ಯಾರ್ಥಿನಿ ನಿಲಯದ ಉದ್ಘಾಟನಾ ಸಮಾರಂಭ



ಮೈಸೂರಿನ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮೈಸೂರಿನ ಲಕ್ಷ್ಮೀಪುರಂದಲ್ಲಿ (ನಮ್ಮ ಸಂಘದ ಕಟ್ಟಡದ ಹಿಂದಿನ ರಸ್ತೆ) ಶ್ರೀಮತಿ ಸುಂದರಮ್ಮ ಸ್ಮಾರಕ ವಿದ್ಯಾರ್ಥಿನಿ ನಿಲಯವನ್ನು ಮೂಡಾ ಅಧ್ಯಕ್ಷ ಶ್ರೀ ಹೆಚ್ ವಿ ರಾಜೀವ್ ಹಾಗೂ ಪದ್ಮಶ್ರೀ ಪುರಸ್ಕೃತ ಹಿರಿಯ ವಿಜ್ಞಾನಿ ಶ್ರೀ ಅಯ್ಯಪ್ಪನ್ ಅವರ ಉಪಸ್ಥಿತಿಯಲ್ಲಿ ಉದ್ಘಾಟಿಸಿದರು. ಶ್ರೀಮತಿ ಸುಂದರಮ್ಮನವರು ದಾನವಾಗಿ ನೀಡಿದ ಬೃಹತ್ ಬಂಗಲೆಯು, ಈಗ ನವೀಕರಣ ಹಾಗೂ ನೂತನ ಕಾಮಗಾರಿಯೊಂದಿಗೆ ಹೊಯ್ಸಳ ಕರ್ನಾಟಕ ಸಂಘದ ಚಾರಿಟಬಲ್ ಟ್ರಸ್ಟ್ ವತಿಯಿಂದ ಸುಮಾರು ಒಂದೂವರೆ ಕೋಟಿ ರೂ ವೆಚ್ಚದಲ್ಲಿ ನಿರ್ಮಿತವಾಗಿ ಇಪ್ಪತ್ತು ಕೊಠಡಿಯಲ್ಲಿ ನಲವತ್ತು ವಿದ್ಯಾರ್ಥಿನಿಯರ ವ್ಯಾಸಂಗಕ್ಕೆ ಸೌಕರ್ಯ ಒದಗಿಸಿ ಮಹಿಳಾ ಸಬಲೀಕರಣಕ್ಕೆ ಪ್ರೋತ್ಸಾಹ ನೀಡಲಿದೆ. ಪ್ರತೀ ಕೊಠಡಿಯು ಅಟ್ಯಾಚ್ಡ್ ಬಾತ್ ರೂಮ್, ವಾರ್ಡ್ರೋಬುಗಳನ್ನು ಹೊಂದಿವೆ.

ಶ್ರೀ ಅಯ್ಯಪ್ಪನ್ ಅವರು ಮಾತನಾಡಿ ಯುವಜನಾಂಗವು ಕಲಿಕೆಯ ಜತೆ ಗಳಿಕೆ ಹಾಗೂ ಉಳಿಕೆಯ ಮನಸ್ಥಿತಿಯನ್ನು ರೂಢಿಸಿಕೊಂಡು ನೀರು, ವಿದ್ಯುತ್ ಹಾಗೂ ಆಹಾರ ಪೋಲು ಮಾಡದಂತೆ ಜೀವನಕ್ರಮವನ್ನು ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಈ ಸಂಧರ್ಭದಲ್ಲಿ ಟ್ರಸ್ಟಿನ ಚೇರ್ಮನ್ ಶ್ರೀ ಶಿವಶಂಕರ್ ಹಾಸ್ಟೆಲಿನ ಒಂದು ದಿನದ ಊಟೋಪಚಾರದ ಪ್ರಾಯೋಜಕತ್ವದ ಕಾರ್ಯಕ್ರಮವನ್ನು ಘೋಷಿಸಿ, ಪ್ರಾಯೋಜಕರು ಹಾಸ್ಟೆಲಿನ ಎಲ್ಲಾ ವಿದ್ಯಾರ್ಥಿನಿಯರ ಒಂದು ದಿನದ ಊಟೋಪಚಾರಕ್ಕೆ ರೂ 3500/– ಪಾವತಿಸಿ ವಿದ್ಯಾರ್ಥಿನಿಯರ ಊಟೋಪಚಾರದ ವೆಚ್ಚದ ಹೊರೆಯನ್ನು ಕಡಿಮೆ ಮಾಡಬಹುದೆಂದು ಸಭೆಗೆ ತಿಳಿಸಿದರು.

ಹೊ ಕ ಸಂಘದ ಅಧ್ಯಕ್ಷ ಶ್ರೀ ಪಿ ವಿ ಭಾರದ್ವಾಜ್, ಟ್ರಸ್ಟ್ ಛೇರ್ಮನ್ ಶ್ರೀ ಕೆ ಆರ್ ಶಿವಶಂಕರ್, ಟ್ರಸ್ಟಿಗಳು, ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.



## ವಿಪ್ರ ಅಂಗವಿಕಲರು ಹಾಗೂ ವೃದ್ಧರಿಗೆ
## ಪಿಂಚಣಿ ಯೋಜನೆಗೆ ಪ್ರಾಯೋಜಕತ್ವಕ್ಕಾಗಿ ಮನವಿ

**ಸಂಕಷ್ಟದಲ್ಲಿರುವ ಅರ್ಹ ವಿಪ್ರ ಅಂಗವಿಕಲರು ಹಾಗೂ ವೃದ್ಧರಿಗೆ ಮುಂದಿನ ದಿನಗಳಲ್ಲಿ ಮಾಸಿಕ ಸಹಾಯ ಧನವಾಗಿ 'ಪಿಂಚಣಿ' ನೀಡಲು ಯೋಜಿಸಲಾಗಿದೆ. ಸಮಾಜದ ಉಳ್ಳವರು, ಮತ್ತು ಸಬಲರು ಈ ಯೋಜನೆಗೆ ಪ್ರಾಯೋಜಕರಾಗಿ ಮುಂದೆ ಬಂದು ಅಪೂರ್ವವಾದ ಯೋಜನೆಗೆ ಕಾರ್ಯ ರೂಪಕ್ಕೆ ಬರುವಂತೆ ನೆರವಾಗಬೇಕೆಂದು ಮಹಾಸಭೆಯ ಅಧ್ಯಕ್ಷರು ವಿನಂತಿಸಿಕೊಂಡಿದ್ದಾರೆ. ಒಂದು ವರ್ಷಕ್ಕೆ 6000ರೂಗಳ್ನು ನೀಡಿ ಪ್ರಾಯೋಜಕರಾದಲ್ಲಿ ಅವರದೆ ಹೆಸರಿನಲ್ಲಿ ಈ ಹಣದಿಂದ ಒಬ್ಬರಿಗೆ 12 ತಿಂಗಳು 500ರೂಗಳಂತೆ ತಿಂಗಳಿಗೆ ಸಹಾಯಧನ ರೂಪದಲ್ಲಿ ಪಿಂಚಣಿಯನ್ನು ನೀಡಲು ಯೋಜಿಸಿದೆ. ಆದ್ದರಿಂದ ಕನಿಷ್ಠ 6,000 ರೂಗಳನ್ನು ನೀಡಿ ಪ್ರಾಯೋಜಕರಾಗಲು ಕೋರಿದೆ. ಪ್ರಾಯೋಜಕರ ಹೆಸರನ್ನು ಮಹಾಸಭೆಯ ಜಾಲತಾಣ ಹಾಗೂ ವಿಪ್ರನುಡಿಯಲ್ಲಿ ಪ್ರಕಟಿಸಲಾಗುವುದು.**

**–ಪ್ರಧಾನ ಕಾರ್ಯದರ್ಶಿಗಳು**

## "ಕೊಡಗು ಬ್ರಾಹ್ಮಣ ವಿದ್ಯಾಭಿವೃದ್ಧಿ ನಿಧಿ"

# ನೂರು ವರ್ಷಗಳ ಯಶಸ್ವಿ ಹೆಜ್ಜೆ

ಸಂಗ್ರಹ ಬರಹ
–ಡಾ.ಎ.ಆರ್. ರಾಜಾರಾಮ
ಅಧ್ಯಕ್ಷರು, ಶತಮಾನೋತ್ಸವ ಸಮಿತಿ.

(ಶತಮಾನೋತ್ಸವ ಸಂದರ್ಭ ಲೋಕಾರ್ಪಣೆಗೊಂಡ ಶ್ರೀ ಜಿ.ಟಿ. ರಾಘವೇಂದ್ರರವರ 'ನಿಧಿ' ಬೆಳೆದು ಬಂದ ಬಗೆ 1917 ರಿಂದ 2017 ಎಂಬ ಕೃತಿಯಿಂದ **"ಶತಧಾರಾ'** ಪುಸ್ತಕದಿಂದ ಪಡೆದ ಮಾಹಿತಿ)

ಬ್ರಾಹ್ಮಣ ಸಮುದಾಯದ ಅತಿ ಉನ್ನತ ಶಕ್ತಿ ವಿದ್ಯೆ 'ಜನ್ಮನೋ ಜಾಯತೇ ದ್ವಿಜಃ' ಎಂಬ ಮಹಾಭಾರತದ ನುಡಿಯಂತೆ ಬ್ರಹ್ಮಾರ್ಜನೆಯಿಂದ ಬ್ರಾಹ್ಮಣ ಅಂತಹ ಸಾಲು ಸಾಲು ಬ್ರಾಹ್ಮಣರನ್ನು ವಿದ್ಯಾರ್ಜನೆಗೆ ಸಹಾಯ ಹಾಗೂ ಪ್ರೋತ್ಸಾಹವನ್ನು ನೀಡುತ್ತಾ ಸಮಾಜಕ್ಕೆ ನೀಡಿದ ಹೆಚ್ಚುಗಾರಿಕೆ ಬ್ರಾಹ್ಮಣ ವಿದ್ಯಾಭಿವೃದ್ಧಿ ನಿಧಿ ಕೊಡಗಿನದ್ದು.

ಇಂದು ವರ್ಷಕ್ಕೆ ಸಹಸ್ರಾರು ರೂಪಾಯಿಗಳ ಪ್ರೋತ್ಸಾಹ, ಸಹಾಯವನ್ನು ಇಲ್ಲಿಯವರೆಗೆ ಸಹಸ್ರಾರು ವಿದ್ಯಾರ್ಥಿಗಳಿಗೆ ನೀಡಿದ 'ನಿಧಿ' 1957ರಲ್ಲಿ ಕೇವಲ ಇಬ್ಬರು ವಿದ್ಯಾರ್ಥಿಗಳಿಗಾಗಿ ಪ್ರಾರಂಭವಾಯಿತು ಎಂಬುದು ಅತ್ಯಂತ ವಿಶಿಷ್ಠ ಸಂಗತಿ. ಕೊಡಗಿನಲ್ಲಿ ಈಗಿನ ಹತ್ತು ಪಾಲು ಹೆಚ್ಚು ಮಳೆ ಚಳಿಯಿದ್ದಂತಹ ಕಾಲಘಟ್ಟದಲ್ಲಿ ಕೊಡಗಿನ ಏಕ ಪವಿತ್ರ ಪ್ರೌಢಶಾಲೆಯಿದ್ದ ಮಡಿಕೇರಿಗೆ ಇಬ್ಬರು ಬ್ರಾಹ್ಮಣ ವಿದ್ಯಾರ್ಥಿಗಳು ದೂರದ ಶಾಮಂಗ (ದಕ್ಷಿಣ ಕೊಡಗು) ನಿಂದ ಬಂದು ಪ್ರವೇಶ ಪಡೆದುಕೊಳ್ಳುತ್ತಾರೆ. ಆದರೆ ಅವರಿಗೆ ವಸತಿಯ ವ್ಯವಸ್ಥೆ ಇಲ್ಲದಾಗುತ್ತದೆ. ಸಸ್ಯಾಹಾರಗಳಾಗಿದ್ದೇ ಇದಕ್ಕೆ ಮೂಲ ಕಾರಣ!

ಇದರಿಂದ ಬೇಸತ್ತ ವಿದ್ಯಾರ್ಥಿಗಳು ಆಗಿನ ಬ್ರಾಹ್ಮಣ ಸಮುದಾಯದ ಸುಪ್ರಸಿದ್ಧ ವಕೀಲದ್ವಯರಾಗಿದ್ದ ಎಂ.ವಿ. ಕೃಷ್ಣರಾವ್ ಮತ್ತು ಸುಬ್ಬರಾವ್ಕೆ. ಯವರನ್ನು ಸಂಪರ್ಕ ಮಾಡಿದ ಫಲವಾಗಿ ಎಂ.ವಿ ಕೃಷ್ಣರಾವ್‌ರವರ ಮೇಲ್ವಿಚಾರಣೆಯಲ್ಲಿ ಕೆ.ಸುಬ್ಬರಾವ್‌ರವರ ಮನೆಯಾಗಿದ್ದ ಮಕ್ಕಳ ನಿವಾಸ ನಂತರ ____ ಸುಬ್ಬಣ್ಣಯ್ಯನವರು ಉದಾರವಾಗಿ ನೀಡಿದ ಮನೆ ಮತ್ತು ಜಾಗದಲ್ಲಿ (ಈಗಿನ ನಿಧಿಯ ಸ್ಥಳ) ಸ್ಥಳಾಂತರಗೊಂಡು, 15.07.1917ರಂದು 'ಕೊಡಗು ವಿದ್ಯಾಭಿವೃದ್ಧಿ' ಎಂದು ಕೊಡವೇತರ ಸಮುದಾಯದ ತರುಣ ವಿದ್ಯಾರ್ಥಿಗಳಿಗೆ ಪ್ರೌಢ ವಿದ್ಯಾಭ್ಯಾಸಕ್ಕಾಗಿ ಸ್ಥಾಪನೆಗೊಂಡಿತು. ಆದರೆ ಅದಾಗಿ ಎರಡು ವರ್ಷಗಳಲ್ಲಿ 22.04.1919ರಂದು ನಡೆದ ಮಹಾಸಭೆಯಲ್ಲಿ ಈ 'ನಿಧಿ' ಮಕ್ಕಳ ವಿದ್ಯಾರ್ಜನೆಗೆ ಸೀಮಿತವಾಗಿದ್ದರೆ ಒಳ್ಳೆಯದು ಎಂಬ ನಿಧಾರಕ್ಕೆ ಬಂದು 'ಕೊಡಗು ಬ್ರಾಹ್ಮಣ ವಿದ್ಯಾಭಿವೃದ್ಧಿ ನಿಧಿ' ಅಸ್ತಿತ್ವಕ್ಕೆ ಬಂತು.

________ ತನಕ 35 ಅಧ್ಯಕ್ಷರನ್ನು, 38 ಉಪಾಧ್ಯಕ್ಷರನ್ನು 1966ರಿಂದ 30 ಉಪಾಧ್ಯಕ್ಷರನ್ನು ಕಂಡಿರುವ ನಿಧಿ, 1947 ರಿಂದ ವಿದ್ಯಾರ್ಥಿ ವೇತನ ಪ್ರಾರಂಭಿಸಿತು. ಆರ್ಥಿಕ ಸಂಕಷ್ಟದಲ್ಲಿರುವ ವಿಪ್ರರಿಗೆ ಕಡಿಮೆ ಬಡ್ಡಿಯಲ್ಲಿ ಸಾಲ ಕೊಡುವ ವ್ಯವಸ್ಥೆಯನ್ನೂ ಹಲವು ವರ್ಷಗಳ ಕಾಲ ನಡೆಸಿ, ಅನಿವಾರ್ಯ ಕಾರಣಗಳಿಂದ ಸ್ಥಗಿತಗೊಳಿಸಿತು.

1962–63ರಲ್ಲಿ ಶ್ರೀ ಲಕ್ಷ್ಮೀ ನರಸಿಂಹ ಕಲ್ಯಾಣ ಮಂಟಪದ ಉದಯವಾಗಿ ಶ್ರೀಮತಿ/ಶ್ರೀ ಮೀನಾಕ್ಷಮ್ಮ ಮಂಜುನಾಥಯ್ಯ ದಂಪತಿಗಳು 6.5.1966ರಂದು ಸಮಾಜಕ್ಕೆ ಅರ್ಪಿಸಿದರು. ಇದು ಇಂದಿಗೂ ಬ್ರಾಹ್ಮಣರ ಕಲ್ಯಾಣ ಮಂಟಪವೆಂದು 'ನಿಧಿ' ಯ ಹೆಮ್ಮೆಯ ಆಸ್ತಿಯಾಗಿ ಬ್ರಾಹ್ಮಣರ ಹಲವಾರು ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಇದರ ಸದುಪಯೋಗಪಡಿಸಲಾಯಿತು. 1967ರಲ್ಲಿ ಸುವರ್ಣ ಮಹೋತ್ಸವ ಆಚರಣೆ, 1981ರಲ್ಲಿ ವಜ್ರ ಮಹೋತ್ಸವ ಆಚರಣೆಯನ್ನು ಅಚ್ಚುಕಟ್ಟಾಗಿ ನಡೆಸಲಾಯಿತು.

28.10.1984ರಲ್ಲಿ ಮತ್ತೊಂದು ಸಭಾಂಗಣ ಶ್ರೀ ಕೋಗರವಳ್ಳಿ ಕೃಷ್ಣಮೂರ್ತಿಯವರ ಹೆಸರಿನಲ್ಲಿ ಪತ್ನಿ ಭವಾನಿಯಮ್ಮ ಮತ್ತು ಮಕ್ಕಳು ಸಮಾಜಾರ್ಪಣೆಗೊಳಿಸಿದರು. ಇದರ ವರ್ಷ ನಿಧಿಗೆ ಬ್ರಾಹ್ಮಣರಿಗೆ ಮರಣಾನಂತರ ದೇಹದಹನಕ್ಕಾಗಿ 'ಪಿತೃವನ' ವನ್ನು 'ನಿಧಿ' ಪಡೆದುಕೊಂಡು ಇಂದಿಗೂ ಸಮಾಜಕ್ಕೆ ಅತಿ ವಿಶಿಷ್ಟ ಸೇವೆ ನಡೆಸುತ್ತಿದೆ. ಇದೇ ರೀತಿ 28.01.1990ಕ್ಕೆ ಕೊಡಗು ಜಿಲ್ಲಾ ಬ್ರಾಹ್ಮಣ ಸಮ್ಮೇಳನ ಅತಿ ಯಶಸ್ವಿಯಾಗಿ ನೆರವೇರಿತು. ತಾ.31.08.1995ರಂದು ಭೂಮಿ ಪೂಜೆ ಆರಂಭಿಸಿ 2000 ಸಾರಿಗೆ ಮೂರನೇ ಸಭಾಂಗಣ ಬೆಟ್ಟತ್ತನಾಡು ಕೃಷ್ಣಯ್ಯನವರ ಹೆಸರಿನಲ್ಲಿ ಶ್ರೀ ಎಸ್.ಎಸ್. ದಿನಮಣಿ, ಶ್ರೀ ಎಂ.ಎನ್. ಗುಂಡುರಾಯರು ಹಾಗೂ ಸಮಾಜದ ಕೊಡಗೈದಾನಿಗಳ ಸಹಕಾರದಿಂದ ಪೂರ್ಣಗೊಂಡು ಲೋಕಾರ್ಪಣೆಯಾಯಿತು.

ಇದಾಗಿ 2002ರಲ್ಲಿ ಹೆಸರಿನ ಗೊಂದಲ ಸರಿಪಡಿಸುವ ನಿಟ್ಟಿನಲ್ಲಿ ನಿಧಿಯ ಹೆಸರನ್ನು ಬ್ರಾಹ್ಮಣ ವಿದ್ಯಾಭಿವೃದ್ಧಿ ನಿಧಿ (ರಿ.) ಕೊಡಗು ಎಂದು ಮರು ನಾಮಕರಣಗೊಳಿಸಲಾಯಿತು. ಈ ನಡುವೆ ಪ್ರತಿವರ್ಷ ಶ್ರೀ ಶಂಕರ ಜಯಂತಿ, ಶ್ರೀ ರಾಘವೇಂದ್ರ ಆರಾಧನೆ, ಋಗ್–ಯಜುರ್ ಉಪಾಕರ್ಮಗಳನ್ನು ತ್ರಿಮತಸ್ಥರ ಸಂಘಟನಾತ್ಮಕ ಕಾರ್ಯಕ್ರಮಗಳನ್ನು ವಿಪ್ರಬಾಂಧವರ ಸಹಕಾರದೊಂದಿಗೆ ಹಲವಾರು ವರ್ಷಗಳಿಂದ ನಡೆಸುತ್ತ ಬಂದದ್ದಲ್ಲದೇ ಕೆಲವು ವರ್ಷಗಳ ಕಾಲ ಮಹಿಳೆಯರ ಪ್ರತ್ಯೇಕ ಮಹಿಳಾ ಭವನ ಸಮಾಜಕ್ಕೆ ತನ್ನದೇ ಕೊಡುಗೈಯನ್ನು ನೀಡಿತು.

ಪ್ರಸಕ್ತ ಕಟ್ಟಡಗಳು ಜೀರ್ಣಾವಸ್ಥೆಗೆ ಬಂದಿದ್ದ ಕಾರಣ ಶತಮಾನ ಸಂದರ್ಭ ಹೊಸ ಭವನ ನಿರ್ಮಿಸುವುದೆಂದು 2015ರ ಮಹಾಸಭೆ ತೆಗೆದುಕೊಂಡ ನಿರ್ಧಾರದ ಮೇರೆಗೆ 26.05.2017ರಂದು ಭೂಮಿ ಪೂಜೆ ನೆರವೇರಿತು. ಆದರೆ ದುರಾದೃಷ್ಟವಾತ್ 2018ರಲ್ಲಿ ಬಂದೆರಗಿದ ಭೀಕರ ಜಲಪ್ರಳಯದಿಂದಾಗಿ ತತ್ತರಿಸಿದ ಕೊಡಗಿಗೆ 'ನಿಧಿ' ಪ್ರಥಮ ಗಂಜಿ ಕೇಂದ್ರವಾಗಿ ಕಾರ್ಯನಿರ್ವಹಿಸಿ, ನೂರಾರು ಜನರಿಗೆ ಆಶ್ರಯ ತಾಣವಾಗಿ ಹಲವಾರು ತಿಂಗಳು ಕೆಲಸ ನಿರ್ವಹಿಸಿ ಕಟ್ಟಡದ ಕಾಮಗಾರಿ ನಿಧಾನವಾಯಿತು. ನಂತರ ಬಂದ ಕೋವಿಡ್ ಕೂಡ ಸಮಯ ಹಾಗೂ ಸವಲತ್ತುಗಳನ್ನು ಕಡಿತಗೊಳಿಸಿ ಕೊನೆಯಲ್ಲಿ 150 ಲಕ್ಷ ರೂಪಾಯಿಯ ವೆಚ್ಚದಲ್ಲಿ ಕೊಡಗಿನ ಬ್ರಾಹ್ಮಣರ, ಕೊಡಗಿನ ಅಭಿಮಾನಿ ಬ್ರಾಹ್ಮಣರ ಸಹಕಾರದಿಂದ 'ಶತಮಾನ ಭವನ' 1921ರಂದು ಲೋಕಾರ್ಪಣೆಗೊಂಡು ಅದೇ ದಿನ ಶತಮಾನೋತ್ಸವ ಸಂಭ್ರಮಾಚರಣೆ ನಡೆಸಲಾಯಿತು.

ವರ್ಷ ನೂರು ಕಳೆದರೂ ನಿತ್ಯ ನೂತನವಾಗಿರುವ ಈ 'ನಿಧಿ' ಇನ್ನಷ್ಟು ವರ್ಷಗಳು ಸಮಾಜದ ನಿಧಿಯಾಗಿ ಜನರನ್ನು ಒಗ್ಗೂಡಿಸುತ್ತಾ ಸಮಾಜಮುಖಿ ಕೆಲಸಗಳಿಗೆ ಪ್ರೇರಕವಾಗಿರಲಿ ಎಂಬುದು ಈಗಿನ ಆಡಳಿತ ಮಂಡಳಿಯ ಸದಸ್ಯರ ಮಹದಾಸೆ.

**॥ ಹರೇ ರಾಮ ॥**

# ಬಿವಿಕೆ ಅಯ್ಯಂಗಾರ್

**ಸುರೇಶ್ ಮೂನ**



ಹಿಂದೆ ಕೆಂಪೇಗೌಡ ಚಿತ್ರಮಂದಿರವಿದ್ದ ಜಾಗದಿಂದ ಮೈಸೂರು ರಸ್ತೆಯನ್ನು ಸಿಟಿ ಮಾರ್ಕೆಟ್ ಬಳಿ ಸಂಧಿಸುವ ವರೆಗಿನ ಉದ್ದನೆಯ ಜನನಿಬಿಡ ಮಾರ್ಗವೇ ಬಿವಿಕೆ ಅಯ್ಯಂಗಾರ್ ರಸ್ತೆ. ಆದರೆ ಬಿ.ವಿ.ಕೆ. ಅಯ್ಯಂಗಾರ್ ಎಂದರೆ ಯಾರು ಎಂಬುದು ಮಾತ್ರ ಬಹಳಷ್ಟು ಜನರಿಗೆ ತಿಳಿಯದ ಸಂಗತಿ.

ಇವರು ಮರೆಯಲೇಬಾರದ ಒಬ್ಬ ಮಹಾನ್ ವಿಪ್ರ ಮಹನೀಯ ಎಂಬುದು ಈ ಸಮುದಾಯದವರೆಲ್ಲರೂ ತಿಳಿದಿರಲೇ ಬೇಕಾದ ಹೆಮ್ಮೆಯ ಸಂಗತಿ ಮತ್ತು ಬೆಂಗಳೂರಿನ ಇತಿಹಾಸದ ಒಂದು ಮಹತ್ವಪೂರ್ಣ ವಿಚಾರ.

ನಮ್ಮ ದೇಶದ ಪ್ರಸಿದ್ಧ ಅಣು ವಿಜ್ಞಾನಿ ಡಾ. ರಾಜಾರಾಮಣ್ಣಇವರ ಮೊಮ್ಮಗ. ತಮ್ಮ ಆತ್ಮಚರಿತ್ರೆ Years of Piligrimage ಕೃತಿಯ ಅನುಬಂಧ ವಿಭಾಗದಲ್ಲಿ ಇವರು ತಮ್ಮ ಅಜ್ಜ ಮತ್ತು ಅವರ ತಂದೆಯ ಬಗ್ಗೆ ಅತ್ಯುಪಯುಕ್ತ ವಿವರಗಳನ್ನು ನೀಡಿದ್ದಾರೆ.

ಬಿಂಡಿಗನವಿಲೆ ವೆಂಕಟಯ್ಯಂಗಾರ್ ಕೃಷ್ಣಯ್ಯಂಗಾರ್( ಬಿವಿಕೆ) ಅವರ ತಂದೆ 1800ರ ಸುಮಾರಿಗೆ ಬೆಂಗಳೂರಿಗೆ ಬಂದು ನೆಲಸಿದರು. ಬಹುಬೇಗ ತಮ್ಮ ಸ್ವಂತ ಬುದ್ಧಿವಂತಿಕೆ ಮತ್ತು ಪರಿಶ್ರಮದಿಂದ ಮಹಾರಾಜರ ಪ್ರತಿನಿಧಿಗಳು ಮತ್ತು ಬೆಂಗಳೂರಿನ ಬ್ರಿಟಿಷ್ ಮಿಲಿಟರಿ ಅಧಿಕಾರಿಗಳ ನಡುವೆ ಸಂಪರ್ಕ ಕಲ್ಪಿಸುವ ಒಬ್ಬ ಪ್ರಮುಖ ವ್ಯಕ್ತಿಯಾದರು. ಚತುರತೆಯಿಂದ ಕೂಡಿದ ತಮ್ಮ ಹಣಕಾಸಿನ ವ್ಯವಹಾರದಿಂದಾಗಿ ಸಾವ್ಕಾರ್, ಪೇ ಮಾಸ್ಟರ್ ಎಂಬೆಲ್ಲ ಹೆಸರುಗಳಿಂದ ಜನಪ್ರಿಯರಾಗಿದ್ದರು.

ಬಿವಿಕೆ ಆಯ್ಯಂಗಾರ್ ಬಿ.ವಿ ವೆಂಕಟ ಅಯ್ಯಂಗಾರ್ ಅವರ ಮೂರನೆ ಮಗನಾಗಿ 1825ರ ಸುಮಾರಿಗೆ ಜನಿಸಿದರು. ಮೇಧಾವಿತನದಲ್ಲಿ ತಂದೆಯನ್ನು ಮೀರಿಸಿದ ಮಗನಾಗಿ ಬೆಳೆದು ಕ್ಷಿಪ್ರಗತಿಯಲ್ಲಿ ಪ್ರಗತಿ ಹೊಂದಿ ಮೈಸೂರು ಸರಕಾರದ ಜುಡಿಷಿಯಲ್ ಅಕೌಂಟೆಂಟ್ ಸ್ಥಾನವನ್ನು ಅಲಂಕರಿಸಿ ಕಮೀಷನರ್ ಸರ್ ಮಾರ್ಕ್ ಕಬ್ಬನ್ ಅವರ ಆಡಳಿತದಲ್ಲಿ ಹಿರಿಯ ಬ್ರಿಟಿಷ್ ಅಧಿಕಾರಿಯಾಗಿದ್ದ ಮೇಜರ್ ಮಾಂಟೆಗೊಮೇರಿ ಅವರ ಮೆಚ್ಚುಗೆಗೆ ಪಾತ್ರರಾಗಿ ಅವರ ಕಛೇರಿಯನ್ನು ಸೇರಿದರು. ಇವರ ಬಗ್ಗೆ ಆಂಗ್ಲರಲ್ಲಿ ಎಂತಹ ಗೌರವವಿತ್ತೆಂದರೆ ಸ್ಟೆರ್ಲಿಂಗ್ ಎಂಬ ಪ್ರಸಿದ್ಧ ಬ್ರಿಟಿಷ್ ಕಲಾವಿದ ಇವರ ಅತ್ಯುತ್ತಮ ನೈಜ ಭಾವದ ವರ್ಣ ಚಿತ್ರವನ್ನೆ ಬಿಡಿಸಿದ್ದ. ಅದು ಮೈಸೂರು ಸಂಸ್ಥಾನದ ಅಧಿಕಾರಿಗಳ ಹಿರಿತನಕ್ಕೆ ಪ್ರತೀಕವಾಗಿತ್ತು

1860ರಲ್ಲಿ ಇನ್ನೂ ಮೂವತ್ತೈದು ವರ್ಷಗಳಾಗಿದ್ದಾಗಲೇ ಬೆಂಗಳೂರಿನ ಜುಡಿಷಿಯಲ್ ಕೋರ್ಟ್‌ನಲ್ಲಿ ಹೆಡ್ ಶಿರಸ್ತೆದಾರ್ ಆಗಿ ನೇಮಕಗೊಂಡರು. 1864ರಲ್ಲಿ ಕೋಲಾರ ವಿಭಾಗದ ಡಿವಿಷನಲ್ ಕಮೀಷನರ್ ಹುದ್ದೆಗೆ ನೇಮಕಗೊಂಡಾಗ ಇಡೀ ದಕ್ಷಿಣ ಭಾರತದಲ್ಲೇ ಈ ಜಿಲ್ಲಾಧಿಕಾರಿಯ ಪ್ರತಿಷ್ಠಿತ ಹುದ್ದೆಯನ್ನು ಪಡೆದ ಪ್ರಥಮ ಭಾರತೀಯ ಮತ್ತು ಕನ್ನಡಿಗ ಎಂಬ ಹೆಗ್ಗಳಿಕೆಯೂ ಇವರದ್ದು. ಹೀಗೆ ಇವರ ಸಾಧನೆಯ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಇವೆಲ್ಲಕ್ಕೂ ಕಿರೀಟಪ್ರಾಯವಾಗಿರುವ ಇವರ ಸಾಧನೆ ಎಂದರೆ ಬ್ರಿಟಿಷ್ ಕಮೀಷನರ್ ಆಡಳಿತದಿಂದ ಸ್ವತಂತ್ರಗೊಂಡು ಮೈಸೂರು ಸಂಸ್ಥಾನಕ್ಕೆ ರಾಜರ ಆಡಳಿತವನ್ನು ಮರಳಿ ಪಡೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದು.

ಬ್ರಿಟಿಷ್ ಸರಕಾರದೊಂದಿಗೆ ಇವರಿಗಿದ್ದ ಅತ್ಯುತ್ತಮ ಸಂಪರ್ಕ ಮತ್ತು ಪ್ರಭಾವದ ಬಗ್ಗೆ ತಿಳಿದಿದ್ದ ಇವರಿಗೆ ಮೈಸೂರು ಮಹಾರಾಜ ಮುಮ್ಮಡಿ ಕೃಷ್ಣರಾಜ ವಡೆಯರ್ ಅವರೇ ಈ ಮಧ್ಯಸ್ತಿಕೆ ವಹಿಸಲು ಕೋರಿದ್ದರು, ಅದು ಯಶಸ್ವಿಯಾಯಿತು. ಆದರೆ ಈ ಪ್ರಯತ್ನದ ಫಲವನ್ನು ಅನುಭವಿಸುವ ಯೋಗ ಮಹಾರಾಜರಿಗೆ ಇರಲಿಲ್ಲ, 1868ರ ಮಾರ್ಚ್ 27ರಂದು ಅವರು ದೈವಾಧೀನರಾದರು. ಅವರ ದತ್ತು ಪುತ್ರ ಹತ್ತನೇ ಚಾಮರಾಜೇಂದ್ರ ವಡೆಯರ್ 1881ರಲ್ಲಿ ಸಂಸ್ಥಾನದ ಆಡಳಿತವನ್ನು ವಹಿಸಿಕೊಂಡರು. ತದನಂತರ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಚುನಾಯಿತ ಸರಕಾರ ಬರುವವರೆಗೆ ನಾಲ್ವಡಿ ಕೃಷ್ಣ ರಾಜ ವಡೆಯರ್ ಮತ್ತು ಮಹಾರಾಜ ಜಯಚಾಮರಾಜ ವಡೆಯರ್, ದಿವಾನರುಗಳ ನೆರವಿನೊಂದಿಗೆ ಅತ್ಯುತ್ತಮ ಆಡಳಿತವನ್ನು ನೀಡಿದರು. ಹೀಗೆ ಮೈಸೂರು ಸಂಸ್ಥಾನ ಬ್ರಿಟಿಷರಿಂದ ಆಡಳಿತವನ್ನು ಪಡೆದು ಸ್ವತಂತ್ರಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದ ಬಿವಿಕೆ ಅಯ್ಯಂಗಾರ್ ಒಬ್ಬ ಮಹಾನ್ ವಿಪ್ರ ಮಹನೀಯರೆಂಬುದನ್ನು ನಾವು ನಮ್ಮ ಮುಂದಿನ ಪೀಳಿಗೆಗೂ ತಿಳಿಸಲೇಬೇಕಾದ ಸಂಗತಿ.

ಇವರು ಕೆಂಪೇಗೌಡ ಚಿತ್ರಮಂದಿರವಿದ್ದ ಜಾಗದಲ್ಲಿ ಭವ್ಯವಾದ ಮತ್ತು ಸುಂದರವಾದ ಬಂಗಲೆಯನ್ನು ಕಟ್ಟಿಸಿಕೊಂಡು ವಾಸವಾಗಿದ್ದರು. ಮುಂದೆ ಬೆಂಗಳೂರು ಬೆಳೆದಂತೆ ಈ ರಸ್ತೆಯನ್ನು ಅಗಲ ಮಾಡಬೇಕಾಗಿ ಬಂದಾಗ ಇವರ ಮನೆತನದವರು ತಮ್ಮ ಜಾಗವನ್ನು ಬಿಟ್ಟುಕೊಟ್ಟಿದ್ದರಿಂದ ಇವರ ಹಿರಿಯರಾದ ಬಿವಿಕೆ ಆಯ್ಯಂಗಾರ್ ಅವರ ಗೌರವಾರ್ಥ ಅದೇ ಹೆಸರನ್ನೇ ಆ ಮಾರ್ಗಕ್ಕೆ ಇಡಲಾಯಿತು.

# ಯುಗಾದಿ

ಜ್ಯೋತಿಷಿ ವಿ॥ ಮುದ್ರಾಡಿ ವಾಸುದೇವ ಭಟ್

ಯುಗಾದಿ ಆದಿಃ ಯುಗಾದಿಃ ಎಂಬಂತೆ ಕೃತ, ತ್ರೇತ, ದ್ವಾಪರ ಮತ್ತು ಕಲಿಯುಗಗಳ ಆರಂಭವನ್ನು ಯುಗಾದಿ ಎನ್ನುವರು. 'ಕಾಲಃ ಕಲಯತಾಂ ಮತಮ್' ಎಂಬಂತೆ ಇದನ್ನು ಜ್ಯೋತಿಷ್ಯಾಸ್ತ್ರದಲ್ಲಿ ವಿವರಿಸಿರುವರು. ಇದನ್ನೇ ವೇದದಲ್ಲಿ 'ದೇವೇಭ್ಯಸ್ತ್ರಿ ಯುಗಂಪುರಾ' ಎಂದಿರುವರು. ಶೃತಿ, ಸ್ಮೃತಿ, ಪುರಾಣ ಹಾಗೂ ಜ್ಯೋತಿಷ್ಯಾಸ್ತ್ರಗಳಲ್ಲಿ ಯುಗಾದಿಗಳ ಕಾಲಗಣನೆಯ ವಿಚಾರ ವಿಮರ್ಶೆಗಳಿರುವುದು. ಆ ಪ್ರಕಾರ ಇಂದಿಗೆ ಈ ಪ್ರಪಂಚ, ಆದಿತ್ಯಾದಿ ನವಗ್ರಹಗಳು, ಭೂಮಿ ಸೃಷ್ಟಿಯಾಗಿ 196 ಕೋಟಿ ವರ್ಷಗಳಾದವು. ಇಂದಿನ ಆಧುನಿಕ ಋಷಿ ಅಂದರೆ ವಿಜ್ಞಾನಿಗಳು ಕೂಡಾ ಭೂಮಿಯ ದಿನ ಭೂಮಿ ಹುಟ್ಟಿ ಈ ಏಪ್ರಿಲ್ 22ಕ್ಕೆ 200ಕೋಟಿ ವರ್ಷಗಳಾದವು ಎನ್ನುವುದನ್ನು ನೋಡಿದರೆ ಇವರಿಗಿಂತ ನಮ್ಮ ಪುರಾಣಿಕರೇ ಅದ್ಭುತ ಜ್ಞಾನಿಗಳೆನ್ನಿಸುವುದಲ್ಲವೇ?

ಭಾರತೀಯರು, ಅದರಲ್ಲಿಯೂ ಬ್ರಾಹ್ಮಣರು ತಾವು ದಿನನಿತ್ಯ ಮಾಡುವ ಜಪ, ಪೂಜಾದಿಗಳ ಸಂಕಲ್ಪಗಳಲ್ಲಿ 'ಆದ್ಯಃ ಬ್ರಹ್ಮಣಃ ದ್ವಿತೀಯಪರಾರ್ಧೇ. . . . . . . . ಶುಭಕೃತ್ ಸಂವತ್ಸರೇ, ಉತ್ತರಾಯಣೇ, ವಸಂತೃತು, ಚೈತ್ರಮಾಸೇ, ಶುಕ್ಲಪಕ್ಷೇ ಪ್ರತಿಪತ್ ಸ್ಥಿರವಾಸರೇ ಎನ್ನವುದೆಲ್ಲಾ ಕರಾರುವಕ್ಕಾದ' ಲೆಕ್ಕಚಾರವನ್ನವೇ ?

ಯುಗಾದಿ ಎನ್ನುವುದು ಕೇವಲ ಭಾರತೀಯರಿಗೆ, ಬ್ರಾಹ್ಮಣರಿಗೆ ಮಾತ್ರವಲ್ಲ ಎಲ್ಲರಿಗೂ ವರ್ಷಾರಂಭವಾಗುವುದು. ಯುಗಾದಿಯಿಂದಲೇ ಎನ್ನುವುದರಲ್ಲಿ ಸಂಶಯವಿಲ್ಲ. ಇಯರ್ ಎಂಡಿಂಗ್ ಎಂಬುದು ಕೇವಲ, ಬ್ಯಾಂಕ್‌ನವರು, ಆದಾಯ ತೆರಿಗೆಯವರು ಮಾತ್ರ ಹೇಳುವುದಲ್ಲ, ಜನವರಿ, ಫೆಬ್ರವರಿ ಎನ್ನುತ್ತಾ ನವೆಂಬರ್ ಎಂದರೆ ಒಂಬತ್ತು, ಡಿಸೆಂಬರ್ ಎಂದರೆ ಹತ್ತನೇ ತಿಂಗಳುಗಳಲ್ಲವೇ, ಹೀಗೆ ತಮ್ಮ ಅಜ್ಞಾನ ಪ್ರದರ್ಶಿಸುತ್ತಾ ಜನವರಿಯನ್ನು ವರ್ಷಾರಭ ಎಂದು ಒಪ್ಪಿರುವುದಿಲ್ಲ.

'ಋತೂನಾಂಕುಸುಮಾಕರಃ' ಎಂಬಂತೆ ಈ ಭೂರಮೆಯೇ ತನಗೆ ತಾನೇ ಮರದಲ್ಲಿ ಚಿಗುರಿದ ಹೂಹಣ್ಣುಹಂಪಲುಗಳಿಂದ ಸಿಂಗರಿಸಿಕೊಂಡು ನರ್ತಿಸುವಳು. ಅದನ್ನು ನೋಡಿ ಪಶು, ಪಕ್ಷಿ, ಪ್ರಾಣಿಗಳು ಕೂಡಾ ಈ ವಸಂತ ಋತುವಿನಲ್ಲಿ ಸಿಗುವ ಹಣ್ಣುಹಂಪಲುಗಳನ್ನು ಯಥೇಚ್ಛವಾಗಿ ತಿಂದು ತೇಗಿ ಸ್ವಚ್ಛಂದವಾಗಿ ಹಾರಾಡಿಕೊಂಡು ಎಲ್ಲೆಂದರಲ್ಲಿ ಮಲಗಿ ಎದ್ದು ಹಾಯಾಗಿರುತ್ತವೆ. ನೋಡಿ ತಿಳಿ ಮಾಡಿ ಕಲಿ ಎಂಬಂತೆ ಈ ಪ್ರಪಂಚವನ್ನು ಕಂಡ ಮಾನವನು ಪ್ರಕೃತಿಯನ್ನು ನೋಡಿ ಮತ್ತು ಅನುಭವದಿಂದಲೂ ಆಚರಣೆಗಳನ್ನು ಜಾರಿಗೆ ತಂದನು.

ಆಸೇತುಹಿಮಾಚಲ ಎಲ್ಲ ವರ್ಗದವರೂ ಆಚರಿಸುವ ಏಕೈಕ ಹಬ್ಬವೆಂದರೆ ಅದು ಯುಗಾಗಿ. ಅದೇ ವಸಂತ ಋತುವಿನ ಆರಂಭದ ದಿನ. ಚೈತ್ರಮಾಸದ ಆರಂಭದ ದಿನ, ಮೇಘಮಾಸದ ಆರಂಭದ ದಿನ.

ಹಬ್ಬವೆಂದರೆ 'ದೇಶೇಕಾಲೇಚ ಪಾತ್ರೇಚ' ಎಂಬಂತೆ ಆಯಾಯ ಪ್ರದೇಶಗಳಲ್ಲಿ ಆಯಾಯ ಕಾಲಗಳಲ್ಲಿ ವಿಪುಲವಾಗಿ ಸಿಗುವ ಹೂ, ಹಣ್ಣು, ಚಿಗುರೆಲೆಗಳನ್ನು ತಂದು ಮನೆಯನ್ನು ಅಲಂಕರಿಸುವುದು. ಮನೆಯನ್ನು ಗುಡಿಸಿ, ಸಾರಿಸಿ, ರಂಗವಲ್ಯಾದಿಗಳಿಂದಲೂ ಅಲಂಕರಿಸುವುದು. ಹಿಂದಿನ ದಿನವೇ ದೊಡ್ಡ ಹರಿವಾಣದಲ್ಲಿ ಅಕ್ಕಿ, ತೆಂಗಿನಕಾಯಿ, ಹೂ, ಹಣ್ಣು, ತರಕಾರಿ, ಪಂಚಾಂಗ ಮತ್ತು ಕನ್ನಡಿಯನ್ನು, ಮಂಗಲದ್ರವ್ಯಗಳ್ನು ಸೇರಿಸಿ ದೇವರ ಎದುರಿನಲ್ಲಿ ಇಡುವುದು. ಇದಕ್ಕೆ 'ಕಣಿ' ಇಡುವುದು ಎನ್ನುತ್ತಾರೆ.

ಮರುದಿನ-ಯುಗಾದಿ ದಿನ ಪ್ರಾತಃಕಾಲದಲ್ಲಿ ಎದ್ದು, ಮುಖ ತೊಳೆದು ದೇವರಿಗೆ ದೀಪ, ಊದುಬತ್ತಿ, ಹಚ್ಚಿಟ್ಟು ನಮಸ್ರಿ ಹರಿವಾಣದಲ್ಲಿಟ್ಟ ಕನ್ನಡಿಯಲ್ಲಿ ಮುಖವನ್ನು ನೋಡಿಕೊಳ್ಳುವುದು, ತದನಂತರ ಅಭ್ಯಂಗ ಸ್ನಾನ ಮಾಡಿ ನಿತ್ಯಾಹ್ನಿಕ ಮುಗಿಸಿ 'ಸಂಕಲ್ಪಂ ಕರ್ಮಮಾನಸಂ' ಎಂಬಂತೆ ಕಾಲಸ್ವರೂಪೀ ಭಗವಂತನನ್ನು ಸ್ಮರಿಸಿಕೊಂಡು ಸಂಕಲ್ಪ ಮಾಡಿ ದೇವರಪೂಜೆ, ಪಂಚಾಂಗ ಪೂಜೆ ಮಾಡುವುದು, ನೈವೇದ್ಯಕ್ಕೆ ಹಸಿಗೇರುಬೀಜ, ಹಣ್ಣು, ಹಂಪಲುಗಳನ್ನು ಸೇರಿಸಿದ ಪಾಯಸ, ಹೋಳಿಗೆ ಭಕ್ಷ್ಯಗಳನ್ನು ಮಾಡಿ ಸಮರ್ಪಿಸುವುದು. ತೀರ್ಥಪ್ರಸಾದ ಸೇವಿಸುವುದು. ಗಡದ್ದಾಗಿ ಪಾಯಸ ಹೋಳಿಗೆ ಭಕ್ಷ್ಯದಿಂದ ಕೂಡಿದ ಮೃಷ್ಟಾನ್ನ ಭೋಜನ ಮಾಡುವುದು. ಇದನ್ನೇ ಹಬ್ಬ ಮಾಡಿದಿರಾ ಎನ್ನುವುದು.

ಹೊಸಬಟ್ಟೆ ಆಭರಣಾದಿಗಳನ್ನು ಧರಿಸಿಕೊಳ್ಳುವುದು. ಇನ್ನು ಸಂಪ್ರದಾಯದಂತೆ ಬೆಳಿಗ್ಗೆ ಅಥವಾ ಸಾಯಂಕಾಲ ಪಂಚಾಂಗ ಶ್ರವಣ ಮಾಡುವುದು. ಪಂಚಾಂಗ ಶ್ರವಣ ಪದ್ಧತಿ ಪಂಚಾಂಗದಲ್ಲೇ ಇರುವುದು. ಸಂಸ್ಕೃತ ಓದಲಿಕ್ಕೆ ಬರುವವರು ಸಂಸ್ಕೃತ ಬಾರದಿರುವವರು, ಕನ್ನಡದ ಭಾಷಾಂತರದಲ್ಲಿ ಸಂವತ್ಸರ ಫಲವನ್ನು ಓದುವುದು. ಅದರಲ್ಲಿ ಈ ಯುಗಾದಿಗೆ ಸೃಷ್ಟಿಯಾರಂಭದ ದಿನದಿನದಿಂದ ಇಂದಿನತನಕ ಎಷ್ಟು ವರ್ಷಗಳಾದವು ಎಂಬ ಲೆಕ್ಕಾಚಾರ ಇರುವುದು ಮತ್ತು ಈ ಕಲಿಯಗದ ಯುಧಿಷ್ಠಿರ, ವಿಕ್ರಮ, ಶಾಲೀವಾಹನ ಶಕೆಗಳ ವರ್ಷಗಳಿರುವುದು. ಪಂಚಾಂಗ ಗಣನೆಗೆ ಆಧಾರಭೂತವಾಗಿರುವ ಅಹರ್ಗಣಗಳಿರುವುದು. ಈ ಶುಭಕೃತ ಸಂವತ್ಸರದ ರಾಜ, ಮಂತ್ರಿ, ಇತ್ಯಾದಿಗಳ ಮತ್ತು ಮಳೆ, ಬೆಳೆಗಳ ಹಾಗೂ ದೇಶವನ್ನು ಆಳುವವರಿಗಾಗುವ ಸುಖದುಃಖಾದಿಗಳ, ದೇಶಕ್ಕೂ ಉಂಟಾಗತಕ್ಕ ಲಾಭನಷ್ಟಗಳ ಫಲಗಳಿರುವುದು.

ಇದಾದ ಮೇಲೆ ನಿತ್ಯ ಪಂಚಾಂಗ ಕ್ರಮದಂತೆ ಪಠಿಸುವುದು 'ಪಂಚಾಂಗ ಶ್ರವಣಾನಿತ್ಯಂ ಗಂಗಾಸ್ನಾನ ಫಲ ಲಭೇತ್' ಎಂಬಲ್ಲಿವರೆಗೂ ಪಠಿಸುವುದು. ಇದರಿಂದ ಹೇಳುವವರಿಗೂ, ಕೇಳುವವರಿಗೂ ಆಯುರಾರೋಗ್ಯಾದಿ ಸಕಲ ಸಂಪತ್ಸಮೃದ್ಧಿಗಳು ಉಂಟಾಗಲಿರುವುದು.

ಶತಾಯುರ್ವಜ್ರದೇಹಾಯ ಸರ್ವಸಂಪತ್ಸಮೃದ್ಧಯೇ' ಸರ್ವಾರಿಷ್ಟ ವಿನಾಶಾಯ ಗುಡನಿಂಬಕ ಭಕ್ಷಣಮ್ ॥ ಎಂದು ಸಂಪ್ರದಾಯದಂತೆ ಬೇವು ಬೆಲ್ಲ ಅಥತಾರ್ಹಣ ಹಂಪಲುಗಳನ್ನು ಸ್ವೀಕರಿಸುವುದು, ಭಕ್ಷಿಸುವುದು. ಹಿರಿಯರಿಗೆ ನಮಸ್ಕರಿಸುವುದು. ಎಲ್ಲರಿಗೂ ಶುಭವನ್ನು ಕೋರುವುದು. ಒಬ್ಬನಲ್ಲಿ ಈ ಶುಭಕೃತ್ ಸಂವತ್ಸರದಲ್ಲಿ ಹೆಸರಿಗೆ ತಕ್ಕಂತೆ ಲೋಕಕ್ಕೆ ಶುಭವಾಗಲಿ.

# ಶ್ರೀರಾಮ : ದೈವಿಕತೆ–ಮಾನವೀಯತೆ–ದೈವಿಕತೆ ಪ್ರತೀಕ

ಪ್ರೊ॥ ಎಂ.ಕೆ. ಶ್ರೀಧರ್

ಶ್ರೀರಾಮನು ಮಹಾವಿಷ್ಣುವಿನ ದೈವಿಕ ಅವತಾರವೋ ಅಥವಾ ಇತಿಹಾಸ ಪುರುಷನೋ ಎಂಬ ಬಹಳ ಮುಖ್ಯ ಪ್ರಶ್ನೆಯನ್ನು ಸಂಶೋಧಕರು ಎತ್ತಿದ್ದಾರೆ. ವಾಲ್ಮೀಕಿಗಳ ಪ್ರಕಾರ ಅವನು ವಿಷ್ಣುವಿನ ಅಪರಾವತಾರವೇ **(ವಿಷ್ಣುಃ ಸನಾತನಃ। ಮತ್ತು ಧರ್ಮದ ಮೂರ್ತಸ್ವರೂಪ (ಭವಾನ್ ನಾರಾಯಣೋ ದೇವಃ ಶ್ರೀಮತ್ ಚಕ್ರಾಯುಧೋ ವಿಭುಃ । ಏಕ ಶೃಂಗೋ ವರಾಹಸ್ತ್ವಮ್ ಭೂತ ಭವ್ಯ ಸಪತ್ನಜಿತ್ ॥ ಅಯೋಧ್ಯಾ ಮತ್ತು ಯುದ್ಧ ಕಾಂಡಗಳು)** ಹದಿನಾರನೇ ಶತಮಾನದಲ್ಲಿ ಬರೆದ ಅಧ್ಯಾತ್ಮ ರಾಮಾಯಣದಲ್ಲಿ 'ರಾಮನಿಗೆ ಪ್ರತಿ ಸಮಯದಲ್ಲೂ ತನ್ನ ದೈವತ್ವದ ಬಗ್ಗೆ ಅರಿವಿದ್ದರೂ, ಸಾಮಾನ್ಯ ಮನುಷ್ಯನಂತೆ ಸಹನೆಯಿಂದ ದುಃಖವನ್ನು ಅನುಭವಿಸಿದನು ಎಂಬದನ್ನು ಓದುಗರು ತಿಳಿದು ಕೊಳ್ಳಬೇಕು', ಎಂದು ವಿವರಿಸಲಾಗಿದೆ. ರಾಮನು ತನ್ನ ಜೀವನ ಪರ್ಯಂತ ಸತ್ಯ ಮತ್ತು ಧರ್ಮಗಳನ್ನು ಪರಿಪಾಲಿಸಿದನು. ತನ್ನ ತಂದೆ ದಶರಥನ ಮೂರನೇ ಹೆಂಡತಿ ಕೈಕೇಯಿಗೆ ನೀಡಿದ ವರವನ್ನು, ಶಪಥವನ್ನು ಪಾಲಿಸುವುದಾಗಿ ತಿಳಿಸಿ ಎಲೈ ಕೈಕೇಯಿಯೇ ! ನಾನೆಂದಿಗೂ ವಚನಭ್ರಷ್ಟನಾಗುವುದಿಲ್ಲ, ಜಗತ್ತಿನಲ್ಲಿ ಸಂಪತ್ತು ಅಥವಾ ಅಧಿಕಾರಕ್ಕಾಗಿ ನಾನು ಇರಲು ಬಯಸುವುದಿಲ್ಲ. ಸಾಂಸಾರಿಕ ವಿಷಯಗಳಲ್ಲಿ ಆಸಕ್ತಿ ಇರದ ಮುನಿಗೆ ನನ್ನನ್ನು ಹೋಲಿಸಬಹುದು. ನನಗೆ ಧರ್ಮದಲ್ಲಿ ಮಾತ್ರ ಆಸಕ್ತಿ ಇದೆ ಎಂಬುದನ್ನು ತಿಳಿದುಕೊ ಎನ್ನುತ್ತಾನೆ. **'ಕರಿಷ್ಯೇ ತವ ಪ್ರತಿಜ್ಞೇಚ ರಾಮೋ ದ್ವಿರ್ನಾಭಿಭಾಷತೇ । ನಾಹಮಥೋ ಹೋದೇವಿ ಲೋಕೇಮಾಂ ವಸ್ತುಮುತ್ಸಹೇ । ವಿದ್ಧಿಮಾಂ ಋಷಿಭಿಸ್ತುಲ್ಯಂ ಕೆವಲಂಧರ್ಮ ಮಾಸ್ಥಿರಮ್** ॥ (ಅರಣ್ಯಕಾಂಡ). ನನ್ನ ಮೊದಲ ಕರ್ತವ್ಯವೆಂದರೆ ತಂದೆಯ ಕ್ಷೇಮವನ್ನು ನೋಡಿಕೊಂಡು ಅವನ ಆದೇಶವನ್ನು ಪರಿಪಾಲಿಸುವುದಷ್ಟೇ । ಪಾಲಿಸುವುದು ಮಗನ ಕರ್ತವ್ಯ **(ನಹ್ಯತೋ ಧರ್ಮಚರಣಂ ಕಿಂಚಿದಸ್ತಿ ಮಹತ್ತರಮ್ । ಯಥಾ ಪಿತರಿಶುಶ್ರೂಷಾ ತಸ್ಯ ವಾ ವಚನಕ್ರಿಯಾ॥** (ಅರಣ್ಯಕಾಂಡ). ಸತ್ಯವು ಧರ್ಮದಲ್ಲಿ ಪ್ರತಿಷ್ಠಿತವಾಗಿದ್ದು ಅದೇ ಲೋಕದ ಪರಮಾರ್ಥ. ಧರ್ಮದಲ್ಲಿ ಪಿತೃ ವಚನವೂ ಅಂತರ್ಗತವಾಗಿದ್ದು ಅವೇ ನನ್ನ ಮಾರ್ಗದರ್ಶಕ ನಿಯಮಗಳಾಗಿವೆ **(ಧರ್ಮೋಹಿ ಪರಮೇಲೋಕೇ ಸತ್ಯೇಧರ್ಮಂ ಪ್ರತಿಷ್ಠಿತಮ್ । ಧರ್ಮೇ ಸಂಶ್ರಿತಮಾಪ್ಯೇತ ಪಿತುರ್ವಚನ ಉತ್ತಮಮ್ । ಧರ್ಮಾರ್ಥಕಾಮಾಃ ಬಲಜೀವಲೋಕೇ ಸಮೀಕ್ಷತಾ ಧರ್ಮ ಫಲೋದಯೇಷು** ॥ (ಅರಣ್ಯಕಾಂಡ). ತನ್ನ ಆಜನ್ಮ ಶತ್ರುವಾದ ರಾವಣನನ್ನು ಪ್ರಖರ ಕಿರಣಗಳಿಂದ ಹೊಳೆಯುತ್ತಿರುವ ಸೂರ್ಯನಂತೆ ಎಂದು ಹೊಗಳುತ್ತಾನೆ. **(ಆದಿತ್ಯ ಇವ ದುಷ್ಪೀಕ್ಷೋ ರಶ್ಮಿಭಿಃ ಭಾತಿ ರಾವಣಃ।)** ವಿಭೀಷಣನು ತನ್ನ ಅಣ್ಣ ರಾವಣನ ಅಂತ್ಯಕ್ರಿಯೆ ಮಾಡಲು ಹಿಂಜರಿದಾಗ ರಾಮನು ವಿಭೀಷಣ ! ವೈರತ್ವವು ಮರಣದವರೆಗೆ ಮಾತ್ರ. ಅದನ್ನು ಮುಂದುವರೆಸಿ ಪ್ರಯೋಜನವಿಲ್ಲ. ಅವನು ನಿನಗೆ ಹೇಗೆ ಸಹೋದರನೋ ನನಗೂ ಸಹ. ಆದ್ದರಿಂದ ಅವನ ಅಂತ್ಯಕ್ರಿಯೆಯನ್ನು ನೆರವೇರಿಸು, ಎಂದು ನಿರ್ದೇಶಿಸಿ ಅದರಲ್ಲಿ ಪಾಲ್ಗೊಳ್ಳುತ್ತಾನೆ. **(ಮರಣಾಂತಾನಿ ವೈರಾನಿ ನಿವೃತ್ತಂ ನ ಪ್ರಯೋಜನಮ್ । ಕ್ರಿಯತಾಂ ಅಸ್ಯ ಸಂಸ್ಕಾರೋ ಮಮಾಪ್ಯೇಷ ಯಥಾ ತವ** ॥). ಶತ್ರುವನ್ನು ಸಹೋದರನೆಂದು ಪರಿಗಣಿಸಿ, ಅವನ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದು ಆಧುನಿಕ ಕಾಲದಲ್ಲೂ ಒಬ್ಬ ಕ್ಷತ್ರಿಯನ ಶ್ರೇಷ್ಠ ಗುಣವೇ.

ಜಗತ್ತಿನಾದ್ಯಂತ ಸಂಶೋಧಕರು, ಚಿಂತಕರು ರಾಮನು ತನ್ನ ಧರ್ಮಪತ್ನಿ ಸೀತೆಯನ್ನು ಅಗ್ನಿಪರೀಕ್ಷೆಗೆ ಒಡ್ಡಿದ್ದು, ನಂತರ ಪರಿತಪಿಸಿದ್ದು ನ್ಯಾಯಸಮ್ಮತವಲ್ಲ ಎಂದಿದ್ದಾರೆ. ಆದರೆ ರಾಮನ ದೂರಗಾಮಿ ಚಿಂತನೆಯಂತೆ ರಾವಣನ ದೇಶದಲ್ಲಿ ಹಲವು ಸಮಯ ಕಳೆದಿದ್ದರಿಂದ ಸೀತೆಯ ಚಾರಿತ್ರ್ಯವು ಕಳಂಕವಾದದ್ದು ಎಂದು ಮೂರುಲೋಕದ ಜನರು ಭಾವಿಸಬಾರದು ಹಾಗೂ ವೈಯಕ್ತಿಕ, ಕೌಟುಂಬಿಕ ಹಿತಕ್ಕಿಂತ ರಾಜ್ಯ ಹಿತವೇ ಪರಮೋಚ್ಚವಾದದ್ದು. ನಾನೇನಾದರೂ ಸೀತೆಯನ್ನು ಹಾಗೆಯೇ ಸ್ವೀಕರಿಸಿದ್ದರೆ, ಜಗತ್ತು ದಶರಥಪುತ್ರ ರಾಮನು ಕಾಮುಕನೆಂದು ನಿಂದಿಸುತ್ತಿತ್ತು. **(ಅವಶ್ಯಂ ತ್ರಿಷು ಲೋಕೇಷು ನ ಸೀತಾ ಪಾಪಮರ್ಹತಿ । ದೀರ್ಘಕಾಲೋಷಿತಾ ಹೀಯಂ ರಾವಣಾಂತಃ ಪುರೇಶುಭಾ ॥ ಬಾಲಿಷಃಖಲುಕಾಮಾತ್ಮಾ ರಾಮೋ ದಶರಥಾತ್ಮಜಃ॥)** ಸನ್ಯಾಸಿ ಸರ್ವಾರ್ಥಸಿದ್ದನ ಪ್ರಸಂಗದಲ್ಲಿ ರಾಮನು ಕೋಪವೆಂಬುದು ಮನುಷ್ಯನ ಒಳಗಿನ ಶತ್ರು. ಅದು ತಪಸ್ಸು, ತ್ಯಾಗ ಮತ್ತು ದಾನವನ್ನು ಸುಡುತ್ತದೆ. ಆದ್ದರಿಂದ ಕೋಪವನ್ನು ನಿಯಂತ್ರಿಸಬೇಕು ಎನ್ನುತ್ತಾನೆ **(ಕ್ರೋಧೇನ ಸರ್ವಂಹರತಿ ತಸ್ಮಾತ್ ಕ್ರೋಧಂ ವಿಸರ್ಜಯೇತ್** ।). ಆ ತಪ್ಪಿತಸ್ಥ ಸನ್ಯಾಸಿಯನ್ನು ದಂಡಿಸುವ ಬದಲು ಒಂದು ಮಠದ ಕುಲಾಧಿಪತಿಯನ್ನಾಗಿ ನೇಮಿಸುತ್ತಾನೆ. ಎಸ್.ಎ. ಬಾರ್ಲಿಂಗೇ ಎಂಬ ಪಾಶ್ಚಾತ್ಯ ವಿದ್ವಾಂಸನು ಮನುಷ್ಯ ಸದ್ಗುಣಗಳು, ಮೌಲ್ಯಗಳ ಬಗ್ಗೆ ವಿಶ್ಲೇಷಿಸುತ್ತಾ ಕ್ಷಮೆ, ವಿನಯ, ಋಜು ನಡವಳಿಕೆ, ಪರಿಶುದ್ಧತೆ, ತಪಸ್ಸು, ತ್ಯಾಗ ಮುಂತಾದವು ರಾಮನಲ್ಲಿದ್ದವು ಎಂದು ವಿವರಿಸುತ್ತಾನೆ.

ರಾಮಾಯಣದಲ್ಲಿ ರಾಮನನ್ನು ಪುರುಷೋತ್ತಮ ಎಂದು ಪ್ರಸ್ತಾಪಿಸಿದ್ದನ್ನು ವಿದ್ವಾಂಸರು, ಹಲವು ರೀತಿಗಳಲ್ಲಿ ಅರ್ಥೈಸಿದ್ದಾರೆ. ಅರಬಿಂದೋ ಮಹರ್ಷಿಗಳು ಆದರ್ಶ ಜ್ಞಾನಪುರುಷನನ್ನು ಚಿತ್ರಿಸುವಾಗ ರಾಮನ ಗುಣಗಳು ಅವರ ಮನಸ್ಸಿನಲ್ಲಿ ಇದ್ದವು ಎಂದು ಭಾಸವಾಗುತ್ತದೆ. ಮನುಷ್ಯನ ಮೊದಲ ವ್ಯವಹಾರವೆಂದರೆ ಜಗತ್ತಿನಲ್ಲಿ ತನ್ನ ಅಸ್ತಿತ್ವವನ್ನು ಪ್ರತಿಷ್ಠಾಪಿಸಿ ಅತಿಶಯವಾಗುವುದು. ಅವನು ತನ್ನ ಭಾಗಶಃ ಚೈತನ್ಯವನ್ನು ಪೂರ್ಣ ಚೈತನ್ಯವನ್ನಾಗಿ ರೂಪಿಸುವುದು. ತನ್ನ ಪರಿಸರದ ಮೇಲೆ ಪ್ರಭುತ್ವ ಹೊಂದಿ ಜಾಗತಿಕ ಸಾಮರಸ್ಯ ಮತ್ತು ಜಾಗತಿಕ ಏಕತೆ ಸಾಧಿಸುವುದು, ತನ್ನ ವೈಯುಕ್ತಿಕತೆಯನ್ನು ಅರಿತು ವಿಶ್ವ ಚೈತನ್ಯವನ್ನಾಗಿ ಪರಿವರ್ತಿಸಿಕೊಳ್ಳುವುದು. ಕೊನೆಗೆ ವಿಶ್ವ ಚೈತನ್ಯದ, ಆಧ್ಯಾತ್ಮಿಕ ಸುಖದ ಭಾಗವಾಗುವುದು ಎಂದಿದ್ದಾರೆ.

ಟ್ರಾಯ್ ವಿಲ್ಸನ್ ಆರ್ಗನ್ ಎಂಬುವರ ಪ್ರಕಾರ ಒಬ್ಬ ಶ್ರೇಷ್ಠ ವ್ಯಕ್ತಿಯ ಆದರ್ಶವು ನೈತಿಕ, ಪಾರಮಾರ್ಥಿಕ, ಧಾರ್ಮಿಕ ಅಂಶಗಳನ್ನು ಒಳಗೊಂಡಿದ್ದು, ವಿವಿಧ ಕಾಲಗಳಲ್ಲಿ ಒತ್ತಿ ಹೇಳಲಾಗಿದೆ. ವೈದಿಕ ಯುಗದಲ್ಲಿ ಪೂರ್ಣಗೊಂಡ ಮನುಷ್ಯನು ದೇವತೆಗಳನ್ನು ಸಂತುಷ್ಟಗೊಳಿಸಲು ಪ್ರಾರ್ಥನೆ, ಯಾಗಕ್ರಿಯೆಗಳಲ್ಲಿ ತೊಡಗಿದ್ದನು. ಈ ವೈದಿಕ ವಿಧಿಗಳು ಚಾಚೂ ತಪ್ಪದೇ ನಡೆಯಲು, ವ್ಯಕ್ತಿ ಪರವಾಗಿರಲು ಒಬ್ಬ ಪೂರ್ಣ ವ್ಯಕ್ತಿಯ ಅವಶ್ಯಕತೆ ಇತ್ತು. ಆ ಪುರೋಹಿತನೇ ಎಳ್ಳಷ್ಟು

ತಪ್ಪಿಲ್ಲದೇ ವೈದಿಕ ಕ್ರಿಯೆಗಳನ್ನು ಪೂರೈಸಿ ಮನುಷ್ಯದೇವನಾದನು. ಉಪನಿಷತ್ತುಗಳ ಕಾಲದಲ್ಲಿ ಅ ಪೂರ್ಣತ್ವಕೆ ರಹಸ್ಯ ದೀಕ್ಷೆಯನ್ನು ಅಳವಡಿಸಲಾಯಿತು. ಪೌರಾಣಿಕ ಮತ್ತು ವೀರಕಾವ್ಯಗಳ ಯುಗಗಳಲ್ಲಿ, ಪೂರ್ಣವ್ಯಕ್ತಿಯೆಂದರೆ ಸಮಾಜದ, ಸಭೆಗಳ ಕರ್ತವ್ಯಗಳನ್ನು ನಿಭಾಯಿಸುವವನು, ನಾಯಕತ್ವದ ತರಬೇತಿ ಹೊಂದಿ, ಸಮುದಾಯ ವನ್ನು ಮುನ್ನಡೆಸುವ ವ್ಯಕ್ತಿಯಾಗಿ ಭಗವಂತನಿಗೆ ಭಕ್ತನಾಗಿ ಇರಬೇಕೆಂಬ ಅಂಶವನ್ನು ಸೂಚಿಸಲಾಯಿತು. ಅವನ ಮನಸ್ಸು, ಆತ್ಮವು ದೈವತ್ವವನ್ನು ಹೊಂದಬೇಕಾಗಿತ್ತು. ಮಹಾತ್ಮ ಗಾಂಧಿಯವರಿಗೆ ರಾಮನು ಆದರ್ಶ ವ್ಯಕ್ತಿಯಾಗಿ, ಸತ್ಯ, ಸತ್ಯಶೋಧನೆಯ ಪರಿಪೂರ್ಣ ಪುರುಷನಾದನು. ರಬೀಂದ್ರನಾಥ ಟ್ಯಾಗೋರ್ ಅವರಿಗೆ ರಾಮನಂತಹ ಮನುಷ್ಯನು ಅವನ ಮೂಲತತ್ವದಲ್ಲಿ ಅನಂತ, ಪ್ರದರ್ಶನದಲ್ಲಿ ಎಲ್ಲೆ ಮೀರದವನು. ಡಾ.ಎಸ್. ರಾಧಾಕೃಷ್ಣನ್ ಅವರ ಅಭಿಪ್ರಯದಲ್ಲಿ ರಾಮನು ಸ್ವತಂತ್ರ, ಮುಕ್ತ ಪುರುಷ. ಈ ಮೇಲ್ಕಂಡ ಚರ್ಚೆಗಳಿಂದ ಅರಿವಾಗುವುದೇನೆಂದರೆ ಎಲ್ಲ ಆಧುನಿಕ ಚಿಂತಕರೂ, ಪರಿಪೂರ್ಣ ವ್ಯಕ್ತಿಯನ್ನು ಚಿತ್ರಿಸುವಾಗ ವೇದಾಂತದ ಪರಬ್ರಹ್ಮ, ರಾಮ, ಕೃಷ್ಣರ ಗುಣಗಳನ್ನು ತಮ್ಮ ಮನಸ್ಸಿನಲ್ಲಿ ಕಲ್ಪಿಸಿಕೊಂಡಿರಬಹುದು. ಕೊನೆಯದಾಗಿ ಯಂಗ್ ಊನ್ ಎಂಬ ವಿಮರ್ಶಕನ ಪ್ರಕಾರ, 'ರಾಮಾಯಣ ವೀರಕಾವ್ಯವು ಪವಿತ್ರ ಗ್ರಂಥಕ್ಕಿಂತ ಗಂಧರ್ವ ಕಥೆಯಂತೆ ಭಾಸವಾದರೂ, ಒಬ್ಬ ಸಾತ್ವಿಕ ಹಿಂದೂವಿಗೆ ಒಬ್ಬನು ಹೇಗೆ ಪ್ರತಿಜ್ಞೆ ಪೂರೈಸಬೇಕು, ತಾಯ್ತಂದೆಯರ ಇಚ್ಛೆಯನ್ನು ಪರಿಪಾಲಿಸಬೇಕು, ಹೇಗೆ ಜೀವನ ಪ್ರೀತಿ ಹೊಂದಬೇಕು. ಎಲ್ಲ ಅಡ್ಡಿ, ಕಷ್ಟ, ನಷ್ಟಗಳನ್ನು ಧೈರ್ಯವಾಗಿ ಎದುರಿಸಬೇಕು ಎಂದು ಸೂಚಿಸುತ್ತದೆ. ಹಿಂದೂವಿಗೆ ರಾಮನು ದೈವೀಗುಣಗಳ ಶೌರ್ಯ–ಪರಾಕ್ರಮಗಳ ಅವತಾರ, ಮಹಾವಿಷ್ಣುವಿನ ದೈವಾನುಗ್ರಹ ಶಕ್ತಿಯ ಪರಿಪೂರ್ಣ ಮನುಷ್ಯನ ಮೂರ್ತಸ್ವರೂಪವೇ' ! **(ಲೇಖಕರ ಆಂಗ್ಲಲೇಖನದ ಭಾಷಾಂತರ )**


**R. KRISHNAMURTHY B.E.**
**MANAGING PARTNER**

**M.R.K. INDUSTRIES**
B. 398 (B) 7th Cross, Peenya 1st Stage
BENGALURU-560 058
Mob. : 9972372101
Phone : +91-080 28370747, 28392549
E-mail : mrkrindustries@gmail.com
Website : www.mrk_industries.com

Kirloskar
**Authorised**

TUV NABCB QM 002
**ISO 9001 : 2008 COMPANY**

**MANUFACTURING OF : D.C. MOTORS**
**We undertake Repair/Rewinding/Servicing of DC/AC, Imported Machine Alternators, Millduty Machine, Repair & Mag. of Commutators Epoxy Spool Mag. & D.C. Machine Spare Parts.**


## ಸೂಚನೆ

**ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಈಗಿರುವ ಸದಸ್ಯರ ಪಟ್ಟಿಯನ್ನು ಪರಿಶೀಲಿಸಿ ಪರಿಷ್ಕರಣೆ ಮಾಡಲು ಶ್ರೀ ವಿ.ಸತ್ಯೇಂದ್ರರವರನ್ನು ಸಂಚಾಲಕರನ್ನಾಗಿ ನೇಮಿಸಿ ಉಪಸಮಿತಿಯನ್ನು ರಚಿಸಿರುತ್ತಾರೆ.**

**ಸಂಚಾಲಕರು ಮಹಾಸಭಾದ ಕೇಂದ್ರಕಾರಿಣಿ ಸಭೆಯ ಸದಸ್ಯರನ್ನು ಸಂಪರ್ಕಿಸಿ ತಮ್ಮ ವ್ಯಾಪ್ತಿಗೆ ಬರುವ ಮಹಾಸಭಾ ಸದಸ್ಯರ ವಿವರವನ್ನು ಸಲ್ಲಿಸುವಂತೆ ಕೋರುತ್ತೇವೆ. ದಯಮಾಡಿ ಸಹಕರಿಸಬೇಕೆಂದು ವಿನಂತಿಸುತ್ತೇನೆ.**

**ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : ವಿ. ಸತ್ಯೇಂದ್ರ –9844001238 ಎಸ್. ಶ್ರೀಧರಮೂರ್ತಿ–ಪ್ರಧಾನ ಕಾರ್ಯದರ್ಶಿ**

# ಆಚಾರ್ಯ ಶ್ರೀಮಚ್ಛಂಕರ ಭಗವತ್ಪೂಜ್ಯಪಾದರು

–ಅನಂತರಾಮ್

'ಶಂಕರ'ಈ ಪದದ ನಾಮ ಶ್ರವಣ ಮಾತ್ರದಿಂದಲೇ ಎಲ್ಲ ವೈಚಾರಿಕರ, ತತ್ತ್ವಜಿಜ್ಞಾಸುಗಳ ಹೃದಯಾಂತರಾಳದಲ್ಲಿ ವಿದ್ಯುತ್ ಸಂಚಾರ ವಾಗುತ್ತದೆ. ಈ ಮಹಾನುಭಾವರು ಸಮಗ್ರ ಮಾನವಕುಲವನ್ನೇ ಉದ್ದೇಶಿಸಿ ಅನುಗ್ರಹಿಸಿರುವ ಉಪದೇಶಗಳು ಸಾರ್ವತ್ರಿಕ ಪೂರ್ಣಾನುಭವಕ್ಕೆ ಹೊಂದಿಕೆಯಾಗುವುದರಿಂದ ವಿಶೇಷವಾಗಿ ಮಾನ್ಯತೆಯನ್ನು ಪಡೆದಿವೆ. ಈ ಉಪದೇಶಗಳು ಎಲ್ಲ ಮಾನವರನ್ನೂ ತಲುಪಬೇಕು ಎಂಬ ಉದ್ದೇಶ ದಿಂದ ಇಡೀ ಭರತಖಂಡದ ಉದ್ದಗಲಕ್ಕೂ ಮೂರು ಬಾರಿ ಕಾಲ್ನಡಿಗೆ ಯಿಂದ ಕ್ರಮಿಸಿ ತಮ್ಮ ಉಪದೇಶಗಳನ್ನು ಆಗಮ ಮತ್ತು ಉಪಪತ್ತಿ ಗಳಿಂದ ಸಮರ್ಥಿಸಿ ಪ್ರಚಾರ ಮಾಡಿದರು. ಆ ಕಾಲದಲ್ಲಿ ಅನೇಕ ವಿಧವಾಗಿ ಮೂರಾಬಟ್ಟೆಯಾಗಿ ಹಂಚಿಹೋಗಿ ನಾನಾ ವಿಧವಾದ ಆಚಾರ, ವಿಚಾರ ಸಂಸ್ಕೃತಿ ಸಂಪ್ರದಾಯಗಳಿಂದ ನಲುಗಿ ಹೋಗಿದ್ದ ಭಾರತದೇಶವನ್ನು ತಮ್ಮ ಚಿಂತನಾಲಹರಿಯಿಂದ ಒಗ್ಗೂಡಿಸಿ ಏಕಪ್ರಕಾರ ವಾದ ಸಂಹಿತೆಯನ್ನು ಪ್ರಚಲಿತಗೊಳಿಸಿ ಮಾನವಕುಲಕ್ಕೂ ಮತ್ತೆ ಇಡೀ ವಿಶ್ವಕ್ಕೂ ಅವರು ಮಾಡಿರುವ ಉಪಕಾರ ನಿಜಕ್ಕೂ ಉಪಮಾತೀತ. ಇಷ್ಟಕ್ಕೂ ಈ ಮಹನೀಯರು ಯಾವ ಹೊಸದಾದ ವಿಚಾರಲಹರಿ ಯನ್ನಾಗಲೀ ತತ್ತ್ವವನ್ನಾಗಲೀ ಮತವನ್ನಾಗಲೀ ಬೋಧಿಸಲಿಲ್ಲ. ಯಾವ ತತ್ತ್ವಸಿದ್ಧಾಂತಗಳು ಇಡೀ ಮಾನವಕುಲದ ಉದ್ಧಾರಕ್ಕಾಗಿ ಸ್ವಯಂ ಪರಮೇಶ್ವರನ ಮುಖಾರವಿಂದದಿಂಲೇ ನೇರವಾಗಿ ಪರಿಶುದ್ಧವಾದ ವೇದಗಳ ರೂಪದಿಂದ ಉದ್ಭವಿಸಿ, ಹಿರಣ್ಯಗರ್ಭಬ್ರಹ್ಮನ ಬುದ್ಧಿಗೆ ಕಲ್ಪಾದಿಯಲ್ಲಿ ಗೋಚರವಾಗಿ, ಪರಂಪರಾಗತವಾಗಿ ನಡೆದು ಬಂದು, ನಂತರ ಕಾಲ ಮಹಿಮೆಯಿಂದಲೂ ಮತ್ತು ವೇದೋಪದೇಶಗಳನ್ನು ಯಥಾವತ್ತಾಗಿ ತಿಳಿದು ಆಚರಣೆಗೆ ತರುವುದಕ್ಕೆ ಅವಶ್ಯಕವಾದ ಬುದ್ಧಿಯ ದೌರ್ಬಲ್ಯದಿಂದಲೂ ಸಾಂಕರ್ಯಕ್ಕೆ ಒಳಗಾಗಿ ಆ ವೇದಸಂದೇಶಗಳು ಅನೇಕ ವಿಧವಾಗಿ ಅರ್ಥೈಸಲ್ಪಟ್ಟವು. ಅಷ್ಟೇ ಅಲ್ಲ, ಎಲ್ಲರೂ ತಾವು ಹೇಳುವುದೇ ವೇದಗಳ ಯಥಾರ್ಥವಾಗಿದೆಯೆಂದು ಪ್ರಚಾರ ಮಾಡಿದರು. ಇಷ್ಟೇ ಅಲ್ಲದೆ ವೇದಬಾಹ್ಯವಾದ ಅವೈದಿಕ ಮತಗಳ ಅನುಯಾಯಿಗಳೂ ಪ್ರಾಬಲ್ಯವನ್ನು ಪಡೆದು ತಮ್ಮತಮ್ಮ ಸಿದ್ಧಾಂತ ಗಳನ್ನೇ ಸಮರ್ಥಿಸಿಕೊಳ್ಳುತ್ತಾ ಪ್ರಚಾರ ಮಾಡುತ್ತಿದ್ದರು. ಹೀಗೆ ಭಿನ್ನ ಭಿನ್ನ ಮತಗಳಿಂದ ಕೂಡಿ ಅನೇಕ ಪ್ರಕಾರಗಳ ಸಿದ್ಧಾಂತಗಳಿಂದ ಜನರ ಜೀವನಕ್ರಮವು ವ್ಯಸ್ತವಾಗಿ ಪರಸ್ಪರ ದ್ವೇಷಾಸೂಯೆಗಳಿಗೂ ಕಾರಣ ವಾಯಿತು ಹಾಗೂ ದೇಶದ ಸಮಗ್ರತೆಗೂ ಕುಠಾರಪ್ರಾಯವಾಯಿತು. ಇಂತಹ ಸಂದಿಗ್ಧ ಕಾಲದಲ್ಲಿ ವೇದವಾಕ್ಯಗಳಿಗೆ ಯಥಾವತ್ತಾದ ಅರ್ಥವನ್ನು ನಿರ್ಣಯಿಸಿ ಅದನ್ನು ಬೋಧಿಸಿ ಜನರನ್ನು ಎಚ್ಚರಿಸಿ, ಸನಾತನ ಸಂಸ್ಕೃತಿಯನ್ನು ಪುನರುದ್ಧಾರ ಮಾಡಿ ದೇಶದಲ್ಲಿ ಸಮಗ್ರತೆ ಯನ್ನು ಸ್ಥಾಪಿಸುವುದಕ್ಕಾಗಿಯೇ ಅವತರಿಸಿದ ಮಹಾನುಭಾವರೇ ಆಚಾರ್ಯಶಂಕರರು.

ಇನ್ನು ಈ ಮಹಾನುಭಾವರ ಕಾಲದೇಶಾದಿಗಳನ್ನು ನಿರ್ಣಯಿಸಲು ನಮಗೆ ಅವರ ಪ್ರಸ್ಥಾನತ್ರಯಭಾಷ್ಯಗಳಿಂದಲಾಗಲೀ ಅಥವಾ ಬೇರೆಯ ಅವರ ಸಮಾಕಾಲೀನರಿಂದಲಾಗಲೀ ಅಥವಾ ಭಾಷ್ಯಗಳ ವ್ಯಾಖ್ಯಾನೋಪವ್ಯಾಖ್ಯಾನಗಳಿಂದಲಾಗಲೀ ಪ್ರಕರಣ ಗ್ರಂಥಗಳಿಂದಾಗಲೀ ನಿರ್ದುಷ್ಟವಾದ ಯಾವ ಪ್ರಮಾಣವೂ ದೊರೆಯುವುದಿಲ್ಲ. ಈಗ ಸದ್ಯಕ್ಕೆ ದೊರೆತಿರುವ ಆಚಾರ್ಯರನ್ನು ಕುರಿತಾದ ಕಾಲ ದೇಶ ಮತ್ತು ಘಟನಾವಳಿಗಳ ವಿವರಗಳೆಲ್ಲಕ್ಕೂ ಆಚಾರ್ಯರ ಕಾಲದಿಂದ ಸುಮಾರು ಐದಾರು ಶತಮಾನಗಳ ನಂತರ ರಚಿತವಾದ ಶಂಕರವಿಜಯ ಅಥವಾ ಶಂಕರದಿಗ್ವಿಜಯ ಎಂಬ ಗ್ರಂಥಗಳೇ ಆಧಾರವಾಗಿವೆ. ಅವುಗಳಲ್ಲೂ ವಿವಿಧ ರಚನಾಕಾರರಿಂದ ಸುಮಾರು ಇಪ್ಪತ್ತಕ್ಕೂ ಹೆಚ್ಚು ಶಂಕರ ವಿಜಯಗ್ರಂಥಗಳು ರಚಿತವಾಗಿದ್ದು ಅವೆಲ್ಲವೂ ಈಗ ಉಪಲಬ್ಧವಾಗಿಲ್ಲ. ಲಭ್ಯವಿರುವ ಕೆಲವು ಶಂಕರ ವಿಜಯಗ್ರಂಥಗಳಲ್ಲಿ ಮುಖ್ಯವಾಗಿ ಹೆಚ್ಚು ಪ್ರಮಾಣಭೂತವಾಗಿ ಪ್ರಚಲಿತವಾಗಿರುವ ಗ್ರಂಥಗಳೆಂದರೆ, ಮಾಧವೀಯಶಂಕರ ದಿಗ್ವಿಜಯ, ಚಿದ್ವಿಲಾಸೀಯ ಶಂಕರ ವಿಜಯ ಆನಂದಗಿರೀಯ ಶಂಕರ, ವಿಜಯ ವ್ಯಾಸಾಚಲೀಯ ಶಂಕರ ವಿಜಯ ಕೇರಲೀಯ ಶಂಕರ ವಿಜಯ ಮುಂತಾದವುಗಳು. ಕೇರಲೀಯಶಂಕರ ವಿಜಯದ ಪ್ರಕಾರ ನನ್ದನ ಸಂವತ್ಸರದ ವೈಶಾಖ ಶುಕ್ಲ ಪಂಚಮೀ ತಿಥಿಯಂದು ಪುನರ್ವಸು ನಕ್ಷತ್ರದಲಿ ಆಚಾರ್ಯರ ಅವತಾರ ವಾಯಿತೆಂದು ತಿಳಿದುಬರುತ್ತದೆ–

**ಪ್ರವೃದ್ಧೇತತ್ರಚಾಸೂತ ನನ್ದನಂ ನನ್ದನೇ ಶುಭೇ ।**

**ವೈಶಾಖೇ ಮಾಸಿ ಪಂಚಮ್ಯಾಂ ಶುಕ್ಲಪಕ್ಷೇ ಪುನರ್ವಸೌ ॥**

ಐದನೆಯ ವರ್ಷದಲ್ಲಿ ಉಪನೀತನಾಗಿ ಎಂಟನೆಯ ವರ್ಷದಲ್ಲಿ ನಾಲ್ಕು ವೇದಗಳಲ್ಲಿಯೂ ಪಾರಂಗತನಾಗಿ ಹನ್ನೆರಡನೆಯ ವರ್ಷದಲ್ಲಿ ಸಕಲಶಾಸ್ತ್ರಗಳಲ್ಲೂ ಪಾಂಡಿತ್ಯವನ್ನು ಗಳಿಸಿ ಹದಿನಾರನೆಯ ವರ್ಷದಲ್ಲಿ ಪ್ರಸ್ಥಾನತ್ರಯಗಳಿಗೆ ಲೋಕೋತ್ತರವಾದ ಪ್ರಸನ್ನ ಗಂಭೀರವಾದ ಭಾಷ್ಯಗಳನ್ನು ರಚನೆ ಮಾಡಿರುತ್ತಾರೆ. ಮುಂದೆ ಹದಿನಾರು ವರ್ಷಗಳು ಪರ್ಯನ್ತ ಭಾರತ ದೇಶದ ಉದ್ದಗಲಕ್ಕೂ ಕಾಲ್ನಡಿಗೆಯಿಂದ ಸಂಚರಿಸಿ ತಾವು ರಚಿಸಿದ ಭಾಷ್ಯಗಳನ್ನು ಪ್ರಚಾರ ಮಾಡಿ ಈ ದೇಶದ ಸನಾತನ ಭವ್ಯ ಸಂಸ್ಕೃತಿ ಪರಂಪರೆಯನ್ನು ಪುನರುದ್ಧಾರ ಮಾಡಿ, ಹಾಗೂ ವೇದೋಪದಿಷ್ಟ ಜ್ಞಾನವನ್ನು ಜನರಿಗೆ ತಿಳಿಸಿ ತಮ್ಮ 32 ನೆಯ ವಯಸ್ಸಿನಲ್ಲಿ ಅನ್ತರ್ಧಾನರಾದ ಮಹಾನ್‌ಚೇತನ ಆಚಾರ್ಯ ಶಂಕರ.

**ಅಷ್ಟವರ್ಷೇ ಚತುರ್ವೇದೀ ದ್ವಾದಶೇ ಸರ್ವಶಾಸ್ತ್ರವಿತ್ ।**

**ಷೋಡಶೇಕೃತವಾನ್ ಭಾಷ್ಯಂ ದ್ವಾತ್ರಿಂಶೇ ಮುನಿರಭ್ಯಗಾತ್ ॥**

ಆಚಾರ್ಯರು ಮಾಡಿರುವ ಲೋಕೋಪಕಾರಕ್ಕೆ ಅವರು ರಚಿಸಿದ ಪ್ರಸ್ಥಾನತ್ರಯ ಭಾಷ್ಯಗ್ರಂಥಗಳೇ ದ್ಯೋತಕ. ಪ್ರಸ್ಥಾನ ತ್ರಯಗಳೆಂದರೆ– ಉಪನಿಷತ್ತುಗಳು, ಭಗವದ್ಗೀತೆ ಮತ್ತು ಭಗವಾನ್ ಬಾದರಾಯಣರಿಂದ ರಚಿತವಾದ ಬ್ರಹ್ಮಸೂತ್ರಗಳು. ಇದನ್ನೇ ಶಾರೀರಕ ಮೀಮಾಂಸೆಯೆಂದೂ ಕರೆಯುತ್ತಾರೆ. ಇದು ನಾಲ್ಕು ಅಧ್ಯಾಯಗಳಿಂದ ಕೂಡಿರುವುದರಿಂದ ಇದಕ್ಕೆ ಚತುರ್ಲಕ್ಷಣೀ ಎಂದೂ ಹೆಸರಿದೆ. ವೇದಾಂತಗಳ ಎಂದರೆ

ಉಪನಿಷತ್ತಿನ ವಾಕ್ಯಗಳೇ ಈ ಸೂತ್ರಗಳಿಗೆ ವಿಷಯವಾಗಿರುವುದರಿಂದ ವೇದಾಂತ ಸೂತ್ರಗಳೆಂದೂ ಕರೆಯುತ್ತಾರೆ. ಈ ವೇದಾಂತ ವಾಕ್ಯಗಳ ಅರ್ಥವನ್ನು ವಿಚಾರ ಮಾಡಿ ಅನುಭವದಿಂದ ದೃಢೀಕರಿಸಿಕೊಂಡು ನಿಶ್ಚಯ ಮಾಡಿಕೊಳ್ಳುವುದರಿಂದ ಮಾತ್ರ ಬ್ರಹ್ಮಜ್ಞಾನವು ಸಾಧ್ಯ ಎಂಬ ಈ ವಿಚಾರವನ್ನು ಆಚಾರ್ಯರೇ ತಮ್ಮ ಸೂತ್ರಭಾಷ್ಯದಲ್ಲಿ ತಿಳಿಸಿಯೂ ಇರುತ್ತಾರೆ. 'ವೇದಾನ್ತವಾಕ್ಯಕುಸುಮಗ್ರಥನಾರ್ಥತ್ವಾತ್ ಸೂತ್ರಾಣಾಮ್; ವೇದಾನ್ತವಾಕ್ಯಾನಿ ಹಿ ಸೂತ್ರೈರುದಾಹೃತ್ಯ ವಿಚಾರ್ಯನ್ತೇ; ವಾಕ್ಯಾರ್ಥ ವಿಚಾರಣ–ಅಧ್ಯವಸಾನನಿರ್ವೃತ್ತಾ ಹಿ ಬ್ರಹ್ಮಾವಗತಿಃ (ಸೂ.ಭಾ.1.1.2). ಇಂತಹ ಮೋಕ್ಷ ಕಾರಣವಾದ ಶಾಸ್ತ್ರವನ್ನು ಅಧ್ಯಯನ ಮಾಡಿ ಕೃತಾರ್ಥ ರಾಗುವುದಕ್ಕೆ ಜಾತಿ ಮತಗಳ ಯಾವ ನಿರ್ಬಂಧವೂ ಇರುವುದಿಲ್ಲ. ಸಾಧನ ಚತುಷ್ಟಯ ಸಂಪನ್ನರಾದ ಯಾರೇ ಆಗಲೀ ಪರಮ ಪುರುಷಾರ್ಥವಾದ ಮೋಕ್ಷವೆಂಬ ಈ ಫಲವನ್ನು ಈ ಜನ್ಮದಲ್ಲಿಯೇ ಈ ಶರೀರವು ಇದ್ದುಕೊಂಡಿರುವಾಗಲೇ ವೇದಾಂತ ವಾಕ್ಯಗಳನ್ನು ಅಧ್ಯಯನ ಮಾಡಿ ಅವುಗಳ ಅರ್ಥವನ್ನು ಅನುಭವಕ್ಕೆ ತಂದುಕೊಂಡ ಸಮಕಾಲ ದಲ್ಲಿಯೇ ಪಡೆದು ಕೃತಾರ್ಥರಾಗುತ್ತಾರೆ. **'ವೇದಾನ್ತವಾಕ್ಯಾರ್ಥ ಜ್ಞಾನಸಮಕಾಲೇ ಏವ ಪರ್ಯವಸಿತೋ ಭವತಿ ಕೇವಲ ಶಬ್ದಪ್ರಕಾಶಿತಾರ್ಥ ಜ್ಞಾನಮಾತ್ರನಿಷ್ಠಾವ್ಯತಿರಿಕ್ತಾಭಾವಾತ್'** (ಮುಂ.ಭಾ.1.1.6).ಇದು ಮಿಕ್ಕ ಕರ್ಮಫಲಗಳಂತೆ ಜನ್ಮಾಂತರದಲ್ಲಿ ಲೋಕಾಂತರದಲ್ಲಿ ನಿರ್ದಿಷ್ಟ ವರ್ಣಾಶ್ರಮದವರು ಮಾತ್ರ ಪಡೆಯಬೇಕಾದ ಫಲವಲ್ಲ. ಇದು ಸಕಲ ಮಾನವರ ಆ ಜನ್ಮಸಿದ್ಧ ಹಕ್ಕು.ಇದೇ ಎಲ್ಲ ವೇದಾಂತಗಳ ಪ್ರತಿಪಾದನೆ ಯಾಗಿದೆ ಎಂಬುದನ್ನು ಜಗತ್ತಿಗೆ ತೋರಿಸಿದ ಮಹಾನುಭಾವರು ಆಚಾರ್ಯ ಶಂಕರರು. ಈಶಾವಾಸ್ಯ, ಕೇನ, ಕಾಠಕ, ಮುಂಡಕ, ಪ್ರಶ್ನ, ತೈತ್ತಿರೀಯ, ಐತರೇಯ, ಛಾನ್ದೋಗ್ಯ ಮತ್ತು ಬೃಹದಾರಣ್ಯಕ ಉಪನಿಷತ್ತುಗಳಿಗೆ, ಭಗವದ್ಗೀತೆಗೆ ಮತ್ತು ಬ್ರಹ್ಮಸೂತ್ರಗಳಿಗೆ ಅವರು ಭಾಷ್ಯಗಳನ್ನು ರಚನೆ ಮಾಡಿರುತ್ತಾರೆ. ವಿದ್ವತ್ತು, ಶಾಸ್ತ್ರಪಾಂಡಿತ್ಯ, ಭಾಷಾ ಲಾಲಿತ್ಯ, ಆಗಮೋಪಪತ್ತಿಗಳಿಗನುಸಾರವಾಗಿ ಸಿದ್ಧಾಂತ ನಿರೂಪಣಾ ಕೌಶಲ, ಪ್ರಸನ್ನ ಗಂಭೀರವಾದ ನಿರೂಪಣಾಶೈಲಿ, ಪ್ರತಿಪಕ್ಷದತಾರ್ಕಿಕ ರನ್ನು ಅವರ ನ್ಯಾಯಗಳಿಂದಲೇ ದಿಙ್ಮೂಢರನ್ನಾಗಿಸಿ ನಿರುತ್ತರರನ್ನಾಗಿ ಸುಚಾತುರ್ಯ, ನಿಷ್ಪಕ್ಷಪಾತವಾಗಿ ವಾಕ್ಯಾರ್ಥಗಳನ್ನು ನಿರ್ಣಯ ಮಾಡಿ ತತ್ತ್ವವನ್ನು ತಿಳಿಸುವ ಕ್ರಮ ಈ ಎಲ್ಲ ಅಂಶಗಳಿಗೆ ಕೈಗನ್ನಡಿಯಾಗಿ ಇಂದಿಗೂ ಸರ್ವಲೋಕಮಾನ್ಯವಾಗಿ ಮೆರೆಯುತ್ತಿರುವ ಈ ಭಾಷ್ಯಗ್ರಂಥವನ್ನು ರಚನೆ ಮಾಡಿದಾಗ ಆಚಾರ್ಯರ ವಯಸ್ಸು ಓಹ್! ಕೇವಲ ಹದಿನಾರು! ಆಚಾರ್ಯರ ಸಾಕ್ಷಾಚ್ಛಿಷ್ಯರಾದ ಶ್ರೀ ಸುರೇಶ್ವರಾಚಾರ್ಯರು ತಮ್ಮ ತೈತ್ತಿರೀಯೋಪನಿಷದ್ ಭಾಷ್ಯವಾರ್ತಿಕ ದಲ್ಲಿ ಹೀಗೆ ಹೇಳಿದ್ದಾರೆ, – 'ಯದ್ವಾಣೀಕುಲಿಶಾವರುಗ್ಣಮತಯಃ ಪೇತುರ್ದಿಶಸ್ತಾರ್ಕಿಕಾಃ', ಆಚಾರ್ಯಪದ್ಮಪಾದರೂ ತಮ್ಮ ಪಂಚಪಾದಿಕೆ ಯಲ್ಲಿ'ಪದಾದಿವೃನ್ತಭಾರೇಣಗರಿಮಾಣಂ ಬಿಭರ್ತಿ' ಎಂಬುದಾಗಿ ತಮ್ಮ ಗುರುಗಳ ಭಾಷ್ಯಗಳನ್ನು ಹೊಗಳಿ ಹೇಳಿದ್ದಾರೆ. ವಾಚಸ್ಪತಿಮಿಶ್ರರು ತಮ್ಮ ಭಾಮತೀ ವ್ಯಾಖ್ಯಾನಗ್ರನ್ಥದಲ್ಲಿ' ನತ್ವಾ ವಿಶುದ್ಧ ವಿಜ್ಞಾನಂ ಶಂಕರಂಕರುಣಾಕರಮ್ । ಭಾಷ್ಯಂ ಪ್ರಸನ್ನಗಂಭೀರಂತತ್ಪ್ರಣೀತಂ ವಿಭಜ್ಯತೇ'ಎಂದುಆಚಾರ್ಯರನ್ನು ಅಭಿವಂದಿಸಿ ಅವರ ಭಾಷ್ಯದ ಶೈಲಿಗೆ ತಲೆದೂಗಿ ಅದಕ್ಕೆ ತಮ್ಮ ವ್ಯಾಖ್ಯಾನವನ್ನು ಬರೆದಿರುತ್ತಾರೆ. ಹೀಗೆ ನೂರಕ್ಕೂ ಹೆಚ್ಚು ವಿವಿಧ ವ್ಯಾಖ್ಯಾನೋಪವ್ಯಾಖ್ಯಾನಕಾರರು ಆಚಾರ್ಯರನ್ನು ಗೌರವಿಸಿ ರಚಿಸಿರುವ ನೂರಾರು ಪ್ರಶಸ್ತಿ ಶ್ಲೋಕಗಳು ಲಭ್ಯವಿವೆ. ಈ ಪ್ರೌಢ ಗ್ರಂಥಗಳು ಕೇವಲ ಉತ್ತಮಾಧಿಕಾರಿಗಳಿಗೆ ಎಂದಿಟ್ಟುಕೊಂಡರೂ, ಮಧ್ಯಮಾಧಿಕಾರಿಗಳೂ ಈ ಉಪನಿಷತ್ತ್ರತಿ ಪಾದ್ಯವಾದ ಉಪದೇಶಗಳನ್ನು ಅರ್ಥಮಾಡಿಕೊಂಡು ಅನುಭವಕ್ಕೆ ತಂದುಕೊಂಡು ಮೋಕ್ಷ ಫಲದಿಂದ ವಂಚಿತರಾಗದೇ ಇರಲಿ ಎಂಬ ಉದ್ದೇಶದಿಂದ ಭಗವಾನ್ ಶಂಕರರು ಅನೇಕಾನೇಕ ಪ್ರಕರಣಗ್ರಂಥ ಗಳನ್ನೂ ರಚನೆ ಮಾಡಿರುತ್ತಾರೆ. ವಿವೇಕ ಚೂಡಾಮಣಿ, ತತ್ತ್ವಬೋಧ, ಆತ್ಮಬೋಧ, ಬ್ರಹ್ಮಜ್ಞಾನಾವಳೀಮಾಲಾ, ದಕ್ಷಿಣಾಮೂರ್ತಿ ಸ್ತೋತ್ರ, ಉಪದೇಶ ಸಾಹಸ್ರೀ ಗ್ರಂಥಗಳು ಇವುಗಳಲ್ಲಿ ಮುಖ್ಯವಾದವು. ಮುಂದುವರೆದು, ಸಾಮಾನ್ಯ ಬುದ್ಧಿಯ ಅಧಿಕಾರಿಗಳಿಗೂ ಕೂಡ ಇದೇ ಉದ್ದೇಶದಿಂದ ಅಸಂಖ್ಯ ಸ್ತೋತ್ರಗ್ರಂಥಗಳನ್ನೂ ರಚನೆ ಮಾಡಿರುತ್ತಾರೆ. ಈ ಸ್ತೋತ್ರಗ್ರಂಥಗಳಂತೂ ಗಹನವಾದ ಉಪನಿಷತ್ ಸಿದ್ಧಾಂತಗಳನ್ನು ಅತ್ಯಂತ ಸರಳವಾಗಿ ನಿರೂಪಿಸುತ್ತವೆ. ಮನೋಹರವಾದ ಶೈಲಿ, ಸರಳ ಪದಗಳ ಬಳಕೆ, ಭಾವಕ್ಕೆ ಅನುಗುಣವಾದ ಛನ್ದಸ್ಸು, ಅನ್ಯಾದೃಶವಾದ ಕಾವ್ಯಶೈಲಿ, ಕರ್ಣಾನಂದಕರವಾದ ಪದಪುಂಜಗಳು, ಯಾರೇ ಆಗಲೀ ಯಾವ ತೊಡಕೂ ಇಲ್ಲದೆ ಸುಲಭವಾಗಿ ಪಠಿಸಬಹುದಾದ ವಾಕ್ಯರಚನೆ ಈ ಎಲ್ಲ ಗುಣವಿಶೇಷಗಳಿಂದ ತುಂಬಿರುವ ಆಚಾರ್ಯರ ಸ್ತೋತ್ರ ಸಾಹಿತ್ಯವು ಆ ಬಾಲಗೋಪಾಲರಾದಿಯಾಗಿ ಎಲ್ಲರ ಹೃದಯವನ್ನು ಸೂರೆಗೊಂಡಿರುತ್ತದೆ. **ಉದಾಹರಣೆಗೆ–** ಲೋಕಪ್ರಸಿದ್ಧವಾದ ಭಜಗೋವಿನ್ದಮ್ ಸ್ತೋತ್ರ, ಶಿವಾನನ್ದಲಹರೀ, ಸೌನ್ದರ್ಯಲಹರೀ ಮನೀಷಾಪಂಚಕ, ನಿರ್ವಾಣಷಟ್ಕ, ಲಕ್ಷ್ಮೀನೃಸಿಂಹಕರಾವಲಂಬನ ಸ್ತೋತ್ರ, ಕಾಲಭೈರವಾಷ್ಟಕ, ದಶಶ್ಲೋಕೀ ಹೀಗೆ ತತ್ತ್ವ ಮತ್ತು ಭಕ್ತಿಪ್ರಧಾನವಾದ, ಅಷ್ಟೇ ರಸಭರಿತವಾದ, ಯಾವ ಭೇದವೂ ಇಲ್ಲದೆ ಎಲ್ಲ ದೇವ ದೇವಿಯರುಗಳನ್ನು ಕುರಿತಾದ ಆಚಾರ್ಯರ ಸ್ತೋತ್ರಗಳು ಇಂದಿಗೂ ಜಗತ್ತಿನಾದ್ಯಂತ ಆಬಾಲವೃದ್ಧರಾದಿಯಾಗಿ ಎಲ್ಲರ ನಾಲಿಗೆಯ ಮೇಲೆ ನರ್ತನಮಾಡುತ್ತಿವೆ.

ಹೀಗೆ 1300 ವರ್ಷಗಳ ಹಿಂದೆ ಯಾವ ಪ್ರಚಾರ ಸೌಕರ್ಯವೂ ಇಲ್ಲದೇ ಇದ್ದಕಾಲದಲ್ಲಿ ಕಾಲ್ನಡಿಗೆಯಿಂದ ಮೂರು ಬಾರಿ ಸಮಗ್ರ ಭಾರತ ದೇಶವನ್ನು ಪರಿಕ್ರಮಿಸಿ, ವೇದೋಪದೇಶಗಳು ವಿದ್ವಾಂಸರಿಗೂ ಸಾಮಾನ್ಯರಿಗೂ ಮನಸ್ಸಿಗೆ ಬರುವಂತೆ ಭಾಷ್ಯಗ್ರಂಥಗಳನ್ನೂ ಪ್ರಕರಣಗ್ರಂಥಗಳನ್ನೂ ವಿಪುಲವಾದ ಸ್ತೋತ್ರ ಸಾಹಿತ್ಯವನ್ನೂ ರಚನೆ ಮಾಡಿ ತಾವು ಬೆಳಕಿಗೆ ತಂದ ತತ್ತ್ವಗಳು ಸದಾಕಾಲವೂ ಪ್ರಚಲಿತವಾಗಿ ಮುಂದುವರೆಯ ಬೇಕೆಂಬ ಇಚ್ಛೆಯಿಂದ ಭಾರತ ದೇಶದ ನಾಲ್ಕು ದಿಕ್ಕುಗಳಲ್ಲಿ ಮಠಾಮ್ನಾಯಗಳನ್ನು ಸ್ಥಾಪಿಸಿ, ಸಮರ್ಥರಾದ ಉತ್ತರಾಧಿ ಕಾರಿಗಳನ್ನು ನಿಯಮಿಸಿ ತಮ್ಮ ಅವತಾರದ ಎಲ್ಲ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸಿ 32 ನೆಯ ಕಿರಿಯ ವಯಸ್ಸಿನಲ್ಲೇ ಅಂತರ್ಧಾನರಾದ ಅನ್ವರ್ಥ ಜದ್ಗುರುಗಳೇ ಆಚಾರ್ಯ ಶ್ರೀಮಚ್ಛಙ್ಕರಭಗವತ್ಪೂಜ್ಯಪಾದರು.

# ಅದ್ವೈತಮಕರಂದ

–ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ

ಹಿಂದಿನ ಸಂಚಿಕೆಯಿಂದ. . . . .

**ನ ದೇಹೋ ನೇನ್ದ್ರಿಯಂ ಚಾಹಂ ನ ಪ್ರಾಣೋ ನ ಮನೋ ನ ಧೀಃ।**
**ಮಮತಾಪರಿರಬ್ಧತ್ವಾದಾಕ್ರೀಡತ್ವಾದಿದಂಧಿಯಃ॥8॥**

**ಅನುವಾದ :** 'ನನ್ನದು' ಎಂಬ ಬುದ್ಧಿಯಿಂದ ಆಲಿಂಗಿತವಾದ್ದರಿಂದ ಹಾಗೂ 'ಇದು' ಎನ್ನುವ ಬುದ್ಧಿಯ ಕ್ರೀಡಾ ಸ್ಥಾನವಾದ್ದರಿಂದ ದೇಹ, ಇಂದ್ರಿಯ, ಪ್ರಾಣ, ಮನಸ್ಸು ಮತ್ತು ಬುದ್ಧಿಗಳು ನಾನಲ್ಲ.

**ವಿವರಣೆ :** ದೇಹಾದಿಗಳು ಅನಾತ್ಮ ಎಂದು ತಿಳಿಸಲು ಎರಡು ಯುಕ್ತಿಗಳನ್ನು ಮುಂದಿಟ್ಟಿದ್ದಾರೆ. 'ನನ್ನದು' ಎಂಬ ಬುದ್ಧಿಯಿಂದ ಆಲಿಂಗಿತವಾದ್ದರಿಂದ ಎಂದರೆ 'ನನ್ನ ದೇಹ', 'ನನ್ನ ಇಂದ್ರಿಯ' ಇತ್ಯಾದಿ ನನ್ನದು ಎಂದು ತಿಳಿಯಲ್ಪಡುವುದರಿಂದ ಎಂದರ್ಥ. ಯಾವುದು 'ನನ್ನದು' ಎಂದು ತಿಳಿಯಲ್ಪಡುತ್ತದೆಯೋ ಅದು ನನ್ನ ಸ್ವರೂಪವಾಗ ಲಾರದು. 'ಇದು' ಎನ್ನುವ ಬುದ್ಧಿಯ ಕ್ರೀಡಾಸ್ಥಾನವಾದ್ದರಿಂದ ಎಂದರೆ 'ಇದು' ಎನ್ನುವ ಬುದ್ಧಿಯ ವಿಷಯವಾದ್ದರಿಂದ ಎಂದರ್ಥ. ಯಾವುದು 'ಇದು' ಎಂದು ತಿಳಿಯಲ್ಪಡುವುದೋ, ಅದು ನಾನಾಗಲು ಸಾಧ್ಯವಿಲ್ಲ.

**ಸಾಕ್ಷೀ ಸರ್ವಾನ್ವಿತಃ ಪ್ರೇಯಾನಹಂ ನಾಹಂ ಕದಾಚನ।**
**ಪರಿಣಾಮಪರಿಚ್ಛೇದಪರಿತಾಪೈರುಪಪ್ಲವಾತ್॥9॥**

ಅನುವಾದ: ಪರಿಣಾಮ, ಪರಿಚ್ಛೇದ ಹಾಗೂ ಪರಿತಾಪಗಳಿಂದ ಕೂಡಿರುವುದರಿಂದ ಅಹಂಕಾರವು ಎಂದಿಗೂ ಸಾಕ್ಷಿಯೂ, ಸರ್ವಗತನೂ, ಅತ್ಯಂತ ಪ್ರಿಯನೂ ಆದ ನಾನು ಅಲ್ಲ.

**ವಿವರಣೆ :** ಈ ಶ್ಲೋಕದಲ್ಲಿ ಮೊದಲನೆಯ 'ಅಹಂ' ಎಂಬುದು ಅಹಂಕಾರವೆಂದೂ, 'ನಾಹಂ' ಎಂಬಲ್ಲಿರುವ ಎರಡನೆಯ 'ಅಹಂ' ಎಂಬುದು ಆತ್ಮನೆಂದೂ ತಿಳಿದುಕೊಳ್ಳಬೇಕು. ಅಹಂಕಾರವು ಆತ್ಮನಿಗಿಂತ ವಿಲಕ್ಷಣವಾದ್ದರಿಂದ ಅದು ಅನಾತ್ಮ. ಆತ್ಮನು ಅಹಂಕಾರಕ್ಕೂ ಸಾಕ್ಷಿಯಾದ ಬದಲಾವಣೆಯಿಲ್ಲದ ಚೈತನ್ಯಸ್ವರೂಪನು. ಆದರೆ ಸಾಕ್ಷಿಗೆ ದೃಶ್ಯವಾದ ಅಹಂಕಾರವು ಜಡ ಹಾಗೂ ಬದಲಾವಣೆಯುಳ್ಳದ್ದು. ಆತ್ಮನು ಸರ್ವವ್ಯಾಪಿಯಾದ್ದರಿಂದ ಅಪರಿಮಿತನು. ಆದರೆ ಅಹಂಕಾರ ಪರಿಚ್ಛಿನ್ನವಾದದ್ದು. ಅತ್ಯಧಿಕ ಪ್ರಿಯನಾದ್ದರಿಂದ ಆನಂದಸ್ವರೂಪನು. ಆದರೆ ಅಹಂಕಾರವು ಪರಿತಾಪಗಳಿಂದ ಎಂದರೆ ದುಃಖಗಳಿಂದ ಕೂಡಿದೆ.

**ಸುಪ್ತೇಹಮಿ ನ ದೃಶ್ಯನ್ತೇ ದುಃಖದೋಷಪ್ರವೃತ್ತಯಃ।**
**ಅತಸ್ತಸ್ಯೈವ ಸಂಸಾರೋ ನ ಮೇ ಸಂಸರ್ತೃಸಾಕ್ಷಿಣಃ॥10॥**

**ಅನುವಾದ :** ಅಹಂಕಾರವು ಸುಪ್ತವಾದಾಗ ದುಃಖ, ದೋಷಗಳು ಮತ್ತು ಪ್ರವೃತ್ತಿಗಳು ಕಂಡುಬರುವುದಿಲ್ಲ. ಆದ್ದರಿಂದ ಸಂಸಾರವು ಅದಕ್ಕೇ ಸೇರಿದ್ದು; ಸಂಸಾರಿಯ ಸಾಕ್ಷಿಯಾದ ನನಗೆ ಸೇರಿದ್ದಲ್ಲ.

**ವಿವರಣೆ :** ಜಾಗ್ರದವಸ್ಥೆ ಮತ್ತು ಸ್ವಪ್ನಾವಸ್ಥೆಗಳಲ್ಲಿ ಅಹಂಕಾರವು ಇರುತ್ತದೆ. ಆಗ ಸಂಸಾರದ ಲಕ್ಷಣಗಳಾದ ದುಃಖ, ರಾಗಾದಿದೋಷಗಳು ಮತ್ತು ಅವುಗಳಿಂದುಂಟಾಗುವ ಪ್ರವೃತ್ತಿಗಳು ಕಂಡುಬರುತ್ತವೆ. ಸುಷುಪ್ತಿಯಲ್ಲಿ ಅಹಂಕಾರವು ಸುಪ್ತವಾಗಿರುತ್ತದೆ. ಆಗ ಆತ್ಮನು ಇದ್ದರೂ ದುಃಖಾದಿಗಳು ಕಾಣಸಿಗುವುದಿಲ್ಲ. ಆದ್ದರಿಂದ ಅಹಂಕಾರವಿದ್ದಲ್ಲಿಯೇ ಸಂಸಾರವಿರುವುದರಿಂದ ಸಂಸಾರವು ಅಹಂಕಾರಕ್ಕೇ ಸೇರಿದ್ದು, ಆತ್ಮನಿಗಲ್ಲ: ಅಹಂಕಾರವು ಸಂಸಾರಿ, ಅದಕ್ಕೆ ಸಾಕ್ಷಿಯಾದ ಆತ್ಮನು ಅಸಂಸಾರಿ ಎಂಬುದು ಸಿದ್ಧವಾಗುತ್ತದೆ.

**ಸುಪ್ತಃ ಸುಪ್ತಿಂ ನ ಜಾನಾತಿ ನಾಸುಪ್ತೇ ಸ್ವಪ್ನಜಾಗರೌ।**
**ಜಾಗ್ರತ್ಸ್ವಪ್ನಸುಷುಪ್ತೀನಾಂ ಸಾಕ್ಷ್ಯತೋಹಮತದ್ದಶಃ॥11॥**

**ಅನುವಾದ :** ಸುಪ್ತನು ಸುಷುಪ್ತಿಯನ್ನು ಅರಿಯುವುದಿಲ್ಲ. ಅಸುಪ್ತನಿಗೆ ಸ್ವಪ್ನವೂ ಜಾಗ್ರದವಸ್ಥೆಯೂ ಇಲ್ಲ. ನಾನು ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿಗಳಿಗೆ ಸಾಕ್ಷಿಯಾದ್ದರಿಂದ ಆ ಅವಸ್ಥೆಗಳು ನನಗೆ ಸೇರಿಲ್ಲ.

**ವಿವರಣೆ :** ಆತ್ಮನು ಅವಸ್ಥಾತ್ರಯರಹಿತನು ಎಂಬುದಕ್ಕೆ ಎರಡು ಯುಕ್ತಿಗಳನ್ನು ಕೊಡಲಾಗಿದೆ. ಅವಸ್ಥೆಗಳಿರುವ ಅಹಂಕಾರನು ಸುಷುಪ್ತಿ ಯಲ್ಲಿ ಸುಪ್ತನಾಗಿರುತ್ತಾನೆ. ಆದ್ದರಿಂದ ಅವನಿಂದ ಸುಷುಪ್ತಿಯನ್ನು ಅರಿಯಲು ಸಾಧ್ಯವಿಲ್ಲ. ಹಾಗಾಗಿ ಸುಷುಪ್ತಿಯನ್ನರಿಯುವ ಅಹಂಕಾರ ಕ್ಕಿಂತ ಭಿನ್ನನಾದ ಆತ್ಮನು ಸುಷುಪ್ತಿಯಲ್ಲೂ ಎಚ್ಚರವಾಗಿರುತ್ತಾನೆ. ಎಂದರೆ ಆತ್ಮನಿಗೆ ಸುಷುಪ್ತಿ ಇಲ್ಲ. ಸುಷುಪ್ತಿ ಇಲ್ಲದವನಿಗೆ ಸ್ವಪ್ನಜಾಗ್ರದವಸ್ಥೆಗಳೂ ಇರಲಾರವು. ಇದು ಒಂದನೆಯ ಯುಕ್ತಿ.

ದೃಶ್ಯದ ಧರ್ಮಗಳು ನೋಡುವವನಿಗೆ ಸೇರಿದ್ದಲ್ಲ. ಉದಾಹರಣೆಗೆ ದೃಶ್ಯವಾದ ಬಟ್ಟೆಯ ಬಣ್ಣವು ಅದರ ಸಾಕ್ಷಿಯಾದ ನನಗೆ ಸೇರಿಲ್ಲ. ಅದೇ ರೀತಿ ಆತ್ಮನು ಅವಸ್ಥಾತ್ರಯಗಳಿಗೆ ಸಾಕ್ಷಿಯಾದ್ದರಿಂದ ಸಾಕ್ಷಿಯ ವಿಷಯ ಗಳಾದ ಅವಸ್ಥಾತ್ರಯಗಳು ಆತ್ಮನ ಧರ್ಮಗಳಲ್ಲ ಎಂಬುದು ಎರಡನೆಯ ಯುಕ್ತಿ.

**ವಿಜ್ಞಾನವಿರತಿಃ ಸುಪ್ತಿಸ್ತಜ್ಜನ್ಮ ಸ್ವಪ್ನಜಾಗರೌ।**
**ತತ್ಸಾಕ್ಷಿಣಃ ಕಥಂ ಮೇ ಸ್ಯುರ್ನಿತ್ಯಜ್ಞಾನಸ್ಯ ತೇ ತ್ರಯಃ॥12॥**

**ಅನುವಾದ :** ವಿಜ್ಞಾನದ ವಿರಾಮವು ಸುಷುಪ್ತಿ. ಅದರ ಜನ್ಮವು ಸ್ವಪ್ನ ಮತ್ತು ಜಾಗ್ರದವಸ್ಥೆ. ಅವುಗಳ ಸಾಕ್ಷಿಯಾದ ನನಗೆ ಆ ಮೂರು (ಅವಸ್ಥೆಗಳು) ಇರುವುದು ಹೇಗೆ?

**ವಿವರಣೆ :** ಇದು ಹಿಂದಿನ ಶ್ಲೋಕದಲ್ಲಿ ಮುಂದಿಟ್ಟ ಎರಡನೆಯ ಯುಕ್ತಿಯ ವಿವರಣೆ. ವಿಜ್ಞಾನ ಎಂದರೆ ವಿಶೇಷಜ್ಞಾನ. ಎಂದರೆ ಜಾಗ್ರದವಸ್ಥೆಯಲ್ಲಿ ಇಂದ್ರಿಯಗಳಿಂದ ಉಂಟಾಗುವ ಸ್ಥೂಲಪ್ರಪಂಚದ ಜ್ಞಾನ ಹಾಗೂ ಸ್ವಪ್ನಾವಸ್ಥೆಯಲ್ಲಿ ಅಂತಃಕರಣದಿಂದ ಉಂಟಾಗುವ ವಾಸನಾಮಯಪ್ರಪಂಚದ ಜ್ಞಾನ. ಇಂದ್ರಿಯ ಹಾಗೂ ಅಂತಃಕರಣಗಳು ಉಪರತವಾದಾಗ ವಿಶೇಷಜ್ಞಾನವೂ ಇಲ್ಲದಾಗುತ್ತದೆ. ಅದು ಸುಷುಪ್ತಿ. ಜಾಗ್ರತ್ ಮತ್ತು ಸ್ವಪ್ನದಲ್ಲಿ ವಿಶೇಷಜ್ಞಾನ ಮತ್ತು ಸುಷುಪ್ತಿಯಲ್ಲಿ ಅವುಗಳ ಅಭಾವವೂ ತಿಳಿಯಲ್ಪಡುತ್ತದೆ ಎಂದರೆ ವಿಶೇಷಜ್ಞಾನ ಮತ್ತು ಅವುಗಳ ಕರಣಗಳಿಂದ ಭಿನ್ನವಾದ ಸಾಕ್ಷಿ ಇರಲೇಬೇಕು. ಆ ಸಾಕ್ಷಿಯೇ ಅವಸ್ಥಾತ್ರಯರಹಿತನಾದ ಆತ್ಮ.

**ಷಡ್ವಿಕಾರವತಾಂ ವೇತ್ತಾ ನಿರ್ವಿಕಾರೋಹಮನ್ಯಥಾ।**
**ತದ್ವಿಕಾರಾನುಸನ್ಧಾನಂ ಸರ್ವಥಾ ನಾವಕಲ್ಪತೇ॥13॥**

**ಅನುವಾದ :** ಷಡ್ವಿಕಾರವಂತರನ್ನು ತಿಳಿಯುವವನು ನಿರ್ವಿಕಾರನು. ಹಾಗಲ್ಲದಿದ್ದರೆ ಅವುಗಳ ವಿಕಾರಗಳನ್ನು ತಿಳಿಯುವುದು ಯಾವ ರೀತಿಯಿಂದಲೂ ಸಾಧ್ಯವಿಲ್ಲ.

**ವಿವರಣೆ :** ಷಡ್ವಿಕಾರಗಳು ಎಂದರೆ ಜನ್ಮ, ಸೀಮಿತವಾದ ಅಸ್ತಿತ್ವ, ವೃದ್ಧಿ, ವಿಪರಿಣಾಮ, ಅಪಕ್ಷಯ ಮತ್ತು ನಾಶ ಎನ್ನುವ ಆರು ವಿಕಾರಗಳು. ಮಡಕೆ ಮುಂತಾದ ಬಾಹ್ಯ ವಸ್ತುಗಳಿಗೆ ಹಾಗೂ ಶರೀರ, ಬುದ್ಧ್ಯಾದಿಗಳಿಗೆ ಈ ವಿಕಾರಗಳು ಇವೆ. ಹಾಗಾಗಿ ಅವು ಷಡ್ವಿಕಾರವಂತ ವಸ್ತುಗಳು. ಇವುಗಳನ್ನು ತಿಳಿಯುವ ಆತ್ಮನು ನಿರ್ವಿಕಾರನಾಗಿರಲೇ ಬೇಕು. ಹಾಗಲ್ಲದಿದ್ದರೆ, ಎಂದರೆ ಆತ್ಮನೂ ಸ್ವತಃ ವಿಕಾರವುಳ್ಳವನಾಗಿದ್ದರೆ, ಅವನ ವಿಕಾರಗಳನ್ನು ತಿಳಿಯುವವನು ಯಾರು? ತನ್ನ ವಿಕಾರಗಳನ್ನು ತಾನೇ ತಿಳಿಯಲು ಸಾಧ್ಯವಿಲ್ಲ. ತನ್ನ ವಿಕಾರಗಳನ್ನು ತಿಳಿಯುವ ಇನ್ನೊಬ್ಬ ಆತ್ಮನನ್ನು ಕಲ್ಪಿಸುವುದೂ ಸರಿಯಲ್ಲ. ಅಷ್ಟಲ್ಲದೆ, ವಿಕಾರವುಳ್ಳ ವಸ್ತು ಜಡವಾದ್ದರಿಂದ ಆತ್ಮನೂ ಜಡ ಎನ್ನುವ ಪ್ರಸಂಗ ಬರುತ್ತದೆ.

**ತೇನ ತೇನ ಹಿ ರೂಪೇಣ ಜಾಯತೇ ಲೀಯತೇ ಮುಹುಃ।**
**ವಿಕಾರಿ ವಸ್ತು ತಸ್ಯೈಷಾಮನುಸನ್ಧಾತೃತಾ ಕುತಃ॥ 14॥**

**ಅನುವಾದ :** ವಿಕಾರವುಳ್ಳ ವಸ್ತು ಆಯಾ (ವಿಕಾರದ) ರೂಪದಿಂದ ಪದೇ ಪದೇ ಹುಟ್ಟುತ್ತದೆ ಮತ್ತು ಲಯವಾಗುತ್ತದೆ. ಅದು ಇವುಗಳನ್ನು ತಿಳಿಯುವುದು ಹೇಗೆ?

**ವಿವರಣೆ :** ವಿಕಾರಿ ವಸ್ತುವು ತನ್ನ ವಿಕಾರಗಳನ್ನು ಸ್ವತಃ ತಿಳಿಯಲು ಸಾಧ್ಯವಿಲ್ಲ. ಯಾಕೆಂದರೆ ವಿಕಾರಿಯಾದ ವಸ್ತು ವಿಕಾರದ ಜೊತೆಗೆ ಹುಟ್ಟಿ ನಾಶವಾಗುತ್ತದೆ. ಉದಾಹರಣೆಗೆ 'ಹೊಸ ಮಡಕೆ' ಎನ್ನುವಾಗ ಹೊಸತನವು ಅದರ ವಿಕಾರ. ಅದರಲ್ಲಿ ಹೊಸತನವು ಹೋಗಿ ಹಳೆತನವು ಬಂದಾಗ 'ಹೊಸ ಮಡಕೆ' ಲಯವಾಗಿ 'ಹಳೆ ಮಡಕೆ' ಹುಟ್ಟಿಕೊಂಡಂತೆ. ಹೀಗಿರುವಾಗ ಮಡಕೆ ತನ್ನ ಹೊಸತನ ಮತ್ತು ಹಳೆತನ ಎನ್ನುವ ವಿಕಾರಗಳನ್ನು ತಿಳಿಯುವುದು ಹೇಗೆ ಸಾಧ್ಯ?

**ನ ಚ ಸ್ವಜನ್ಮ ನಾಶಂ ವಾ ದ್ರಷ್ಟುಮರ್ಹತಿ ಕಶ್ಚನ।**
**ತೌ ಹಿ ಪ್ರಾಗುತ್ತರಾಭಾವಚರಮಪ್ರಥಮಕ್ಷಣೌ॥15॥**

**ಅನುವಾದ:** ಯಾರೂ ತನ್ನದೇ ಜನ್ಮವನ್ನು ಅಥವಾ ನಾಶವನ್ನು ತಿಳಿಯಲು ಸಾಧ್ಯವಿಲ್ಲ. ಯಾಕೆಂದರೆ ಅವು ಪ್ರಾಗಭಾವದ ಕೊನೆಯ ಕ್ಷಣ ಹಾಗೂ ಉತ್ತರಾಭಾವದ ಮೊದಲ ಕ್ಷಣ.

**ವಿವರಣೆ:** ಒಂದು ವಸ್ತು ಉಂಟಾಗುವ ಕ್ಷಣದ ಹಿಂದಿನ ಕಾಲದಲ್ಲಿ ಇರುವಂತಹ ಆ ವಸ್ತುವಿನ ಅಭಾವ ಪ್ರಾಗಭಾವ. ಪ್ರಾಗಭಾವದ ಕೊನೆಯ ಕ್ಷಣವೇ ಆ ವಸ್ತುವಿನ ಜನ್ಮ ಅಥವಾ ಉತ್ಪತ್ತಿ. ಆ ಕ್ಷಣದಲ್ಲಿ ಆ ವಸ್ತುವಿನ ಅಭಾವವಿರುವುದರಿಂದ ಅದನ್ನು ತಿಳಿಯುವುದು ಅಸಾಧ್ಯ. ಹಾಗೆಯೇ ಒಂದು ವಸ್ತುವು ನಾಶವಾದಾಗ ಉಂಟಾಗುವಂತಹ ಆ ವಸ್ತುವಿನ ಅಭಾವ ಉತ್ತರಾಭಾವ. ಇದನ್ನೇ ಪ್ರಧ್ವಂಸಾಭಾವ ಅಥವಾ ಧ್ವಂಸ ಎನ್ನುವರು. ಧ್ವಂಸದ ಪ್ರಥಮಕ್ಷಣವೇ ಆ ವಸ್ತುವಿನ ನಾಶ. ಆ ಕ್ಷಣದಲ್ಲೂ ಆ ವಸ್ತು ಇಲ್ಲದಿರುವುದರಿಂದ ತನ್ನದೇ ನಾಶವನ್ನು ತಿಳಿಯುವುದು ಅಸಂಭವ.

**ನ ಪ್ರಕಾಶೇಹಮಿತ್ಯುಕ್ತಿರ್ಯತ್ಪ್ರಕಾಶನಿಬನ್ಧನಾ।**
**ಸ್ವಪ್ರಕಾಶಂ ತಮಾತ್ಮಾನಮಪ್ರಕಾಶಃ ಕಥಂ ಸ್ಪೃಶೇತ್॥16॥**

**ಅನುವಾದ:** ಯಾರ ಬೆಳಕಿನಿಂದಾಗಿ 'ನಾನು ಬೆಳಗುವುದಿಲ್ಲ' ಎಂಬ ಹೇಳಿಕೆ ಸಾಧ್ಯವಾಗುವುದೋ, ಆ ಸ್ವಪ್ರಕಾಶ ಆತ್ಮನನ್ನು ಅಪ್ರಕಾಶವು ಸ್ಪರ್ಶಿಸುವುದು ಹೇಗೆ?

**ವಿವರಣೆ:** 'ನಾನು ಬೆಳಗುವುದಿಲ್ಲ' ಎಂದರೆ 'ನಾನು ತಿಳಿಯುವುದಿಲ್ಲ' ಎಂದರ್ಥ. ಈ ಅನುಭವದಿಂದ ಅಜ್ಞಾನವು ತಿಳಿಯಲ್ಪಡುತ್ತದೆ. ಹಾಗಾದರೆ ಅದನ್ನು ತಿಳಿಯುವ ಆತ್ಮನು ಸ್ವತಃ ಚೈತನ್ಯವೇ ಆಗಿರಬೇಕು. ಅಂತಹ ಚೈತನ್ಯದಲ್ಲಿ ಜಡವಾದ ಅಜ್ಞಾನದ ಸಂಬಂಧವಿರಲು ಸಾಧ್ಯವಿಲ್ಲ. ಯಾಕೆಂದರೆ ಅಜ್ಞಾನ ಮತ್ತು ಚೈತನ್ಯ ಬೆಳಕು ಹಾಗೂ ಕತ್ತಲೆಯಂತೆ ಪರಸ್ಪರ ವಿರುದ್ಧಸ್ವಭಾವವುಳ್ಳವು. ಯಾವುದಾದರೂ ವಸ್ತು ಇರಬೇಕಾದರೆ ಅದು ಚೈತನ್ಯಸಂಬದ್ಧವಾಗಿಯೇ ಇರಬೇಕು. ಅಜ್ಞಾನಕ್ಕೆ ಚೈತನ್ಯದ ಸಂಬಂಧ ಸಾಧ್ಯವಿಲ್ಲದ್ದರಿಂದ ಅದು ವಾಸ್ತವವಾಗಲಾರದು ಎಂದು ತಿಳಿಯಬೇಕು.

**ತಥಾಪ್ಯಾಭಾತಿ ಕೋಪ್ಯೇಷ ವಿಚಾರಾಭಾವಜೀವನಃ।**
**ಅವಶ್ಯಾಯಶ್ಚಿದಾಕಾಶೇ ವಿಚಾರಾರ್ಕೋದಯಾವಧಿಃ॥17॥**

**ಅನುವಾದ:** ಹಾಗಿದ್ದರೂ ವಿಚಾರದ ಅಭಾವವನ್ನೇ ಅವಲಂಬಿಸಿ ಬದುಕುವ ಯಾವುದೋ ಈ (ಅಜ್ಞಾನ) ಚಿದಾಕಾಶದಲ್ಲಿ ಇಬ್ಬನಿಯಂತೆ ವಿಚಾರವೆಂಬ ಸೂರ್ಯನು ಉದಯಿಸುವವರೆಗೆ ಕಂಡುಬರುತ್ತದೆ.

**ವಿವರಣೆ:** ಅಜ್ಞಾನವು ವಾಸ್ತವವಲ್ಲದಿದ್ದರೂ ಕಂಡುಬರುವುದರಿಂದ ಅದು ಮಿಥ್ಯೆ. ಇದನ್ನೇ 'ಕೋಪಿ' (ಯಾವುದೋ) ಎಂಬ ಶಬ್ದವು ಸೂಚಿಸುತ್ತದೆ. ಹೇಗೆ ಸೂರ್ಯೋದಯದ ವರೆಗೆ ಆಕಾಶದಲ್ಲಿರುವ ಇಬ್ಬನಿಯು ಸೂರ್ಯನು ಉದಯಿಸಿದಾಗ ನಾಶವಾಗುತ್ತದೆಯೋ, ಹಾಗೆಯೇ ಮಿಥ್ಯೆಯಾದ ಅಜ್ಞಾನವು ವಿಚಾರವೆಂಬ ಸೂರ್ಯನು ಉದಯಿಸುವವರೆಗೆ ಮಾತ್ರ ಗೋಚರಿಸುತ್ತದೆ. ಎಂದರೆ ವೇದಾಂತ ವಿಚಾರದಿಂದ ಉಂಟಾದ ಜ್ಞಾನವು ಅಜ್ಞಾನವನ್ನು ನಾಶಪಡಿಸುತ್ತದೆ.

**ಆತ್ಮಾಜ್ಞಾನಮಹಾನಿದ್ರಾಜೃಮ್ಭಿತೇಸ್ಮಿಞ್ಜಗನ್ಮಯೇ।**
**ದೀರ್ಘಸ್ವಪ್ನೇ ಸ್ಫುರನ್ತ್ಯೇತೇ ಸ್ವರ್ಗಮೋಕ್ಷಾದಿವಿಭ್ರಮಾಃ॥18॥**

**ಅನುವಾದ:** ಆತ್ಮಾಜ್ಞಾನವೆಂಬ ಮಹಾನಿದ್ರೆಯಿಂದ ಉಂಟಾದ ಈ ಜಗತ್ತೆಂಬ ದೀರ್ಘಸ್ವಪ್ನದಲ್ಲಿ ಈ ಸ್ವರ್ಗ, ಮೋಕ್ಷ ಇತ್ಯಾದಿ ಭ್ರಮೆಗಳು ಕಾಣಿಸಿಕೊಳ್ಳುತ್ತವೆ.

**ವಿವರಣೆ:** ಜಗತ್ತು ಮಿಥ್ಯೆಯೆಂಬುದನ್ನು ತಿಳಿಸಲು ಕನಸು ಒಂದು ಅತ್ಯುತ್ತಮ ದೃಷ್ಟಾಂತ. ಕನಸಿನಲ್ಲಿ ಕಂಡುಬರುವ ಜಗತ್ತು ಕನಸಿನವೇಳೆ ಸತ್ಯವೆಂದೇ ತಿಳಿಯಲ್ಪಡುತ್ತದೆ. ಎಚ್ಚರವಾದಾಗ ಅದು ಮಿಥ್ಯೆಯೆನ್ನುವ

ಅರಿವಾಗುತ್ತದೆ. ಎಂದರೆ ನಿದ್ರೆಯಿರುವವರೆಗೆ ಸತ್ಯವೆಂದರಿಯಲ್ಪಟ್ಟು ನಿದ್ರೆಮುಗಿದಾಗ ಅದರ ಅಸತ್ಯತ್ವದ ಅರಿವಾಗುತ್ತದೆ. ಅದೇ ರೀತಿ ಅಜ್ಞಾನ ವಿರುವವರೆಗೆ ಈ ಜಗತ್ತು ಸತ್ಯವೆಂದು ತಿಳಿಯಲ್ಪಡುತ್ತದೆ. ಆತ್ಮಜ್ಞಾನ ವುಂಟಾದಾಗ ಅಜ್ಞಾನವು ಸರಿಯುತ್ತದೆ, ಆಗ 'ಈ ಜಗತ್ತು ಸತ್ಯವೆನ್ನುವ ಭ್ರಮೆ ಇಲ್ಲದಾಗುತ್ತದೆ.

ಈ ಜಗತ್ತು ಸತ್ಯವೆಂದು ತಿಳಿದಿರುವವರೆಗೆ ಮಾತ್ರ ಸ್ವರ್ಗ, ಅದಕ್ಕೆ ಸಾಧನವಾದ ಅಗ್ನಿಹೋತ್ರಾದಿ ಕರ್ಮಗಳನ್ನು ತಿಳಿಸುವಂತಹ ವೇದದ ಕರ್ಮಕಾಂಡವು ಪ್ರಮಾಣವಾಗಿರುತ್ತದೆ. ಅಜ್ಞಾನವಿರುವವರೆಗೆ ಮಾತ್ರ **"ನಾನುಸಂಸಾರಿ, ಮೋಕ್ಷವನ್ನು ಪಡೆಯಬೇಕು"** ಎಂದು ತಿಳಿದಿರುತ್ತೇವೆ. ಆಗಮಾತ್ರ ಮೋಕ್ಷಮಾರ್ಗವನ್ನು ತಿಳಿಸುವ ಜ್ಞಾನಕಾಂಡವೂ ಪ್ರಮಾಣವಾಗಿರುತ್ತದೆ. ಜಗತ್ತು ಮಿಥ್ಯೆ, ನಾನು ನಿತ್ಯಮುಕ್ತನಾದ ಬ್ರಹ್ಮನಾಗಿದ್ದೇನೆ ಎಂದು ತಿಳಿದ ಮೇಲೆ ಶಾಸ್ತ್ರವೂ ಅದರಲ್ಲಿ ತಿಳಿಸಿರುವ ಸಾಧನೆಗಳೂ ಮಿಥ್ಯೆಯೆಂದು ತಿಳಿದಂತಾಗುತ್ತವೆ.

ಇಲ್ಲಿ ಅಜ್ಞಾನವು ಅನಾದಿಯಾದ್ದರಿಂದ ಅದನ್ನು 'ಮಹಾನಿದ್ರೆ' ಎಂದಿದ್ದಾರೆ. ಜಗತ್ತು ಜ್ಞಾನವುಂಟಾಗುವವರೆಗೆ ಸತ್ಯವೆಂದು ತಿಳಿಯಲ್ಪಡುವುದರಿಂದ ಅದನ್ನು 'ದೀರ್ಘಸ್ವಪ್ನ' ಎಂದು ಕರೆದಿದುವರು.

**ಜಡಾಜಡವಿಭಾಗೋಯಮಜಡೇ ಮಯಿ ಕಲ್ಪಿತಃ।**
**ಭಿತ್ತಿಭಾಗೇ ಸಮೇ ಚಿತ್ರಚರಾಚರವಿಭಾಗವತ್॥19॥**

**ಅನುವಾದ:** ಸಮವಾದ ಗೋಡೆಯ ಭಾಗದಲ್ಲಿ ಬರೆದ ಚಿತ್ರದಲ್ಲಿ ಚರ, ಅಚರ ಎಂಬ ವಿಭಾಗವಿರುವಂತೆ ಈ ಜಡ, ಚೇತನ ಎಂಬ ವಿಭಾಗವು ಚೈತನ್ಯ ಸ್ವರೂಪನಾದ ನನ್ನಲ್ಲಿ ಕಲ್ಪಿತವಾಗಿದೆ.

**ವಿವರಣೆ:** ಗೋಡೆಯ ಪ್ರದೇಶವು ಸಮವಾಗಿ ಎಂದರೆ ಏಕರೂಪವಾಗಿ ಇದ್ದರೂ ಅದರಲ್ಲಿ ಬರೆದ ಚಿತ್ರದಲ್ಲಿ ಮರ ಇತ್ಯಾದಿ ನಿಶ್ಚಲ ಹಾಗೂ ಆನೆ ಇತ್ಯಾದಿ ಚಲಿಸುವ ಪದಾರ್ಥಗಳ ವಿಭಾಗವನ್ನು ನೋಡುತ್ತೇವೆ. ಅವುಗಳಲ್ಲಿ ಕೆಲವು ನಿಶ್ಚಲವಾಗಿದ್ದು, ಗೋಡೆಗೆ ಸಜಾತೀಯವಾಗಿದ್ದರೆ ಉಳಿದವು ಚಲಿಸುವವಾಗಿದ್ದು ಗೋಡೆಗೆ ವಿಜಾತೀಯವಾಗಿರುತ್ತವೆ. ಆ ಚಿತ್ರದಲ್ಲಿರುವ ವಸ್ತುಗಳ ಭೇದಗಳಿಂದಾಗಿ ಗೋಡೆಯಲ್ಲಿ ಯಾವ ಭೇದವೂ ಉಂಟಾಗುವುದಿಲ್ಲ.

ಈ ಜಗತ್ತು ಬ್ರಹ್ಮನಲ್ಲಿ ಕಲ್ಪಿಸಲ್ಪಟ್ಟಂತಹ ಚಿತ್ರದಂತೆ. ಇದರಲ್ಲಿ ಕಂಡು ಬರುವ ಭೋಕ್ತೃಗಳಾದ ಜೀವಗಳು ಚೇತನವಾಗಿದ್ದು ಬ್ರಹ್ಮನಿಗೆ ಸಜಾತೀಯವಾಗಿದ್ದರೆ, ಭೋಗ್ಯವಾದ ಜಡವರ್ಗ ಬ್ರಹ್ಮನಿಗೆ ವಿಜಾತೀಯವಾಗಿವೆ ಎಂದು ಹೇಳಬಹುದು. ಆದರೆ ಈ ಭೇದಗಳು ಮಿಥ್ಯೆಯಾಗಿದ್ದು ಅವುಗಳಿಂದಾಗಿ ಬ್ರಹ್ಮನಲ್ಲಿ ಯಾವುದೇ ಭೇದವಿರುವುದಿಲ್ಲ.

**ಚೇತ್ಯೋಪರಾಗರೂಪಾ ಮೇ ಸಾಕ್ಷಿತಾಪಿ ನ ತಾತ್ವಿಕೀ।**
**ಉಪಲಕ್ಷಣಮೇವೇಯಂ ನಿಸ್ತರಜ್ಗಚಿದಮ್ಬುಧೇಃ॥20॥**

**ಅನುವಾದ:** ಚೇತ್ಯದ ಸಂಬಂಧರೂಪವಾದ ಸಾಕ್ಷಿತ್ವವೂ ನನ್ನಲ್ಲಿ ಪಾರಮಾರ್ಥಿಕವಾಗಿ ಇಲ್ಲ. ಅದು ಅಲೆಗಳಿಲ್ಲದ ಚೈತನ್ಯಸಮುದ್ರವಾದ ನನ್ನ ಉಪಲಕ್ಷಣವಷ್ಟೆ.

**ವಿವರಣೆ:** ಪ್ರಪಂಚವು ಚೈತನ್ಯಕ್ಕೆ ವಿಷಯವಾದ್ದರಿಂದ ಅದು ಚೇತ್ಯವು. ಚೇತ್ಯವನ್ನು ಬೆಳಗುವ ಆತ್ಮಚೈತನ್ಯವನ್ನು ಸಾಕ್ಷಿ ಎನ್ನುವರು. ಚೇತ್ಯ ಮತ್ತು ಆತ್ಮದ ನಡುವೆ ಬೆಳಗುವವನು, ಬೆಳಗಲ್ಪಡುವದು ಎನ್ನುವ ಸಂಬಂಧ ವಿರುತ್ತದೆ. ಈ ಸಂಬಂಧವಿರುವುದರಿಂದಲೇ ಆತ್ಮನ ಸಾಕ್ಷಿತ್ವವು ಏರ್ಪಡುತ್ತದೆ. ಆದರೆ ಚೇತ್ಯವು ಮಿಥ್ಯೆಯಾದ್ದರಿಂದ ಅದರೊಂದಿಗಿರುವ ಸಂಬಂಧವೂ ಮಿಥ್ಯೆಯೇ. ಹಾಗಾಗಿ ಆತ್ಮನ ಸಾಕ್ಷಿತ್ವವೂ ಮಿಥ್ಯೆ. ಹಾಗಾಗಿ ಸಾಕ್ಷಿತ್ವವೆಂಬುದು ಆತ್ಮನ ಸ್ವರೂಪವಲ್ಲ.

ಯಾವುದು ಒಂದು ವಸ್ತುವನ್ನು ಅದರ ಸ್ವರೂಪಕ್ಕಿಂತ ಬಾಹ್ಯವಾಗಿದ್ದು ತಿಳಿಸುವುದೋ, ಅದನ್ನು ಉಪಲಕ್ಷಣ ಎನ್ನುವರು. ಉದಾಹರಣೆಗೆ ಹಲವಾರು ಮನೆಗಳ ಸಾಲಿನಲ್ಲಿ ದೇವದತ್ತನ ಮನೆ ಯಾವುದೆಂದು ತಿಳಿಸಲು ಆ ಮನೆಯ ಮೇಲೆ ಕೂತಿರುವ ಕಾಗೆಯನ್ನು ತೋರಿಸುವರು. ಅಲ್ಲಿ ಕಾಗೆ ಮನೆಯ ಸ್ವರೂಪವಲ್ಲ. ಮನೆಯನ್ನು ತಿಳಿಸಲು ಉಪಲಕ್ಷಣ ಅಷ್ಟೆ. ಅದೇ ರೀತಿ ಜಗತ್ತನ್ನು ಬೆಳಗುವ ಸಾಕ್ಷಿ ಎನ್ನುವುದೂ ಆತ್ಮನನ್ನು ತಿಳಿಸಲು ಉಪಲಕ್ಷಣ. ಪಾರಮಾರ್ಥಿಕವಾಗಿ ನೋಡಿದರೆ ಆತ್ಮನು ಬೆಳಗುವವನು, ಬೆಳಗಲ್ಪಡುವುದು ಎನ್ನುವ ಭೇದಗಳಿಲ್ಲದ ಅಖಂಡ ಚೈತನ್ಯನು.

**ಅಮೃತಾಬ್ಧೇರ್ನ ಮೇ ಜೀರ್ಣಿರ್ಮೃಷಾಡಿಣ್ಡೀರಜನ್ಮಭಿಃ।**
**ಸ್ಫಟಿಕಾದ್ರೇರ್ನ ಮೇ ರಾಗಃ ಸ್ವಾಪ್ನಸಂಧ್ಯಾಭ್ರವಿಭ್ರಮೈಃ॥21॥**

**ಅನುವಾದ:** ಅಮೃತದ ಸಾಗರದಂತಿರುವ ನನ್ನಲ್ಲಿ ಗುಳ್ಳೆಗಳಂತಿರುವ ಮಿಥ್ಯಾವಸ್ತುಗಳ ಜನ್ಮದಿಂದ ಯಾವ ಹಾನಿಯೂ ಉಂಟಾಗುವುದಿಲ್ಲ. ಸ್ಫಟಿಕದ ಪರ್ವತದಂತಿರುವ ನನಗೆ ಸಂಧ್ಯಾಕಾಲದ ಮೇಘಗಳಂತಿರುವ ಸ್ವಾಪ್ನವಸ್ತುಗಳು (ಸ್ವಪ್ನವಸ್ತುಗಳಂತೆ ಮಿಥ್ಯೆಯಾದ ಅಹಂಕಾರಾದಿಗಳು) ಉಂಟುಮಾಡುವ ವಿಭ್ರಮೆಗಳೊಂದಿಗೆ ಸಂಬಂಧವಿಲ್ಲ.

**ವಿವರಣೆ:** ಬ್ರಹ್ಮನ ಸ್ವರೂಪವು ಬದಲಾವಣೆಯಿಲ್ಲದ್ದು. ಅದರಲ್ಲಿ ಜನ್ಮವಾಗಲೀ ನಾಶವಾಗಲಿ ವೃದ್ಧಿಕ್ಷಯವಾಗಲಿ ಇಲ್ಲ. ಹಾಗಾಗಿ ಬ್ರಹ್ಮವು ಅಮೃತಸ್ವರೂಪ. ಅದನ್ನೇ ಸಾಗರಕ್ಕೆ ಹೋಲಿಸಿ 'ಅಮೃತಾಬ್ಧಿ' ಎಂದಿದ್ದಾರೆ. ಹೇಗೆ ಸಾಗರದ ನೀರನ್ನೇ ಆಶ್ರಯಿಸಿ ಉಂಟಾಗುವ ನೊರೆಗುಳ್ಳೆಗಳಿಂದಾಗಿ ಸಾಗರದ ನೀರಿನಲ್ಲಿ ಯಾವುದೇ ಹೆಚ್ಚು ಕಡಿಮೆ ಆಗುವುದಿಲ್ಲವೋ, ಅದೇ ರೀತಿ ಬ್ರಹ್ಮವನ್ನೇ ಆಶ್ರಯಿಸಿ ಉಂಟಾಗುವ ಆಕಾಶಾದಿ ಮಿಥ್ಯಾವಸ್ತುಗಳ ಜನ್ಮ ನಾಶಾದಿಗಳಿಂದ ಬ್ರಹ್ಮಸ್ವರೂಪನಾದ ನನ್ನಲ್ಲಿ ಯಾವುದೇ ಹಾನಿ ಉಂಟಾಗುವುದಿಲ್ಲ.

ಅಹಂಕಾರದ ಧರ್ಮಗಳಾದ ಕರ್ತೃತ್ವ, ಭೋಕ್ತೃತ್ವ, ದುಃಖಿತ್ವ ಇತ್ಯಾದಿಗಳು ಚೈತನ್ಯದಲ್ಲಿ ಕಲ್ಪಿತವಾಗಿದ್ದು ಆತ್ಮನು ಅವುಗಳಿಂದ ಸಂಬದ್ಧನಾಗುವುದಿಲ್ಲ ಎಂಬುದನ್ನು ಇನ್ನೊಂದು ದೃಷ್ಟಾಂತದ ಮೂಲಕ ತಿಳಿಸುತ್ತಾರೆ. ಸದಾ ಸ್ವಚ್ಛವಾಗಿರುವ ಸ್ಫಟಿಕದ ಪರ್ವತವು ಸಂಧ್ಯಾಕಾಲ ದಲ್ಲಿ ಮೋಡಗಳ ಸಂಬಂಧದಿಂದಾಗಿ ಕೆಂಪಾಗಿ ಕಂಡುಬರುತ್ತದೆ. ಅದೇ

ರೀತಿ ಶುದ್ಧವಾದ ಚೈತನ್ಯಸ್ವರೂಪನಾದ ನನಲ್ಲಿ ಸ್ವಪ್ನದೃಶ್ಯದಂತೆ ಮಿಥ್ಯೆಯಾದ ಅಹಂಕಾರಕ್ಕೆ ಸೇರಿದ ಕರ್ತೃತ್ವಾದಿಗಳು ಆರೋಪಿತವಾಗಿವೆ. ಅವುಗಳೊಂದಿಗೆ ನನಗೆ ಸಂಬಂಧವಿಲ್ಲ. ನಾನು ಅಸಂಗನೂ ಶುದ್ಧನೂ ಆದ ಚೈತನ್ಯಸ್ವರೂಪನೇ ಆಗಿರುವೆನು.

**ಸ್ವರೂಪಮೇವ ಮೇ ಸತ್ತ್ವಂ ನ ತು ಧರ್ಮೋ ನಭಸ್ಸವತ್।**
**ಮದನ್ಯಸ್ಯ ಸತೋಭಾವಾನ್ನ ಹಿ ಸಾ ಜಾತಿರಿಷ್ಯತೇ॥22॥**

ಅನುವಾದ: ಸತ್ವ ಎನ್ನುವುದು ನನ್ನ ಸ್ವರೂಪವೇ ಹೊರತು ಧರ್ಮವಲ್ಲ. ಹೇಗೆ ಆಕಾಶತ್ವವು ಜಾತಿಯಲ್ಲವೋ, ಹಾಗೆಯೇ ನನಗಿಂತ ಬೇರೆಯಾದ ಸತ್ತು ಇಲ್ಲದ್ದರಿಂದ ಸತ್ವವೂ ಜಾತಿಯಲ್ಲ.

**ವಿವರಣೆ:** ಸತ್ವ ಎಂದರೆ ಅಸ್ತಿತ್ವ. ಕೆಂಪು ಇತ್ಯಾದಿ ಬಣ್ಣಗಳಂತೆ ಅಸ್ತಿತ್ವವೂ ಒಂದು ವಸ್ತುವಿನ ಧರ್ಮ ಅಥವಾ ಗುಣ ಎನ್ನುವುದು ಸರಿಯಲ್ಲ. ಯಾಕೆಂದರೆ ಧರ್ಮವು ಬದಲಾಗಬಹುದು. ಆದರೆ ಸತ್ತು ಬದಲಾಗುವುದಿಲ್ಲ. ಆತ್ಮವು ಯಾವಾಗಲೂ ಸತ್ತೇ ಆಗಿರುತ್ತದೆ. ಅವೆರಡನ್ನು ಬೇರೆಯಾಗಿಸಲು ಸಾಧ್ಯವಿಲ್ಲ. ಹಾಗಾಗಿ ಸತ್ವವು ಆತ್ಮನ ಸ್ವರೂಪವೇ ಆಗಿದೆ.

ಕೆಲವರು ದಾರ್ಶನಿಕರು ಸತ್ವವನ್ನು ಜಾತಿಯೆಂದು ತಿಳಿದಿದ್ದಾರೆ. ಅನೇಕ ವ್ಯಕ್ತಿಗಳಲ್ಲಿ ಏಕರೂಪವಾಗಿರುವುದು ಜಾತಿ. ಉದಾಹರಣೆಗೆ ಅನೇಕ ಹಸುಗಳಲ್ಲಿ ಏಕರೂಪವಗಿರುವುದು 'ಗೋತ್ವ' ಎನ್ನುವ ಜಾತಿ. ಆದರೆ ಒಂದೇ ವಸ್ತುವಿನಲ್ಲಿ ಇರುವ ಧರ್ಮವನ್ನು ಜಾತಿ ಎನ್ನಲು ಸಾಧ್ಯವಿಲ್ಲ.ಉದಾಹರಣೆಗೆ ಆಕಾಶತ್ವ. ಅನೇಕ ಆಕಾಶಗಳಿಲ್ಲದ್ದರಿಂದ ಆಕಾಶತ್ವವು ಜಾತಿಯಲ್ಲ. ಅದೇ ರೀತಿ ಸತ್ತು ಆತ್ಮವೊಂದೇ ಆದ್ದರಿಂದ ಅದನ್ನು ಜಾತಿ ಎನ್ನುವುದು ಸರಿಯಲ್ಲ.

ಮುಂದುವರೆಯುವುದು......

ಜಾಹಿರಾತು

digital
AddSense

# 244/C, 2nd Main, 32nd Cross
7th Block, Jayanagar, Bangalore-560 082
Mob. : +91 98863 17070
Email : karthikmuniraju@digitaladdsense.com
karthikmuniraju@gmail.com

ಸೂಚನೆ : ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ – ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ್ಯ, ವಾಣಿಜ್ಯಕ್ಕೆ ಸಂಬಂಧಿಸಿದ್ದು) ಮಹಾಸಭೆಯು ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.

–ಸಂಪಾದಕ ಮಂಡಳಿ

# ಆ ಶ್ವೇತ ಭೂಮಿಯ ಮೇಲೆ ಇನ್ನೆಷ್ಟು ದಿನ ನೆತ್ತರ ಹೊಳೆ

ಕಾರ್ತಿಕ್ ಎಸ್ ಬಾಪಟ್ .




" ದಿ ಕಾಶ್ಮೀರ ಫೈಲ್ಸ್" ಎಂಬ ಚಲನಚಿತ್ರ ಕಳೆದ ಕೆಲವು ದಿನಗಳಿಂದ ದೇಶದೆಲ್ಲೆಡೆ ಇನ್ನಿಲ್ಲದಂತೆ ಸದ್ದು ಮಾಡುತ್ತಿದೆ, ಈ ಚಿತ್ರದ ವಸ್ತುವೇ ಅಂತಹದು, ಈ ಚಲನಚಿತ್ರ ದೇಶಾದ್ಯಂತ ಒಂದು ರೀತಿಯ ಸಂಚಲನವನ್ನು ಸೃಷ್ಟಿ ಮಾಡಿದೆ ಎಂದರೆ ತಪ್ಪಾಗಲಾರದು, ಹಾಗಾದರೆ ನೇರ ನೇರಾ ಈ ಚಲನಚಿತ್ರದ ಬಗ್ಗೆ ಗಮನಹರಿಸುವ ಬದಲು ಸ್ವಾತಂತ್ರಾನಂತರ ಹಾಗೂ ಸ್ವತಂತ್ರ ಪೂರ್ವದಲ್ಲಿ ನಡೆದ ಘಟನೆಗಳ ಅವಲೋಕನ ಅತ್ಯಗತ್ಯ.

ಅದು 1946 ಹಾಗು 1947 ಸ್ವತಂತ್ರ ಪೂರ್ವದ ಸಮಯ, ಆಗ ಬ್ರಿಟಿಷ್ ಸರ್ಕಾರ ಇನ್ನೇನು ಹಿಂದುಸ್ತಾನದಿಂದ ಕಾಲ್ಕಿತ್ತುವ ಎಲ್ಲ ತಯಾರಿಯನ್ನು ನಡೆಸಿತ್ತು. ಸ್ವತಂತ್ರ ಸಂಗ್ರಾಮದಲ್ಲಿ ಪಾಲ್ಗೊಂಡಿದ್ದ ನಾಯಕರು, ವಿವಿಧ ಸ್ತರಗಳಲ್ಲಿ ವಿವಿಧ ರಂಗದ ಗಣ್ಯರ ಹಾಗೂ ಬ್ರಿಟಿಷ್ ಸಾಮ್ರಾಜ್ಯ ಭಾರತ ಸ್ವಾಯತ್ತತೆ ಪಡೆದ ರಾಷ್ಟ್ರವಾಗಿ ಹೊರ ಹೊಮ್ಮಲು ತತ್‌ಕ್ಷಣಕ್ಕೆ ಕೈಗೊಳ್ಳಬೇಕಾದ ನಿರ್ಣಯಗಳ ಬಗ್ಗೆ ರೂಪುರೇಷೆಯನ್ನು ಸಿದ್ದಪಡಿಸುತ್ತಿತ್ತು. ಅದರಲ್ಲೂ ಸ್ವತಂತ್ರ ಒಕ್ಕೂಟವಾಗಿ ರಾಜ್ಯವಾಳುತ್ತಿದ್ದ ರಾಜರುಗಳ, ಸಾಮಂತರುಗಳನ್ನು ಹೇಗೆ ಸ್ವತಂತ್ರ ಭಾರತದಲ್ಲಿ ಸೇರಿಸಿಕೊಂಡು ಏಕೀಕೃತ ಹಿಂದುಸ್ತಾನವನ್ನು ಕಟ್ಟುವ ಸಿದ್ಧವಾಗುತ್ತಿತ್ತು. ಆದಾಗ್ಯೂ ಹಲವು ಒತ್ತಡಗಳಿಂದಾಗಿ ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ದೇಶಗಳಾಗಿ ಇಬ್ಭಾಗ ಮಾಡುವ ನಿರ್ಧಾರಕ್ಕೆ ಹೆಚ್ಚು ಕಡಿಮೆ ಬ್ರಿಟಿಷ್ ಸಾಮ್ರಾಜ್ಯ ಮುಂದಾಗಿತ್ತು. ಅದರಂತೆ ಕೆಲವು ರಾಜರುಗಳು ಇಚ್ಛೆಯಂತೆ ಭಾರತದೊಂದಿಗೋ ಅಥವಾ ಪಾಕಿಸ್ತಾನದೊಂದಿಗೆ ಸೇರಿಕೊಳ್ಳುವ ಪ್ರಕ್ರಿಯೆಗೆ ಹಸಿರು ನಿಶಾನೆ ತೋರಿಸಿದ್ದರು. ಆದರೆ ಕಾಶ್ಮೀರ ಪ್ರಾಂತ್ಯ ರಾಜ ಹರಿಸಿಂಗ್ ಎಂಬ ರಾಜನ ಆಳ್ವಿಕೆಗೆ ಒಳಪಟ್ಟಿತ್ತು, ಹಾಗು ರಾಜ ಹರಿಸಿಂಗ್ ತಾನು ಭಾರತ ಅಥವಾ ಪಾಕಿಸ್ತಾನ ಯಾರೊಂದಿಗೂ ವಿಲೀನಗೊಳ್ಳಲು ಒಪ್ಪಿಕೊಳ್ಳದೆ ಸ್ವತಂತ್ರವಾಗಿರಲು ನಿರ್ಧರಿಸುವುದಾಗಿ ಘೋಷಿಸುತ್ತಾನೆ. ಆದರೆ ಜಿನ್ನಾ ಹೆಬ್ಬಯಕೆ ಹೇಗಾದರೂ ಮಾಡಿ ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಸೇರಿಸಿಕೊಳ್ಳ ಬೇಕೆಂದಾಗಿತ್ತು, ಹಾಗಾಗಿ ಪಾಕಿಸ್ತಾನದ ಮಿಲಿಟರಿ ಪ್ರಚೋದನೆಯ ಮೇರೆಗೆ ಪಾಕಿಸ್ತಾನದ ಕೆಲವು ಬುಡಕಟ್ಟು ಜನಾಂಗದೊಂದಿಗೆ ಕೈ ಜೋಡಿಸಿ ಕಾಶ್ಮೀರದ ಮೇಲೆ ಯುದ್ಧಕ್ಕೆ ಪ್ರಚೋದನೆ ನೀಡಿದನು, ಮೊದಲಿಗೆ ಪಾಕಿಸ್ತಾನ ಕಾಶ್ಮೀರದೊಂದಿಗೆ ಮಾಡಿಕೊಂಡಿದ್ದ ಸ್ಟಾಂಡ್ ಸ್ಟಿಲ್ ಅಗ್ರಿಮೆಂಟ್‌ಅನ್ನು ಮುರಿದು ಹಾಕಿ ಪಾಕಿಸ್ತಾನಕ್ಕೆ ಸರಬರಾಜಾಗುತ್ತಿದ್ದ ಪೆಟ್ರೋಲ್ ಹಾಗು ಇತರೆ ವಸ್ತುಗಳ ಸರಬರಾಜನ್ನು ನಿಲ್ಲಿಸಿ ಕಾಶ್ಮೀರದ ರಾಜನ ಕೈ ಕಟ್ಟಿ ಹಾಕಿತು, ನಂತರ ಸಿಲಕೋಟ್ಮತ್ತು ಜಮ್ಮುವಿನ ನಡುವೆ ಸಮರ್ಪಕ ಸಾಧಿಸುತ್ತಿದ್ದ ರೈಲ್ವೆ ಸಂಪರ್ಕವನ್ನು ಕಡಿತಗೊಳಿಸಿತು, ಹೀಗೆ ಪಾಕಿಸ್ತಾನ ಕಾಶ್ಮೀರ ಮತ್ತು ರಾಜ ಹರಿಸಿಂಗ್‌ನನ್ನು ಕಟ್ಟಿ ಹಾಕುತ್ತ ಹೋಯಿತು, ಆಗ ಹರಿಸಿಂಗ್ ಭಾರತವು ಮಿಲಿಟರಿ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತಾನೆ, ಆ ಸಂಧರ್ಭದಲ್ಲಿ ಪಟೇಲರಿಂದಾದಿಯಾಗಿ ನೆಹರುವರೆಗೆ ಎಲ್ಲರು ತತಕ್ಷಣವೇ ಸೈನ್ಯವನ್ನು ಕಾಶ್ಮೀರದ ರಕ್ಷಣೆಗೆ ಕಲಿಸಿ ಕೊಡಬೇಕೆಂದಾಗಿತ್ತು. ಆದರೆ ಭಾರತ ಸ್ವತಂತ್ರಗೊಂಡಿತ್ತೇ ವಿನಾ ಸಂಪೂರ್ಣ ಸ್ವಾಯತ್ತತೆ ಸಿಕ್ಕಿರಲಿಲ್ಲ ಅದರ ಪರಿಣಾಮವಾಗಿ ಮೌಂಟ್ ಬ್ಯಾಟನ್ ಇನ್ನು ಭಾರತದ ಗವರ್ನರ್ ಜನರಲ್ ಆಗಿ ಕಾರ್ಯ ನಿರ್ವಹಿಸುತ್ತಿದನು, ಆದರೆ ಪಾಕಿಸ್ತಾನ ಜಿನ್ನಾರನ್ನು ಪಾಕಿಸ್ತಾನದ ಗವರ್ನರ್ ಜನರಲ್ ಆಗಿ ಆಯ್ಕೆ ಮಾಡಿಕೊಂಡಿತ್ತು. ಅದರ ಪರಿಣಾಮವಾಗಿ ಮೌಂಟ್ ಬ್ಯಾಟನ್ ವಿವೇಚನೆಯಲ್ಲೇ/ ಅಣತಿಯಂತೆ ಪ್ರತಿ ಹೆಜ್ಜೆ ಇಡಬೇಕಿತ್ತು ಹಾಗು ಮೌಂಟ್‌ಬ್ಯಾಟನ್ ಸೈನ್ಯವನ್ನು ಕಾಶ್ಮೀರಕ್ಕೆ ಕಲಿಸಲು ಒಪ್ಪಲಿಲ್ಲ, ಮೌಂಟ್ ಬ್ಯಾಟನ್ ಪ್ರಕಾರ ಹರಿಸಿಂಗ್ ವಿಲೀನಕ್ಕೆ ಸಹಿ ಹಾಕುವವರೆಗೂ ಸೇನೆಯನ್ನು ಕಳುಹಿಸಿ ಕೊಡುವುದು ಸಮಂಜಸವಲ್ಲ ಎಂಬುದಾಗಿತ್ತು, ಆದರೆ ಅಲ್ಲಿ ಕಾಲ ಮೀರುತ್ತಿತ್ತು. ಪಾಕ್ ಪ್ರಚೋದಿತ ಆಕ್ರಮಣಕಾರರು ಕಾಶ್ಮೀರದ ಆಯಕಟ್ಟಿನಲ್ಲಿ ಬಂದು ಕುಳಿತಿದ್ದರು, ಕೊನೆಗೆ ಮೌಂಟ್‌ಬ್ಯಾಟನ್‌ನ ಅಣತಿಯಂತೆ ವಿ ಪಿ ಮೆನನ್ ರಾಜ ಹರಿಸಿಂಗ್‌ಗೆ ಮನದಟ್ಟಾಗುವಂತೆ ಸವಿವರವಾಗಿ ಪರಿಸ್ಥಿತಿಯನ್ನು ತಿಳಿಸಿದಲ್ಲದೆ ಕಾಶ್ಮೀರದಿಂದ ರಾಜ ಹರಿಸಿಂಗ್ ನಿಗೆ ಜಮ್ಮುವಿಗೆ ಸ್ಥಳಾಂತರಗೊಳ್ಳಲು ಸಲಹೆ ಕೊಡುತ್ತಾರೆ, ರಾಜ ಹರಿಸಿಂಗ್ ಭಾರತದೊಂದಿಗೆ ಕಾಶ್ಮೀರವನ್ನು ವಿಲೀನ ಗೊಳಿಸಲು ಕರಾರು ಪಾತ್ರಕ್ಕೆ ಸಹಿ ಮಾಡುತ್ತಾನೆ, ಆದರೆ

ದುರದೃಷ್ಟವಶಾತ್ ಅಷ್ಟು ಹೊತ್ತಿಗೆ ಪಾಕ್ ಪ್ರಚೋದಿತ ಬುಡಕಟ್ಟು ಬಂಡುಕೋರರು ಆಯಾ ಸ್ಥಳದಲ್ಲಿ ಸ್ಥಪತಿಯರಾಗಿರುತ್ತಾರೆ, ಜಿನ್ನಾ, ರಾಜ ಹರಿಸಿಂಗ್‌ನ ನಡೆಯಿಂದಾಗಿ ವಿಚಲಿತನಾಗಿ ಬ್ರಿಟಿಷರಿಗೆ ಸೈನ್ಯ ಸಹಾಯ ಕೇಳುತ್ತಾನೆ ಆದರೆ ಬ್ರಿಟಿಷ್ ಅಧಿಕಾರಿಗಳು ಸಾರಸಗಟಾಗಿ ನಿರಾಕರಿಸುತ್ತಾರೆ, ಇದೆ ಸಂದರ್ಭದಲ್ಲಿ ಮೌಂಟ್ ಬ್ಯಾಟನ್ ಸೇನೆಯನ್ನು ಹಿಂಪಡೆಯುವಂತೆ ಜಿನ್ನಾಗೆ ಕೇಳಿಕೊಳ್ಳುತ್ತಾನೆ, ಅಷ್ಟರಲ್ಲಿ ಇಲ್ಲಿ ನೆಹರು ಆಕಾಶವಾಣಿಯಲ್ಲಿ ತಮ್ಮ ಭಾಷಣದಲ್ಲಿ UNO ಮಧ್ಯಸ್ಥಿಕೆಯಲ್ಲಿ ಕಾಶ್ಮೀರದಲ್ಲಿ ಜನ ಮತ ಸಂಗ್ರಹಿಸುತ್ತೇವೆ ಎಂಬ ಘನಘೋರ ಹೇಳಿಕೆಯನ್ನು ಕೊಟ್ಟುಬಿಡುತ್ತಾರೆ, ನಂತರ ನಡೆದದ್ದು ಎಲ್ಲರಿಗೂ ತಿಳಿದೇ ಇದೆ, ಪಾಕಿಸ್ತಾನ ಕಾಶ್ಮೀರದಿಂದ ಕಾಲ್ಕಿತ್ತರೂ ಕೆಲವು ಪ್ರದೇಶದಿಂದ ಹಿಂದೆ ಸರಿಯಲೇ ಇಲ್ಲ. ಇಂದಿಗೂ ಅದು ಪಾಕ್ ಆಕ್ರಮಿತ ಕಾಶ್ಮೀರವೆಂದು ನಾವು ಕರೆಯುತ್ತೇವೆ, ಅದು ಸರಿ ಕೆಲವೊಮ್ಮೆ ರಾಜ್ಯಭಾರ ಮಾಡುವಾಗ ಇಂಥ ತಪ್ಪುಗಳು ಆಗುತ್ತವೆ. ಆದರೆ ತಪ್ಪುಗಳು ಸಹಜ ಆದರೆ ಪ್ರಮಾದಗಳಾಗಬಾರದಲ್ಲವೇ? ಆರ್ಟಿಕಲ್ 370 ಮತ್ತು 35 ಎ ಒಡಂಬಡಿಕೆಗೆ ಸಹಿ ಮಾಡಿದ್ದೇಕೆ ? ಮತ್ತು ಅದು ತಾತ್ಕಾಲಿಕವೆಂದು ಪರಿಗಣಿಸಲ್ಪಟ್ಟರೂ ಏಳು ದಶಕಗಳ ವರೆಗೆ ಹಾಗೆ ಉಳಿಸಿಕೊಂಡಿದ್ದೇಕೆ ? ಎಂದು ನೋಡ ಹೊರಟರೆ ಕಾಣಸಿಗುವುದು ಶೇಕ್ ಅಬ್ದುಲ್ಲಾ ಎಂಬ ಕಾಶ್ಮೀರದ ರಾಜಕಾರಣಿ, ಈತನಿಗೂ ಸ್ವತಂತ್ರ ಭಾರತದ ಪ್ರಧಾನಿಗಳಾದ ನೆಹರು ಅವರಿಗೂ ಅಪಾರ ಸ್ನೇಹವಿತ್ತು , ಸ್ನೇಹಿತನ ಸ್ನೇಹಕ್ಕೆ ಕಟ್ಟು ಬಿದ್ದು ಒಂದಿಡೀ ಕಾಶ್ಮೀರದ ಜನತೆಯನ್ನು ಮಹಾಕೂಪಕ್ಕೆ ತಳ್ಳಿದರೆ ಎಂದು ಪ್ರಶ್ನೆ ಏಳುವುದು ಸಹಜ ಅದಕ್ಕೆ ಪೂರಕವಾಗಿ ನೆಹರು 1946 ರಲ್ಲಿ ಶೇಕ್ ಅಬ್ದುಲ್ಲಾ ನೇತೃತ್ವದಲ್ಲಿ ನಡೆದ ಕ್ವಿಟ್ ಕಾಶ್ಮೀರ ಮೂವ್ಮೆಂಟ್ ಅನ್ನು ನೋಡಿಯೂ ನೋಡದೆ ಸುಮ್ಮನೆ ಕುಳಿತಿದ್ದರು ಅಷ್ಟೇ ಅಲ್ಲ ಒಂದು ಹೆಜ್ಜೆ ಮುಂದೆ ಹೋಗಿ ನೆಹರು ಶೇಕ್ ಅಬ್ದುಲ್ಲಾ is my blood brother a man above suspicion ಎಂಬ ಹೇಳಿಕೆ ಕೊಟ್ಟು ಭಾರತವನ್ನು ಒಡೆಯುವ ಪ್ರಯತ್ನಕ್ಕೆ ಇನ್ನಷ್ಟು ಇಂಪು ಕೊಟ್ಟಿದ್ದರು , ಇದೆಲ್ಲದರ ಫಲವಾಗಿ ಶೇಕ್ ಅಬ್ದುಲ್ಲಾ ಹೆಡ್ ಆಫ್ ಎಮರ್ಜೆನ್ಸಿ ಅಡ್ಮಿನಿಸ್ಟ್ರೇಟರ್ ನೇಮಕವಾಗಿ ಮುಂದೆ ಕಾಶ್ಮೀರದ ಮುಖ್ಯಮಂತ್ರಿ ಯಾಗಿ ನೆಹರು ಸರ್ಕಾರವನ್ನು ತನ್ನ ಅಣತಿಯಂತೆ ಆರ್ಟಿಕಲ್ 370 ಮತ್ತು 35 ಎ ಒಡಂಬಡಿಕೆಗೆ ಒಪ್ಪುವಂತೆ ಮಾಡಿತು, ಹೀಗೆ ಕಾಶ್ಮೀರಿ ಮೂಲನಿವಾಸಿಗಳ, ಕಾಶ್ಮೀರಿ ಪಂಡಿತರ ನರಮೇಧದ ಮುನ್ನುಡಿ ಅಂದಿನಿಂದಲೇ ಬರೆಯಲಾಯಿತು, ಇದು 1990 ರಲ್ಲಿ ಅತ್ಯಂತ ತೀವ್ರವಾಗಿ ಪಂಡಿತರ ಮಹಾವಲಸೆಗೆ ಕಾರಣವಾಯಿತು. ಇದೇ ಅಂಶವನ್ನು ದಿ ಕಾಶ್ಮೀರ ಫೈಲ್ಸ್ ಚಲನ ಚಿತ್ರ ಎಳೆ ಎಳೆಯಾಗಿ ಕಟ್ಟಿ ಕೊಟ್ಟಿದೆ.

ಸಾಮಾನ್ಯವಾಗಿ ಭಾರತೀಯರಿಗೆ ಪುರಾಣ ಪ್ರಜ್ಞೆ ಇದ್ದಷ್ಟು ಇತಿಹಾಸ ಪ್ರಜ್ಞೆ ಇಲ್ಲ ಎಂಬ ಆರೋಪ ಇದೆ. ಆದರೆ ಸರಿಯಾದ ಇತಿಹಾಸವನ್ನು ಹೇಳುವ, ಬರೆಯುವ ದಾಷ್ಟ್ಯ ಇದ್ದರೂ ಅದನ್ನು ಯಶಸ್ವಿಯಾಗಿ, ಮುಕ್ತವಾಗಿ ಭಾರತೀಯರಿಗೆ ತಲುಪದಿರುವಂತೆ ಮಾಡಿದ ಕೈಗಳಾವುವು ಎಂಬುದು ಬಿಡಿಸಿ ಹೇಳುವ ಅವಶ್ಯಕತೆಯಿಲ್ಲ ಬಿಡಿ. ಆದರೆ ದಿ ಕಾಶ್ಮೀರ ಫೈಲ್ಸ್ ಚಲನಚಿತ್ರದ ಮೂಲಕ ಈ ಕೆಲಸವಾಗಿದೆ. ಕೆಲವು ನಿರ್ಬಂಧಗಳ ಹಿನ್ನಲೆಯಲ್ಲಿ ದಿ ಕಾಶ್ಮೀರ ಫೈಲ್ಸ್ ಚಲನಚಿತ್ರ ಕೂಡ ಕೆಲವು ವಿಷಯಗಳನ್ನು ಕೇವಲ ಒಂದು glimpse ಅಥವಾ birds eye view ಎಂಬಂತೆ ತೋರಿಸಿದ್ದರೂ ಇತಿಹಾಸದ ಗರ್ಭದಲ್ಲಿ ಹುದುಗಿರುವ ಕಪ್ಪು ಪುಟಗಳ ಅನಾವರಣಕ್ಕೆ ಮುನ್ನುಡಿ ಬರೆದಿದೆ ಎಂದರೆ ತಪ್ಪಾಗಲಾರದು ಹಾಗು ಇದರ ಕೀರ್ತಿ ವಿವೇಕ್ ಅಗ್ನಿಹೋತ್ರಿ ತಂಡಕ್ಕೆ ಸಂಪೂರ್ಣವಾಗಿ ಸಲ್ಲುತ್ತದೆ.

ಒಂದು ಸಮಾಜ ಮೂಲಭೂತವಾದಿ ಭಯೋತ್ಪಾದಕರ ವಿರುದ್ಧ ಹೋರಾಡಲು ಸಿದ್ಧವಾಗದಿದ್ದರೆ ಏನಾಗುತ್ತದೆ ಮತ್ತು ರಾಜಕಾರಣಿಗಳ ಒಂದು ಕೋಮಿನ ಅತಿಯಾದ ಓಲೈಕೆಯಿಂದಾಗಬಹುದಾದ ಪ್ರಮಾದದ ಕಥೆಯಾಗಿ ದಿ ಕಾಶ್ಮೀರ ಫೈಲ್ಸ್ ನಿಮ್ಮ ಮುಂದೆ ಅನಾವರಣಗೊಳ್ಳುತ್ತ ಹೋಗುತ್ತದೆ. ಅಷ್ಟೇ ಅಲ್ಲ ಒಂದು ಜವಾಬ್ದಾರಿಯುತ ಹಾಗೂ ಕ್ರಿಯಾಶೀಲ ಆಡಳಿತ ವ್ಯವಸ್ಥೆ ಇಲ್ಲದಿದ್ದಲ್ಲಿ ಏನೇನಾದೀತು ಎಂಬುದೇ ದಿ ಕಾಶ್ಮೀರ ಫೈಲ್ಸ್ ಹೂರಣ .

ಒಂದಂತೂ ಸತ್ಯ. ಇತರೆ ಚಲನಚಿತ್ರಗಳಾಗಿದ್ದಲ್ಲಿ ನೋಡಿ ಆನಂದಿಸಿ ಎನ್ನಬಹುದಾಗಿತ್ತು. ಆದರೆ ದಿ ಕಾಶ್ಮೀರ ಫೈಲ್ಸ್ ಚಲನಚಿತ್ರ ನೋಡಿ ಹೊರಬರುವಾಗ ತೇವಗೊಳ್ಳದ, ರೂಪಗೊಳ್ಳದ ಕಣ್ಣುಗಳನ್ನಂತೂ ನಾ ಕಾಣಲಿಲ್ಲ, ಹಾಗೆಂದು ನೀವು ಈ ಚಲನಚಿತ್ರವನ್ನು ನೋಡದೆ ಇದ್ದಲ್ಲಿ ಅಂದು ನಡೆದ ನರಮೇಧದ ಪ್ರಭಾವದ ಅರಿವು ನಿಮಗೆ ಆಗಲಿರಕ್ಕಿಲ್ಲ. ಅಷ್ಟೇ ಅಲ್ಲ ಇದೆಲ್ಲದರ ಮಧ್ಯೆ ನನ್ನನ್ನು ತೀವ್ರವಾಗಿ ಕಾಡಿದ್ದು ಇಂತಹ ಸನ್ನಿವೇಶದಲ್ಲೂ ಮೆರೆದ ರಾಜಕೀಯ ಸ್ವಾರ್ಥ ಎಂದು ಹೀಗೆ ಅತ್ಯಂತ ಮಾನವಿಯ ಕ್ರೌರ್ಯವು ಸಮುದಾಯದ ಮೇಲೆ ನಡೆದಾಗ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ, ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗ ಮಾಧ್ಯಮಗಳ ಹಾಗೂ ಧೀಮಂತರ ಹೊಣೆಗಾರಿಕೆಯ ಚಿಂತನೆಯೂ ನಡೆಯ ಬೇಕಿದ್ದವು. ಈ ರೀತಿಯ ದೌರ್ಜನ್ಯಗಳು ಭವಿಷ್ಯದಲ್ಲಿ ಮರುಕಳಿಸ ದಂತೆ ಕಾರ್ಯಯೋಜನೆಯ ಚಿಂತನೆಯೂ ನಡೆಯಬೇಕು.

ಬಹುಶಃ ಇತಿಹಾಸ ಎಂದರೆ ಮೂಗು ಮುರಿಯುವ ಕೆಲವರಿಗಾದರೂ. ಇತಿಹಾಸದ ಅರಿವು ನಮಗೇಕಿರಬೇಕೆಂದು ಅರಿವಾಗಿರಬಹುದು ಎಂದು ಅಂದುಕೊಂಡಿದ್ದೇನೆ , ಅಂದ ಹಾಗೆ ದಿ ಕಾಶ್ಮೀರ ಫೈಲ್ಸ್ ಚಲನಚಿತ್ರವನ್ನು ತಾವುಗಳು ನೋಡಿಲ್ಲವಾದರೆ ಒಮ್ಮೆ ನೋಡಿ, ಯಾವ ರಾಜಕೀಯದ ಗೊಡವೆಗೆ ಹೋಗದೆ ಅಂದು ಈ ಭೀಕರ ಕುಕೃತ್ಯಕ್ಕೆ ತುತ್ತಾದ ಕಾಶ್ಮೀರಿ ಪಂಡಿತರ ಪುನರ್ವಸತಿಗೆ ನಾವುಗಳು ಹೇಗೆ ಕೈಜೋಡಿಸಬೇಕೆಂದು ಕೇಳಿ, ನೀವೇನು ಮಾಡಿದಿರೆಂದು ನಮ್ಮನಾಳುವ ಸರ್ಕಾರಕ್ಕೂ ಒಕ್ಕೊರಲಿನಿಂದ ನ್ಯಾಯ ಸಿಗುವವರೆಗೂ ಕೇಳುತ್ತಲೇ ಇರಿ. ಏಕೆಂದರೆ ಇದು ಚಂದಮಾಮನ ಕಥೆಯಂತೆ ಕೇಳಿ ಹಾಗೂ ನೋಡಿ ಮರೆಯುವ ವಿಷಯವಲ್ಲ.

ಜಾಹಿರಾತು

# ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ

# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,
ಬ್ಯಾಂಕ್ ಕಾಲೋನಿ, ಬೆಂಗಳೂರು–560 050.

## ಸ್ಥಳದ ಬಾಡಿಗೆ ಇರುವುದಿಲ್ಲ

ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,
ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,
"ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು
ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.
ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.

**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**

**ದೂರವಾಣಿ : 080–26793054 ಮೊಬೈಲ್ 8277433666**

ಜಾಹಿರಾತು

# ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ

## Sri Srinivasa Nilaya Dharmika Sabha Mandira

ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ
ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.

**ಸ್ಥಳದ ಬಾಡಿಗೆ ಇರುವುದಿಲ್ಲ.**

ದಕ್ಷಿಣ ಮತ್ತು ಉತ್ತರ ಭಾರತದ
ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು
ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ
**ದೂರವಾಣಿ : 2672 2267, 98866 55755**

# ಮಹಾಸಭೆಗೆ ಉದಾರ ದೇಣಿಗೆ ನೀಡಿದ ದಾನಿಗಳು



**ಶ್ರೀ ಟಿ. ಶಾಮ್ ಭಟ್,** ಐಎಎಸ್ (ನಿವೃತ್ತ)

ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷರು

ಇವರು 5,00.000ರೂ.ಗಳನ್ನು ಮಹಾಸಭೆ ದೇಣಿಗೆ ನೀಡಿರುತ್ತಾರೆ

**ಶ್ರೀ ಮನಮೋಹನ್ ಪಿ.ನ್,** ಹಿರಿಯ ವಕೀಲರು,

ಇವರು 1,00.000ರೂ.ಗಳನ್ನು ಮಹಾಸಭೆ ದೇಣಿಗೆ ನೀಡಿದ್ದಾರೆ



ಶ್ರೀಮತಿ ಸವಿತಾ ಹೆಚ್.ಎನ್.
ಎಲ್.ಐ.ಸಿ. ನಿವೃತ್ತ ಅಧಿಕಾರಿ
ಬೆಂಗಳೂರು
ಇವರಿಂದ 50,000ರೂ ದೇಣಿಗೆ



ಶ್ರೀಮತಿ ಗಾಯತ್ರಿ ಬಾಲು
ಹಿರಿಯ ನ್ಯಾಯವಾದಿಗಳು
ಬೆಂಗಳೂರು
ಇವರಿಂದ 50,000ರೂ ದೇಣಿಗೆ



ಶ್ರೀ ಬಿ.ಎಸ್. ರಾಘವೇಂದ್ರ ಭಟ್
ಮಹಾಸಭೆಯ
ಸಂಘಟನಾ ಕಾರ್ಯದರ್ಶಿಗಳು
ಇವರಿಂದ 51,000ರೂ ದೇಣಿಗೆ



ಶ್ರೀಮತಿ ಮತ್ತು ಶ್ರೀ ಶೈಲಾಶ್ರೀ ಶೇಖರ್
ಅಮೇರಿಕಾ ಇವರಿಂದ
ವಿದ್ಯಾನಿಧಿಗೆ 50,000ರೂಗಳ ದೇಣಿಗೆ

ಹೆಸರು ಪ್ರಕಟಿಸಲು ಬಯಸದ
ದಾನಿಗಳಿಂದ ಕಛೇರಿಯ ಕಂಪ್ಯೂಟರ್
ಖರೀದಿಗೆ 50,000ರೂ ಗಳ ದೇಣಿಗೆ

**ಉದಾರವಾಗಿ ದೇಣಿಗೆ ನೀಡಿದ ಎಲ್ಲ ದಾನಿಗಳಿಗೆ**
**ಮಹಾಸಭೆಯ ಹೃತ್ಪೂರ್ವಕ ಕೃತಜ್ಞತೆಗಳು**

PERIODICAL RATE

VIPRANUDI KANNADA MONTHLY. Postal Regn. No. RNP/KA/BGS/2275/
& RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 17-04-2022 Date of Publishing 9-04-2022

ಶುಭಾಶಯಗಳು

ಡಾ|| ಉದಯ್ ಬಿ. ಗರುಡಾಚಾರ್

ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ



Dr. Uday B. Garudachar

MLA, Chickpet Assembly Constituency

/BGUdayBJP www.udaygarudachar.in

If undelivered please return to :

VIPRANUDI

Akhila Karnataka Brahmana Mahasabha (R.)

"Gayathri Bhavana", No. 3070, 9th Main Road

Gayathri Bhavana Road, (14th Cross) BSK 2nd Stage

BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar